# ಅಗಸ್ತ್ಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

ದಿನಾಂಕ:27–08–2023ರಂದು ಬೆಳಿಗ್ಗೆ 11.00 ಘಂಟೆಗೆ ಕೃಷ್ಣಮೂರ್ತಿಪುರಂ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಜರುಗಿದ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.(ರಿ.)ಯ 28ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು.

*****

**ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ವಿ.ಪಾರ್ಥಸಾರಥಿರವರು ವಹಿಸಿದ್ದರು.**

ಸರ್ವಸದಸ್ಯರ ಸಭೆಯನ್ನು ಬೆಳಿಗ್ಗೆ 11.00 ಘಂಟೆಗೆ ಕರೆಯಲಾಗಿದ್ದು, ಅಗತ್ಯವಿರುವ ಕೋರಂನ್ನು ಪರಿಶೀಲಿಸಿಕೊಂಡು ಬರಲಾಯಿತು. ಸಂಘದ ಪ್ರತಿ ವರ್ಷದ ಕಾರ್ಯಕ್ರಮವಾದ, ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಹಿರಿಯ ಸದಸ್ಯರುಗಳಿಗೆ ಸನ್ಮಾನ ಸಮಾರಂಭವನ್ನು ಬೆಳಿಗ್ಗೆ 9.30 ಗಂಟೆಗೆ ನಿಗದಿಪಡಿಸಲಾಗಿದ್ದು, ಸರ್ವಸದಸ್ಯರ ಸಭೆ ಪ್ರಾರಂಭವಾಗುವ ಮೊದಲು ಸದರಿ ಕಾಯಕ್ರಮವನ್ನು ನಡೆಸಲಾಯಿತು.

**ಸಭೆಯನ್ನು ಪ್ರಾರಂಭಿಸಲು ಅಗತ್ಯವಿರುವ ಕೋರಂ ಬಗ್ಗೆ ಮಾಹಿತಿ ನೀಡಿ ಸಭೆ ನಡೆಸಲು ಅಗತ್ಯ ಕೋರಂ ಇರುವ ಬಗ್ಗೆ ಸದಸ್ಯರುಗಳ ಅನುಮತಿ ಮೇರೆಗೆ, ಅಧ್ಯಕ್ಷರ ಅನುಮತಿ ಪಡೆದು ನಂತರ ಬೆಳಿಗ್ಗೆ 11.30 ಘಂಟೆಗೆ ಶ್ರೀ ಸಿ.ವಿ. ಪಾರ್ಥಸಾರಥಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು.**

ಸದಸ್ಯರಾದ ಶ್ರೀ ಕೆ.ಎನ್. ಶ್ರೀನಿವಾಸಶರ್ಮಾರವರು (ಸ.ಸಂ.4590) ಸಭೆಯ ಪ್ರಾರಂಭದಲ್ಲಿ ವಿಳಂಬವಾಗಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ ತಮ್ಮ ಅಸಮ್ಮತಿಯನ್ನು ದಾಖಲು ಮಾಡಿಕೊಳ್ಳಲು ಸೂಚಿಸಿದರು ಅಧ್ಯಕ್ಷರು ಇದನ್ನು ದಾಖಲಿಸುವಂತೆ ತಿಳಿಸಿದರು. ಸರ್ವಸದಸ್ಯರ ಸಭೆ ತಡವಾಗಿರುವ ಹಿನ್ನೆಲೆಯಲ್ಲಿ, ಪ್ರಭಾರ ಕಾರ್ಯದರ್ಶಿಯವರಾದ ಶ್ರೀಮತಿ ವೀಣಾರವರು ಉತ್ತರಿಸಿ, ಸರ್ವಸದಸ್ಯರ ಸಭೆಗೆ ಮುಂಚಿತವಾಗಿ ನಿಗದಿಪಡಿಸಲಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಂಘದ ಹಿರಿಯ ನಾಗರೀಕ ಸದಸ್ಯರುಗಳಿಗೆ ಸನ್ಮಾನ ಮತ್ತು ಸಂಘದ ಸದಸ್ಯರು ಹಾಗೂ ಕೆ ಆರ್ ಕ್ಷೇತ್ರದ ನೂತನ ಶಾಸಕರಾದ ಸನ್ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸ ಹಾಗೂ ಸಂಘದ ಸದಸ್ಯರು ಮತ್ತು ಮೈಸೂರು ಮಹಾನಗರ ಪಾಲಿಕೆಯ ಆಡಳಿತ ಪಕ್ಷದ ನಾಯಕರು ಆದ ಶ್ರೀ ಮ. ವಿ ರಾಂಪ್ರಸಾದ್‌ರವರಿಗೆ ಸಂಘದ ವತಿಯಿಂದ ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದು, ಕಾರ್ಯಕ್ರಮ ನಡೆಯುತ್ತಿದ್ದುದರಿಂದ ಹಾಗೂ ಸಭೆಗೆ ಅಗತ್ಯವಿರುವ ಕೋರಂನ ಸಂಖ್ಯೆಯನ್ನು ಸಂಗ್ರಹಿಸಿಕೊಂಡು ನಂತರ ಸಭೆಯನ್ನು ಪ್ರಾರಂಭಿಸಲು ವಿಳಂಭವಾಗಿದೆ ಎಂದು ವಿವರ ನೀಡಿದರು.

ಸಭೆಯನ್ನು ಪ್ರಾರಂಭಿಸಲು ಅಗತ್ಯವಿರುವ ಕೋರಂ ಬಗ್ಗೆ ಮಾಹಿತಿ ನೀಡಿ ಸಭೆ ನಡೆಸಲು ಅಗತ್ಯ ಕೋರಂ ಇರುವ ಬಗ್ಗೆ ಸದಸ್ಯರುಗಳ ಅನುಮತಿ ಮೇರೆಗೆ, ಅಧ್ಯಕ್ಷರ ಅನುಮತಿ ಪಡೆದು ನಂತರ ಬೆಳಿಗ್ಗೆ 11.30 ಘಂಟೆಗೆ ಶ್ರೀ ಸಿ.ವಿ. ಪಾರ್ಥಸಾರಥಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು.

**ಕೋರಂಗೆ ಅವಶ್ಯಕವಾದ ಸದಸ್ಯರ ಸಂಖ್ಯೆ:615**
**ಹಾಜರಿದ್ದ ಸದಸ್ಯರ ಸಂಖ್ಯೆ: 1557**

1. **ಪ್ರಾರ್ಥನೆ:** ಕುಮಾರಿ ಶ್ರೀವಲ್ಲಿ ಪ್ರಸಾದ್‌ರವರ ಸುಶ್ರಾವ್ಯವಾದ ಪ್ರಾರ್ಥನೆಯೊಂದಿಗೆ ಮಹಾಸಭೆಯ ಕಾರ್ಯಕಲಾಪಗಳು ಪ್ರಾರಂಭವಾಯಿತು.
2. **ಸಾಮೂಹಿಕ ಶಾಂತಿ ಮಂತ್ರ:** ಸಭೆಯಲ್ಲಿದ್ದ ಎಲ್ಲರೂ ಸಾಮೂಹಿಕ ಶಾಂತಿಮಂತ್ರ ಪಠಣೆಯಲ್ಲಿ ಶ್ರದ್ಧಾಪೂರ್ವಕವಾಗಿ ಭಾಗವಹಿಸಿ, ಅಗಸ್ತ್ಯ ಮಹಾಮುನಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ನಂತರ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರುಗಳಿಂದ ಜ್ಯೋತಿಯನ್ನು ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಪ್ರಭಾರ ಕಾರ್ಯದರ್ಶಿಯವರಾದ ಶ್ರೀಮತಿ ವೀಣಾರವರು ಮಾತನಾಡಿ, ನಿರ್ದೇಶಕರಾದ ಶ್ರೀ ಬಾಲಕೃಷ್ಣರವರು ಜರ್ಮನಿಯಲ್ಲಿರುವ ತಮ್ಮ ಮಗಳ ಮನೆಗೆ ತೆರಳಿದ್ದು, ಸದರಿಯವರ ಗೈರುಹಾಜರಿ ಬಗ್ಗೆ ನೀಡಿರುವ ಪತ್ರವನ್ನು, ನಿರ್ದೇಶಕರಾದ ಶ್ರೀಮತಿ ಎಸ್ ರಾಜಮ್ಮರವರು ತಮಗೆ ಕಣ್ಣಿನ ಶಸ್ತ್ರಚಿಕಿತ್ಸೆಯಾಗಿದ್ದು ಸರ್ವಸದಸ್ಯರ ಸಭೆಗೆ ಹಾಜರಾಗಲು ಸಾಧ್ಯವಿಲ್ಲವೆಂದು ನೀಡಿರುವ ಪತ್ರವನ್ನು ಮತ್ತು ನಿರ್ದೇಶಕರಾದ ಶ್ರೀ ಎಸ್.ಎನ್. ನಾಗಶಂಕರ್‌ರವರಿಗೆ ಶಸ್ತ್ರಚಿಕಿತ್ಸೆಯಾಗಿದ್ದು, ಸಭೆಗೆ ಹೊರಟಿದ್ದು, ಅನಾರೋಗ್ಯದಿಂದ ಬರಲು ಸಾಧ್ಯವಾಗುತ್ತಿಲ್ಲ ಎಂದು ಅಧ್ಯಕ್ಷರಿಗೆ ಇಂದು ದೂರವಾಣಿ ಕರೆ ಮಾಡಿ ತಿಳಿಸಿರುವ ವಿಷಯವನ್ನು ಹಾಗೂ ಈ ಮೂರು ನಿರ್ದೇಶಕ ಮಂಡಲಿ ಸದಸ್ಯರ ಗೈರು

ಹಾಜರಿಗೆ ಅನುಮತಿ ಪಡೆದ ಗೈರು ಹಾಜರಿ ಎಂದು ಪರಿಗಣಿಸಿ ಅನುಮೋದನೆ ನೀಡಬೇಕೆಂದು ಸರ್ವಸದಸ್ಯರ ಸಭೆಯಲ್ಲಿ ಮನವಿ ಮಾಡಿದರು. ಇದಕ್ಕೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಪ್ರಭಾರ ಕಾರ್ಯದರ್ಶಿಯವರು ಮುಂದುವರೆದು ಮಾತನಾಡಿ ನಿರ್ದೇಶಕರಾದ ಶ್ರೀಮತಿ ಸೌಮ್ಯರವರಿಗೆ ಅಪಘಾತವಾಗಿದ್ದು, ಸರ್ವಸದಸ್ಯರ ಸಭೆಯಲ್ಲಿ ವೇದಿಕೆ ಮೇಲೆ ನಿರಂತರವಾಗಿ ಕುಳಿತುಕೊಳ್ಳಲು ಕಷ್ಟವಾಗಿರುವುದರಿಂದ ಮಧ್ಯೆ ವಿಶ್ರಾಂತಿ ಪಡೆಯಲು ಅನುಮತಿ ಕೋರಿದರು. ಸಭೆಯಲ್ಲಿ ಇದಕ್ಕೆ ಅನುಮತಿ ನೀಡಲಾಯಿತು.

**3. ಸ್ವಾಗತ ಭಾಷಣ:**

ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್.ಎಸ್. ಪ್ರಶಾಂತ್ ತಾತಾಚಾರ್‌ರವರು ಸ್ವಾಗತ ಭಾಷಣವನ್ನು ಮಾಡುತ್ತಾ, ವೇದಿಕೆ ಮೇಲೆ ಆಸೀನರಾಗಿರುವ ಸಂಘದ ಅಧ್ಯಕ್ಷರು, ಖಜಾಂಚಿಗಳಿಗೆ ಹಾಗೂ ಎಲ್ಲಾ ನಿರ್ದೇಶಕರುಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು. ಸರ್ವಸದಸ್ಯರ ಸಭೆಗೆ ಹಾಜರಿರುವ ಸಂಘದ ಎಲ್ಲ ಸದಸ್ಯರುಗಳು, ಆಂತರಿಕ ಲೆಕ್ಕಪರಿಶೋಧಕರಾದ ಶ್ರೀ ವ್ಮಧುಸೂಧನ್, ಕಾನೂನು ಸಲಹೆಗಾರರಾದ ಶ್ರೀ ಶಶಿಧರ್, ಶ್ರೀ ಕೆ ಟಿ ಸ್ವಾಮಿ, ಶ್ರೀ ಎಂ ಎನ್ ಶ್ರೀನಿವಾಸ್ ಮತ್ತು ಶ್ರೀ ಡಿ ಬಿ ಜೋಷಿರವರಿಗೆ ಸ್ವಾಗತವನ್ನು ಕೋರಿದರು. ಇಂದಿನ ಕಾರ್ಯಕ್ರಮದ ನಿರ್ವಹಣೆಗೆ ಶ್ರಮಿಸಿರುವ ಪ್ರಭಾರ ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರಿಗೆ ಸ್ವಾಗತ ಕೋರಿದರು ಮತ್ತು ಸಭೆ ನಡೆಯಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ಎಲ್ಲರಿಗೂ ಸ್ವಾಗತ ಕೋರಿದ ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್‌ರವರನ್ನು ಸಂಘದ ಅಧ್ಯಕ್ಷರು ಸ್ವಾಗತಿಸಿದರು.

**4. ಪ್ರತಿಭಾ ಪುರಸ್ಕಾರ ಮತ್ತು ರಾಜ್ಯ/ರಾಷ್ಟ್ರ ಪ್ರಶಸ್ತಿ ಪುರಸ್ಕೃತರಿಗೆ, ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ:**

ದಿನಾಂಕ:**27/08/2023ರಂದು ಭಾನು**ವಾರ ಬೆಳಿಗ್ಗೆ 9.30 ಗಂಟೆಗೆ ನಗರದ ಕೃಷ್ಣಮೂರ್ತಿಪುರಂ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿಯವರ ಅಧ್ಯಕ್ಷತೆಯಲ್ಲಿ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಂಘದ ಹಿರಿಯ ನಾಗರೀಕ ಸದಸ್ಯರಿಗೆ ಹಾಗೂ ರಾಜ್ಯ/ರಾಷ್ಟ್ರ ಪ್ರಶಸ್ತಿ ವಿಜೇತರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿವರ ಈ ಕೆಳಗಿನಂತೆ:

**ಪ್ರಾರ್ಥನೆ:** ಶ್ರೀಮತಿ ರೇಖಾರವರು ವಿಘ್ನ ವಿನಾಶಕ ಗಜಾನನ ಪ್ರಾರ್ಥನೆಯೊಂದಿಗೆ ಅಗಸ್ತ್ಯಮುನಿಗಳ ಭಾವಚಿತ್ರಕ್ಕೆ ಪುಷ್ಪವನ್ನು ಸಮರ್ಪಿಸಿ, ದೇವರಿಗೆ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು

**ಸ್ವಾಗತ ಭಾಷಣ:** ಸಂಘದ ನಿರ್ದೇಶಕರಾದ ಶ್ರೀ ಕೆ ನಾಗರಾಜರವರು ಸ್ವಾಗತ ಭಾಷಣವನ್ನು ಮಾಡುತ್ತಾ, ವೇದಿಕೆ ಮೇಲೆ ಆಸೀನರಾಗಿರುವ ಸಂಘದ ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿ, ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್, ಖಜಾಂಚಿಗಳಾದ ಶ್ರೀ ಎಂ ಡಿ ಗೋಪಿನಾಥ್, ನಿರ್ದೇಶಕರುಗಳಾದ ಶ್ರೀಯುತರಾದ ಪ್ರೀತನ್ ಎಂ ಆರ್, ಪಣಿರಾಜ್ ಎನ್, ರಂಗನಾಥ್ ಎನ್ ಎಸ್, ಅರುಣ್ ಕೆ ಎನ್, ನಾಗೇಂದ್ರ, ಶ್ರೀಮತಿ ರೇಖಾ, ಶ್ರೀಮತಿ ಸೌಮ್ಯ ಎಂ ಎನ್, ಶ್ರೀ ಜಿ ಎನ್ ಸತೀಷರವರಿಗೆ, ಪ್ರಭಾರ ಕಾರ್ಯದರ್ಶಿಯವರಿಗೆ, ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿದರು. ಸನ್ಮಾನಿತರಾಗಲು ಆಮಂತ್ರಿತರಾಗಿರುವ ಶಾಸಕರಾದ ಸನ್ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸರವರಿಗೆ ಹಾಗೂ ಮೈಸೂರು ಮಹಾನಗರ ಪಾಲಿಕೆ ಸದಸ್ಯರು, ಪಾಲಿಕೆ ಆಡಳಿತ ಪಕ್ಷದ ನಾಯಕರಾದ ಮಾನ್ಯ ಶ್ರೀ ಮ ವಿ ರಾಂಪ್ರಸಾದ್ ಇವರುಗಳನ್ನು ಗೌರವ ಪೂರ್ವಕವಾದ ಸ್ವಾಗತವನ್ನು ಕೋರಿದರು. ಸಂಘದ ಹಿರಿಯ ಸದಸ್ಯರಿಗೆ, ರಾಜ್ಯ/ರಾಷ್ಟ್ರ ಪ್ರಶಸ್ತಿ ಪುರಸ್ಕೃತರಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಅವರ ಪೋಷಕರಿಗೂ ಆತ್ಮೀಯ ಸ್ವಾಗತವನ್ನು ಕೋರಿದರು.

**ಪ್ರತಿಭಾ ಪುರಸ್ಕಾರ:** ನಿರ್ದೇಶಕರಾದ ಶ್ರೀ ಎನ್ ಪಣಿರಾಜ್‌ರವರು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಅಂಕಗಳನ್ನು ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರುಗಳ ಹೆಸರುಗಳನ್ನು, ಪಡೆದ ಶೇಕಡಾವಾರು ಅಂಕಗಳನ್ನು ಹಾಗೂ ಅವರ ಪೋಷಕರುಗಳ ವಿವರಗಳುಳ್ಳ ಪಟ್ಟಿಯನ್ನು ಓದುತ್ತಾ ಹೋದಂತೆ, ಪ್ರತಿಯೊಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಯರೂ ತಮ್ಮ ಪೋಷಕರೊಂದಿಗೆ ವೇದಿಕೆಗೆ ಬಂದು ಕೃಷ್ಣರಾಜ ಕ್ಷೇತ್ರದ ನೂತನ ಶಾಸಕರಾದ ಸನ್ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸರವರು, ಮೈಸೂರು ಮಹಾನಗರಪಾಲಿಕೆ ಸದಸ್ಯರಾದ ಶ್ರೀ ಮ ವಿ ರಾಂಪ್ರಸಾದ್, ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಲಿ ಸದಸ್ಯರಿಂದ 18 ವಿದ್ಯಾರ್ಥಿ/ವಿಧ್ಯಾರ್ಥಿನಿಯರು ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸಿದರು.

ನಿರ್ದೇಶಕರಾದ ಶ್ರೀ ಕೆ ಎನ್ ಅರುಣ್‌ರವರು ಪಿ.ಯು.ಸಿ. ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಅಂಕಗಳನ್ನು ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರುಗಳ ಹೆಸರುಗಳನ್ನು, ಪಡೆದ ಶೇಕಡಾವಾರು ಅಂಕಗಳನ್ನು ಹಾಗೂ ಅವರ ಪೋಷಕರುಗಳ ವಿವರಗಳುಳ್ಳ ಪಟ್ಟಿಯನ್ನು ಓದುತ್ತಾ ಹೋದಂತೆ, ಪ್ರತಿಯೊಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಯರೂ ತಮ್ಮ ಪೋಷಕರೊಂದಿಗೆ ವೇದಿಕೆಗೆ ಬಂದು ಕೃಷ್ಣರಾಜ ಕ್ಷೇತ್ರದ ನೂತನ ಶಾಸಕರಾದ ಸನ್ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸರವರು, ಮೈಸೂರು ಮಹಾನಗರಪಾಲಿಕೆ ಸದಸ್ಯರಾದ ಶ್ರೀ ಮ ವಿ ರಾಂಪ್ರಸಾದ್, ಸಂಘದ ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಲಿ ಸದಸ್ಯರಿಂದ **P.U.C-21** ವಿದ್ಯಾರ್ಥಿ/

ವಿದ್ಯಾರ್ಥಿನಿಯರುಗಳು, Diploma -1 ವಿದ್ಯಾರ್ಥಿ/ ವಿದ್ಯಾರ್ಥಿನಿಯರು, ಕರ್ನಾಟಕ ಶಾಸ್ತ್ರಿಯ ಸಂಗೀತ (ಜೂನಿಯರ್ ವಿಭಾಗ)–1 ವಿದ್ಯಾರ್ಥಿ, ರಾಜ್ಯಮಟ್ಟದ ಯೋಗಾಸನ ಸ್ಪರ್ಧೆ 1 ವಿದ್ಯಾರ್ಥಿ ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸಿದರು.
ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ನಂತರ ಸಂಘದ ಕೃಷ್ಣರಾಜ ಕ್ಷೇತ್ರದ ನೂತನ ಶಾಸಕರಾದ ಸನ್ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸರವರು, ಮೈಸೂರು ಮಹಾನಗರಪಾಲಿಕೆ ಸದಸ್ಯರಾದ ಶ್ರೀ ಮ ವಿ ರಾಂಪ್ರಸಾದ್ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಸಿವಿ ಪಾರ್ಥಸಾರಥಿಯವರು ಸಭೆಯನುದ್ದೇಶಿಸಿ ಮಾತನಾಡಿ ಸಭೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರ ಮಕ್ಕಳನ್ನು ಶ್ಲಾಘಿಸಿದರು.
**ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ:** ಸಂಘದ ನಿರ್ದೇಶಕರಾದ ಶ್ರೀ ನಾಗೇಂದ್ರರವರು ಹಿರಿಯ ಸದಸ್ಯರಿಗೆ ಕೃಜ್ಞತೆಗಳನ್ನು ಸಲ್ಲಿಸುತ್ತಾ ವಿವರಗಳನ್ನು ತಿಳಿಸಿದರು.

1. ಶ್ರೀ ಬಿ ಎಸ್ ವಿಠಲ್ ಸದಸ್ಯತ್ವದ ಸಂಖ್ಯೆ : 3600
2. ಶ್ರೀ ನಟರಾಜ್ ಟಿ ಆರ್ ಸದಸ್ಯತ್ವದ ಸಂಖ್ಯೆ : 3101
3. ಶ್ರೀಮತಿ ಜೆ ವಾಣಿಕಿಷನ್ ಸದಸ್ಯತ್ವದ ಸಂಖ್ಯೆ : 1524
4. ಶ್ರೀಮತಿ ಎಸ್ ಲಕ್ಷಮ್ಮ ಸದಸ್ಯತ್ವದ ಸಂಖ್ಯೆ :402
5. ಶ್ರೀಮತಿ ರತ್ನಬಾಯಿ ಸದಸ್ಯತ್ವದ ಸಂಖ್ಯೆ : 317
6. ಶ್ರೀಮತಿ ನಾಗಮ್ಮ ಸದಸ್ಯತ್ವದ ಸಂಖ್ಯೆ : 1030

**5. ಸಂಘದ ಸದಸ್ಯರು, ನೂತನವಾಗಿ ಆಯ್ಕೆಯಾದ ಕೆ ಆರ್ ವಿಧಾನಸಭಾ ಕ್ಷೇತ್ರದ ಶಾಸಕರು ಆದ ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸರವರಿಗೆ ಸಂಘದ ವತಿಯಿಂದ ಗೌರವ ಪೂರ್ವಕ ಸನ್ಮಾನ ಕಾರ್ಯಕ್ರಮ:**

**ಸನ್ಮಾನ ಕಾರ್ಯಕ್ರಮ:**ಅಧ್ಯಕ್ಷರು ಮತ್ತು ಆಡಳಿತ ಮಂಡಲಿ ಸದಸ್ಯರು ಸಂಘದ ಪ್ರಾರಂಬಿಕ ಸದಸ್ಯರು ಮತ್ತು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾದ ಮಾನ್ಯ ಶ್ರೀ ಟಿ ಎಸ್ ಶ್ರೀವತ್ಸ ಹಾಗೂ ಸಂಘದ ಸದಸ್ಯರು ಮತ್ತು ಮೈಸೂರು ಮಹಾನಗರ ಪಾಲಿಕೆ ಸದಸ್ಯರು, ಮಹಾನಗರ ಪಾಲಿಕೆ ಆಡಳಿತ ಪಕ್ಷದ ನಾಯಕರಾದ ಶ್ರೀ ಮ ವಿ ರಾಂಪ್ರಸಾದ್‌ರವರಿಗೆ ಸಂಘದ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರು ಮತ್ತು ಸಂಘದ ಸದಸ್ಯರ ಪರವಾಗಿ ಗೌರವಾನ್ವಿತವಾಗಿ ಸನ್ಮಾನವನ್ನು ನೆರವೇರಿಸಲಾಯಿತು. ವಿವರ ಈ ಕೆಳಗಿನಂತೆ:

ಹೆಸರು : ಶ್ರೀವತ್ಸ ಟಿ ಎಸ್, ಶಾಸಕರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ
ಸದಸ್ಯತ್ವದ ಸಂಖ್ಯೆ : 223
ತಂದೆ ಹೆಸರು : ಲೇಟ್ ಟಿ ಎನ್ ಶ್ರೀನಿವಾಸ್ ತಾತಾಚಾರ್
ತಾಯಿ ಹೆಸರು : ಲೇಟ್ ಶ್ರೀಮತಿ ರಂಗಲಕ್ಷ್ಮಿ
ಹುಟ್ಟಿದ ದಿನಾಂಕ : 03/11/1966
ವಿದ್ಯಾಭ್ಯಾಸ : ಬಿ.ಕಾಂ.
ಉದ್ಯೋಗ/ವೃತ್ತಿ : ಸ್ವಂತವಾಗಿ ಸ್ವತಂತ್ರ ಉದ್ಯಮ ನಡೆಸುತ್ತಿದ್ದಾರೆ.

ಹೆಸರು: ಮ. ವಿ ರಾಮಪ್ರಸಾದ್, ಮೈಸೂರು ಮಹಾ ನಗರಪಾಲಿಕೆ ಸದಸ್ಯರು
ಹುಟ್ಟಿದ ಸ್ಥಳ: ಹೆಚ್.ಡಿ. ಕೋಟೆ, ಮಗ್ಗೆ ಗ್ರಾಮದಲ್ಲಿ
ತಂದೆ : ವೆಂಕಟಸುಬ್ಬಯ್ಯ
ತಾಯಿ: ಕೃಷ್ಣವೇಣಿ
ವಿದ್ಯಾಭ್ಯಾಸ: ಎಂ ಎ., ಕನ್ನಡ

**ವಂದನಾರ್ಪಣೆ:** ಸಂಘದ ನಿರ್ದೇಶಕರಾದ ಶ್ರೀ ಕೆ ನಾಗರಾಜರವರು ಕಾರ್ಯಕ್ರಮದ ಕೊನೆಗೆ ಮಾತನಾಡಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು ಹಾಗೂ ಎಲ್ಲಾ ನಿರ್ದೇಶಕ ಮಂಡಲಿ ಸದಸ್ಯರಿಗೂ, ವಿಶೇಷ ಆಮಂತ್ರಿತರಾಗಿ ಆಗಮಿಸಿರುವ ಸನ್ಮಾನಿತರಾದ ಶಾಸಕರಾದ ಶ್ರೀ ಟಿ ಎಸ್ ಶ್ರೀವತ್ಸರವರಿಗೆ ಹಾಗೂ ಮಾ ವಿ ರಾಂಪ್ರಸಾದ್ ಮಹಾನಗರ ಪಾಲಿಕೆ ಸದಸ್ಯರು, ಮಹಾನಗರ ಪಾಲಿಕೆ ಆಡಳಿತ ಪಕ್ಷದ ನಾಯಕರು, ಪ್ರತಿಭಾ ಪುರಸ್ಕಾರಕ್ಕೆ ಭಾಜನರಾದ ಮಕ್ಕಳಿಗೆ ಹಾಗೂ ಅವರ ಪೋಷಕರಿಗೆ, ಸಂಘದ ಆಮಂತ್ರಣವನ್ನು ಒಪ್ಪಿ ಕಾರ್ಯಕ್ರಮಕ್ಕೆ ಹಾಜರಿದ್ದು, ಸನ್ಮಾನ ಸ್ವೀಕರಿಸಿದ ಹಿರಿಯ ನಾಗರೀಕ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು.

**6. 28ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು ಮತ್ತು ಮುದ್ರಣ ದೋಷದ ಬಗ್ಗೆ:**

28ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಪ್ರಭಾರ ಕಾರ್ಯದರ್ಶಿಯವರಾದ ಶ್ರೀಮತಿ ವೀಣಾರವರು ಸಭೆಗೆ ಓದಿ ತಿಳಿಸಿರುವುದನ್ನು ಸಭಾ ನಡವಳಿಯಲ್ಲಿ ದಾಖಲಿಸಲಾಯಿತು. ಈ ಕೆಳಗೆ ತಿಳಿಸಿರುವ ಮುದ್ರಣ ದೋಷವನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು.

<table>
<tr><th>ಕ್ರ.ಸಂ</th><th>ಪುಟ ಸಂಖ್ಯೆ</th><th>ವಿವರ</th></tr>
<tr><td>1</td><td>ಮುಖ ಪುಟ</td><td>2022–23ನೇ ಸಾಲಿನ ವಾರ್ಷಿಕ ವರದಿ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು</td></tr>
<tr><td>2</td><td>ನಿರ್ದೇಶಕರ ಭಾವಚಿತ್ರದ ಮುಂದಿನ ಪುಟ Multi colour ಮೂರನೇ ಸಾಲು</td><td>ವೈದ್ಯ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಂಘದ ಸದಸ್ಯರಿಗೆ ಸನ್ಮಾನ</td></tr>
<tr><td>3</td><td>ಪುಟ ಸಂಖ್ಯೆ:3ರಲ್ಲಿ ಕ್ರಮ ಸಂಖ್ಯೆ:15</td><td>ಸಹಕಾರ ಸಂಘಗಳ ಕಾಯಿದೆ ಕಲಂ 58ರ ರೀತ್ಯ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು</td></tr>
<tr><td rowspan="10">4</td><td colspan="2">ಪುಟ ಸಂಖ್ಯೆ 12</td></tr>
<tr><td colspan="2">6 ವರ್ಷದ ಮೇಲ್ಪಟ್ಟು ಶಾಖಾ ಕಛೇರಿಯ ವಿದ್ಯಾಭ್ಯಾಸ ಸಾಲ 1 ಖಾತೆಯ ಬದಲಾಗಿ 4 ಖಾತೆ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು</td></tr>
<tr><td colspan="2">ಒಟ್ಟು ಸುಸ್ತಿ ಸಾಲದ ಮೊತ್ತ</td></tr>
<tr><td>ಖಾತೆಗಳು</td><td>ಮೊತ್ತ</td></tr>
<tr><td>107</td><td>25,68,980.00</td></tr>
<tr><td>48</td><td>13,68,061.00</td></tr>
<tr><td>38</td><td>18,70,293.00</td></tr>
<tr><td>179</td><td>36,50,591.00</td></tr>
<tr><td>20</td><td>73,004.00</td></tr>
<tr><td>ಒಟ್ಟು 392</td><td>95,30,929.00</td></tr>
<tr><td>5</td><td>ಪುಟ ಸಂಖ್ಯೆ:31</td><td>ಕ್ರ.ಸಂ.5) <u>ಇತರೆ ಆಡಳಿತ ನಿರ್ವಹಣಾ ವೆಚ್ಚಗಳು</u>:ಪಹರೆ ಮತ್ತು ರಕ್ಷಣೆ (ಹೊರಗುತ್ತಿಗೆ ಸಿಬ್ಬಂದಿ ವೆಚ್ಚ ಎಂದು ಇರುವುದನ್ನು ತೆಗೆದುಹಾಕಿ ಪಹರೆ ಮತ್ತು ರಕ್ಷಣೆ) ಎಂದು ತಿದ್ದುಪಡಿ ಮಾಡಿಕೊಳ್ಳುವುದು.</td></tr>
<tr><td>6</td><td>ಪುಟ ಸಂಖ್ಯೆ:36</td><td><u>ಅಧ್ಯಾಯ – 11 ಬೈಲಾ ಸಂಖ್ಯೆ –66(ಬಿ) 1 ವಾಹನ ಸಾಲ:</u> ಬಡ್ಡಿ ದರ:ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಎಂದು ತಿದ್ದುಪಡಿ ಮಾಡಿಕೊಳ್ಳುವುದು. <u>66(ಬಿ) 7 ಚಿನ್ನದ ಮತ್ತು ಬೆಳ್ಳಿ ಸಾಲ</u> ಬಡ್ಡಿದರ:ಆಡಳಿತ ಮಂಡಲಿ ಕಾಲ ಕಾಲಕ್ಕೆ ನಿರ್ಧರಿಸಿದಂತೆ ಎಂದು ತಿದ್ದುಪಡಿ ಮಾಡಿಕೊಳ್ಳುವುದು.</td></tr>
</table>

ಸದಸ್ಯರಾದ ಶ್ರೀ ಕೆ.ಎನ್. ಶ್ರೀನಿವಾಸ ಶರ್ಮಾರವರು ಮಾತನಾಡಿ, ಈ ಎಲ್ಲಾ ಮುದ್ರಣ ದೋಷಗಳೊಂದಿಗೆ, 3ನೇ ಪುಟದ ಕಾರ್ಯಕ್ರಮ ಪಟ್ಟಿಯ ಕ್ರ.ಸಂ.9ರಲ್ಲಿ 2022–23ನೇ ಸಾಲಿನ ಆಡಳಿತ ಮಂಡಳಿಯ ವರದಿ 'ಮಂಡನೆ ಮತ್ತು ಅನುಮೋದನೆ' ಎಂದು ಸೇರಿಸಿಕೊಳ್ಳಬೇಕೆಂದು ಸೂಚಿಸಿದರು. ಹಾಗೂ ವಿಷಯ ಸಂಖ್ಯೆ:15 ಕ್ಕೆ ಕಾನೂನು ಸಲಹೆಗಾರರ ಮತ್ತು ಇಲಾಖೆಯಲ್ಲಿ ಸಲಹೆ ಪಡೆದು ತಿದ್ದುಪಡಿ ಮಾಡಿಕೊಳ್ಳಲು ತಿಳಿಸಿರುತ್ತೇನೆ ಎಂದು ತಿಳಿಸಿದರು. ಪ್ರಭಾರ ಕಾರ್ಯದರ್ಶಿಯವರು ಇದಕ್ಕೆ ಉತ್ತರಿಸಿ ಇಲಾಖೆಯಲ್ಲಿ ಮಾಹಿತಿ ಪಡೆದು ತಿದ್ದುಪಡಿಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಈ

ಸಲಹೆಯನ್ನೊಳಗೊಂಡಂತೆ ಮೇಲಿನ ಎಲ್ಲಾ ಮುದ್ರಣ ದೋಷಗಳನ್ನು ತಿದ್ದುಪಡಿಗೆ ಪರಿಗಣಿಸಿಕೊಂಡು, ತಿದ್ದುಪಡಿಮಾಡಿಕೊಳ್ಳಲು ಎಲ್ಲರ ಪರವಾಗಿ, ಸದಸ್ಯರಾದ ಶ್ರೀ ಶ್ರೀನಿವಾಸ್ ದೇಶಿಕಾಚಾರ್‌ರವರ ಸೂಚನೆಯನ್ವಯ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

**7. ದೈವಾಧೀನರಾದ ಸದಸ್ಯರುಗಳಿಗೆ ಗೌರವಾರ್ಥವಾಗಿ ಸಂತಾಪ ಸೂಚನೆ:**

ನಂತರ 2022–23ನೇ ಸಾಲಿನ ವರ್ಷದಲ್ಲಿ ಮೃತರಾದ ಸದಸ್ಯರುಗಳ ಹೆಸರುಗಳಿರುವ ಈ ಕೆಳಗಿನ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ನಾಗೇಂದ್ರರವರು ಓದಿದರು. ಮೃತರಾದ ಎಲ್ಲ ಸದಸ್ಯರ ಆತ್ಮಗಳಿಗೆ ಶಾಂತಿ ಕೋರುವ ಸಂಕೇತವಾಗಿ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಅಲ್ಲದೆ ಸಂಸ್ಥೆಯ ಗಮನಕ್ಕೆ ಬಾರದೇ ಇರುವ ಮೃತ ಸದಸ್ಯರ ಆತ್ಮಗಳಿಗೂ ಶ್ರದ್ಧಾಂಜಲಿ ಸಲ್ಲಿಸಲಾಯಿತು.

**2022–23ನೇ ಸಾಲಿನ ದೈವಾಧೀನರಾದ ಸದಸ್ಯರ ಪಟ್ಟಿ**

| ಕ್ರ ಸಂ | ಸದಸ್ಯತ್ವದ ಸಂಖ್ಯೆ | ಸದಸ್ಯರ ಹೆಸರು | ಕ್ರ ಸಂ | ಸದಸ್ಯತ್ವದ ಸಂಖ್ಯೆ | ಸದಸ್ಯರ ಹೆಸರು |
|---|---|---|---|---|---|
| 1 | 636 | ನರಸಿಂಹಮೂರ್ತಿ ಜಿ | 30 | 50177 | ಮಂಜುನಾಥ |
| 2 | 3917 | ಛಾಯದೇವಿ | 31 | 1586 | ಮೀರಾ ದೊರೈರಾಜ್ |
| 3 | 2678 | ವಸುಂಧರಮ್ಮ | 32 | 1555 | ಮಾಧವ್ ಶ್ಯಾಂ ಆಳ್ವಾರ್ |
| 4 | 1896 | ಮಂಜುಳಾ ವಿ | 33 | 510 | ಮಧುಸೂದನ್ ಕೆ ಎಲ್ |
| 5 | 910 | ರಮೇಶ್‌ಮೂರ್ತಿ ವಿ | 34 | 912 | ಉಷಾ ಮಾಧವ್ ಆಳ್ವಾರ್ |
| 6 | 2192 | ಸುಶೀಲಾ ಬಾಯಿ ಎನ್ | 35 | 7327 | ಪ್ರೇಮಎನ್ |
| 7 | 5798 | ಸ್ವರ್ಣಾ ಬಿ | 36 | 574 | ಶ್ರೀನಿವಾಸರಾವ್ ವಿ |
| 8 | 4419 | ಪ್ರಮಿಳಾದೇವಿ ಎಸ್ ಕೆ | 37 | 6118 | ಸೀತಮ್ಮ ಹೆಚ್ ಆರ್ |
| 9 | 5514 | ಶೇಷಾದ್ರಿ ಜಿ ಆರ್ | 38 | 961 | ನಿರ್ಮಲಾದೇವಿ ಕೆ ಎಸ್ |
| 10 | 5558 | ಚಂದ್ರಮೌಳಿ ಎಸ್ | 39 | 352 | ಮಧುಸೂಧನರಾವ್ ಎನ್ |
| 11 | 4803 | ಬದ್ರಿನಾರಾಯಣರಾವ್ ಎಸ್ | 40 | 6693 | ರಾಜೀವ ಲೋಚನಾ ಆರ್ |
| 12 | 4266 | ನಾಗರಾಜು ಬಿ ವಿ | 41 | 1159 | ಸುಮಾ ಜಿ ಬಿ |
| 13 | 50241 | ರಮೇಶ್‌ಎಸ್ ಪಿ | 42 | 1154 | ಬಾಲಕೃಷ್ಣನ್ ಜಿ ಟಿ |
| 14 | 5089 | ಸತೀಶ್‌ಕುಮಾರ್ ಹೆಚ್ | 43 | 6245 | ಕೆಂಪನಂಜಮ್ಮ ಎನ್ |
| 15 | 6412 | ಶಿವರಾಮಯ್ಯ ಎಂ | 44 | 2096 | ವಿಜಯಲಕ್ಷ್ಮಿ ಹೆಚ್ ಎಸ್ |
| 16 | 7159 | ವಿನಾಯಕ ಎಸ್ | 45 | 7053 | ನಾರಾಯಣ ಎಸ್ ಆರ್ |
| 17 | 3909 | ವಿಮಲ | 46 | 3829 | ಕೃಷ್ಣಮೂರ್ತಿ ಬಿ ಎಲ್ |
| 18 | 749 | ಶಾಮಣ್ಣ | 47 | 50388 | ಶಿವಯ್ಯ |
| 19 | 1214 | ಗೋವಿಂದರಾಜು ಎಂ ವಿ | 48 | 3884 | ಶ್ರೀಕಂಠಯ್ಯ ಎ |
| 20 | 1855 | ಶೇಷಾಚಲಂ ಎಂ | 49 | 161 | ಶ್ರೀರಾಂ ಎಸ್ |
| 21 | 4381 | ಅನ್ನಪೂರ್ಣ ಎಂ ಎಲ್ | 50 | 1150 | ಸುಂದರರಾಜನ್ ಕೆ |
| 22 | 3534 | ಭಟ್ಟಾಚಾರ್ಯ | 51 | 2901 | ಪುಷ್ಪ |
| 23 | 4951 | ಗೋಪಾಲ ಎಸ್ ಆರ್ | 52 | 3111 | ಗಾಯಿತ್ರಿ ಎಸ್ |
| 24 | 6567 | ಶ್ರೀನಿವಾಸ್‌ರಾವ್ ಎನ್ | 53 | 4991 | ಬಾಲಕೃಷ್ಣ |
| 25 | 7676 | ಶಶಿಧರ ಎಂ ಎಸ್ | 54 | 2360 | ನಾಗಸುಂದರ ಎ |
| 26 | 7634 | ಸುಮ | 55 | 2905 | ಸುಧಾ ಎಂ ಎನ್ |
| 27 | 2413 | ರವಿಶಂಕರ್ ಎ | 56 | 50623 | ನಾಗಪ್ರಸನ್ನ ವಿ |
| 28 | 2532 | ಅನಸೂಯ ಗುಂಡಪ್ಪ | 57 | 6943 | ಸೂರ್ಯಕುಮಾರಿ ವೈ ವಿ |
| 29 | 6483 | ಪರಿಮಳ | 58 | 1179 | ವರದರಾಜನ್ ಎಂ ವಿ |

**8. 27ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು:**

ಶ್ರೀಮತಿ ರೇಖಾರವರು 27ನೇ ವಾರ್ಷಿಕ ಮಹಾ ಸಭೆಯ ನಡಾವಳಿಗಳನ್ನು ಪುಟವಾರು ತಿಳಿಸುತ್ತಾ ಹೋಗಿದ್ದನ್ನು ಸರ್ವ ಸದಸ್ಯರ ಸಭೆಯಲ್ಲಿ ಶ್ರೀ ಶ್ರೀನಿವಾಸ ಶರ್ಮರವರು ಪುಟಸಂಖ್ಯೆ:7 ರಲ್ಲಿ 2021–22ರ ಲೆಕ್ಕ ಪರಿಶೋಧಿತ ತ:ಖ್ತೆಗಳಿಗೆ ಹಿಂದಿನ ಸಾಲಿನಲ್ಲಿ ನಾನು ಆಕ್ಷೇಪಣೆ ವ್ಯಕ್ತಪಡಿಸಲಾಗಿದ್ದು, ತಾವು ಅದಕ್ಕೆ ಉತ್ತರವನ್ನು ಪೂರ್ಣ ಲೆಕ್ಕ ಪತ್ರಗಳಿಗೆ ಅಸಮ್ಮತಿ ಸೂಚಿಸಲು ಬರುವುದಿಲ್ಲವೆಂದು ತಿಳಿಸಿರುತ್ತೀರಿ. ಸಹಕಾರ ಸಂಘಗಳ ನಿಯಮ 14 ಎ ಜೆ(12)ರ ಪ್ರಕಾರ ಒಬ್ಬ ಸದಸ್ಯನು ತನ್ನ ಅಭಿಪ್ರಾಯವನ್ನು ಸೂಚಿಸಲು ಮುಕ್ತನಾಗಿದ್ದು, ಇದೇ ನಿಯಮ ಉಪನಿಯಮದ ತಿದ್ದುಪಡಿಗೂ ಅನ್ವಯವಾಗುತ್ತದೆ ಹಾಗೂ ಪುಟ ಸಂಖ್ಯೆ:10ಕ್ಕೂ ನನ್ನ ಅಸಮ್ಮತಿ ದಾಖಲಿಸದೇ ಇರುವುದಕ್ಕೆ ಆಕ್ಷೇಪಣೆ ಇರುತ್ತದೆ ಎಂದು ತಿಳಿಸಿದರು. ಪುಟ ಸಂಖ್ಯೆ: 1 ರಿಂದ 32ಕ್ಕೆ ಅನುಮೋದನೆ ಕೇಳಿದರ ಸಂಬಂಧ ಸದಸ್ಯತ್ವದ ಸಂಖ್ಯೆ: 3385 ಚಂದ್ರಶೇಖರ್ ಸಿ ಎಸ್ ಸೂಚಿಸಿ ಶ್ರೀ ಕೃಷ್ಣಮೂರ್ತಿ ಡಿ ಎನ್ ಸದಸ್ಯತ್ವದ ಸಂಖ್ಯೆ:4083 ಅನುಮೋದಿಸಿದ್ದನ್ನು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**9. 2022–23ನೇ ಸಾಲಿನ ಆಡಳಿತ ಮಂಡಲಿಯ ವರದಿ ಮಂಡನೆ ಮತ್ತು ಅನುಮೋದನೆ:**

ಪ್ರಭಾರ ಕಾರ್ಯದರ್ಶಿಯವರು ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿಯವರು ಈ ವಿಷಯವನ್ನು ಸಭೆಗೆ ಮಂಡಿಸುತ್ತಾರೆ. ಅದಕ್ಕೆ ಮೊದಲು ನಮ್ಮ ಸಂಸ್ಥೆಯ ಅಧ್ಯಕ್ಷರಿಗೆ ಸಹಕಾರ ಕ್ಷೇತ್ರದಲ್ಲಿ ಅತ್ಯುನ್ನತ ಪ್ರಶಸ್ತಿಯಾದ **'ಸಹಕಾರ ರತ್ನ'** ಪ್ರಶಸ್ತಿ ಸಂದಿರುವ ಬಗ್ಗೆ ಸರ್ವಸದಸ್ಯರ ಸಭೆಗೆ ವಿಷಯವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಸರ್ಕಾರದಿಂದ ಸ್ವೀಕರಿಸಲಾದ ಸನ್ಮಾನದ ಮೆಡಲ್‌ಗಳೊಂದಿಗೆ ಸಂಘದ ಪರವಾಗಿ ಗೌರವಿಸಲಾಯಿತು. ಮಾನ್ಯ ಅಧ್ಯಕ್ಷರನ್ನು ಸಭೆಯಲ್ಲಿ ಎಲ್ಲರೂ ಚಪ್ಪಾಳೆ ಮೂಲಕ ಅಭಿನಂದಿಸಿದರು.

ನಂತರ ಅಧ್ಯಕ್ಷರಾದ ಶ್ರೀ ಸಿ.ವಿ.ಪಾರ್ಥಸಾರಥಿರವರು, 2022–23ನೇ ಸಾಲಿನ ಆಡಳಿತ ಮಂಡಲಿಯ ವರದಿಗೆ ಸಭೆಯ ಅನುಮೋದನೆಗಾಗಿ ಮಂಡಿಸಿದರು. ಆದರೆ ಸದಸ್ಯರಾದ ಶ್ರೀ ವಿ.ಎನ್.ಕೃಷ್ಣರವರು (ಸ.ಸಂ.339)ಮಾತನಾಡಿ, ಮಾನ್ಯ ಅಧ್ಯಕ್ಷರಿಗೆ "ಸಹಕಾರ ರತ್ನ" ಪ್ರಶಸ್ತಿ ಪ್ರಧಾನವಾಗಿರುವುದಕ್ಕೆ ಅಭಿನಂದನೆಗಳನ್ನು ತಿಳಿಸುತ್ತಾ, ದಿನಾಂಕ:07/12/2022ರಂದು ಮೈಸೂರಿನ ಶ್ರೀರಾಮಮಂದಿರದಲ್ಲಿ ಜರುಗಿದ ಸನ್ಮಾನ ಸಮಾರಂಭದಲ್ಲಿ ಊಟೋಪಚಾರವನ್ನು ಅದ್ದೂರಿಯಾಗಿ ಮಾಡಲಾಗಿದ್ದು, ಇದಕ್ಕಾಗಿ ತಗಲಿರುವ ವೆಚ್ಚವನ್ನು ಸಂಘದಿಂದ ಭರಿಸಲಾಗಿದೆಯೇ ಎಂಬ ಬಗ್ಗೆ ವಿವರ ಕೇಳಿದರು.

ಅಧ್ಯಕ್ಷರು ಮಾತನಾಡಿ, ಕಳೆದ ವರ್ಷಗಳ ಹಿಂದೆ ಪ್ರವರ್ತಕರು ಮಾಜಿ ಅಧ್ಯಕ್ಷರು ಆದ ಶ್ರೀ ಹೆಚ್ ಆರ್ ರಾಮಚಂದ್ರರಾವ್‌ರವರಿಗೆ **'ಉತ್ತಮ ಸಹಕಾರಿ'** ಪ್ರಶಸ್ತಿ ಹಾಗೂ ಹೆಚ್ ವಿ ರಾಜೀವ್ ರವರಿಗೆ **'ಸಹಕಾರ ರತ್ನ'** ಬಂದಿರುವುದನ್ನು ನೆನೆಸಿಕೊಂಡು, ಆನಂತರ ತಮಗೆ ಪ್ರಶಸ್ತಿ ಬಂದಿರುವ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ, ಈ ಸಂತೋಷದಲ್ಲಿ ಸದಸ್ಯರುಗಳೂ ಭಾಗಿಯಾಗಲೆಂದು ಆಶಿಸಿ, ಊಟೋಪಚಾರದ ಖರ್ಚನ್ನು ನಮ್ಮ ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್‌ತಾತಾಚಾರ್‌ರವರು ಸ್ವಂತ ಖರ್ಚಿನಲ್ಲಿ ವೈಯಕ್ತಿಕವಾಗಿ ಮಾಡಿರುವುದಾಗಿ ತಿಳಿಸುತ್ತಾ, ಈ ವೆಚ್ಚವನ್ನು ಸಂಘದಿಂದ ಭರಿಸಿರುವುದಿಲ್ಲವೆಂದು ಸ್ಪಷ್ಟಪಡಿಸಿದರು. ಪ್ರಶಸ್ತಿಗೆ ಆಯ್ಕೆಯಾಗಿರುವ ವಿಷಯವನ್ನು ವಿಧಾನಸೌಧದಿಂದ ಕಾರ್ಯದರ್ಶಿಯವರೇ ಖುದ್ದಾಗಿ ದೂರವಾಣಿ ಮೂಲಕ ತಡರಾತ್ರಿ ವಿಷಯವನ್ನು ತಿಳಿಸಿ, ಮರುದಿನವೇ ಪ್ರಶಸ್ತಿ ಸಮಾರಂಭಕ್ಕೆ ಹಾಜರಾಗುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ, ಕೂಡಲೇ ತಾವು ಕಾರ್ಯಪ್ರವೃತ್ತರಾಗಬೇಕಾಯಿತು. ಈ ವಿಷಯ ಅನಿರೀಕ್ಷಿತವಾದ ಕಾರಣ, ಯಾರೊಬ್ಬರಿಗೂ ತಿಳಿಸಲು ಅವಕಾಶವಾಗದಿರುವುದರಿಂದ, ಈ ಸನ್ಮಾನದ ಸಂತೋಷವನ್ನು ಹಂಚಿಕೊಳ್ಳುವ ಸಲುವಾಗಿ, ದಿನಾಂಕ:07/12/2022ರಂದು ಸಂಘದ ಪ್ರಧಾನ ಕಛೇರಿಯ ವಾರ್ಷಿಕೋತ್ಸವದಂದು ಸಮಾರಂಭವನ್ನು ಹಮ್ಮಿಕೊಂಡಿದ್ದುದಾಗಿ ತಿಳಿಸಿದರು. ಆದರೆ ಸದರಿ ಪ್ರಶಸ್ತಿಯು ತನಗೆ ವೈಯಕ್ತಿಕವಾಗಿ ಬಂದಿದೆ ಎಂದು ತಾನು ಭಾವಿಸದೇ, ಸಂಘದ ಅಧ್ಯಕ್ಷರಾದ ತಮಗೆ ಪ್ರಧಾನವಾಗಿರುವುದಾಗಿ ತಿಳಿಸುತ್ತಾ, ಈ ಪ್ರಶಸ್ತಿಗೆ ಭಾಜನರಾಗಲು ಸಹಕರಿಸಿದ ಸಂಘದ ಎಲ್ಲಾ ಸದಸ್ಯರುಗಳು, ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ತಿಳಿಸಿದರು. ಶ್ರೀ ಕೌಶಿಕ್ ರವರು ಈ ಪ್ರಶಸ್ತಿ ಮತ್ತು ಭಾವಚಿತ್ರವನ್ನು ಸಂಘದ ಕಛೇರಿಯಲ್ಲಿ ಪ್ರದರ್ಶಿಸಲು ತಿಳಿಸಿದರು.

ನಂತರ ಸದಸ್ಯರಾದ ಶ್ರೀ ಎ. ವಿ.ರಮೇಶ್ ಕುಮಾರ್‌ರವರು (ಸ.ಸಂ3573) ಮಾತನಾಡುತ್ತಾ, ಶ್ರೀ ಸಿ.ವಿ.ಪಾರ್ಥಸಾರಥಿರವರು ಸಂಘದ ಹಿರಿಯ ಸದಸ್ಯರಾಗಿದ್ದು, ತಮ್ಮ ಜೀವನವನ್ನು ಸಂಘದ ಕೆಲಸ ಕಾರ್ಯಗಳಿಗಾಗಿಯೇ ಮುಡಿಪಾಗಿ ಇಟ್ಟಿರುವುದರಿಂದ ಮತ್ತು ಇವರ ಜನಸೇವೆಯನ್ನು ಗಮನಿಸಿ ಗೌರವಪೂರ್ವಕವಾಗಿ ಸರ್ಕಾರದಿಂದ ಕೊಡಮಾಡಲಾದ "ಸಹಕಾರ ರತ್ನ" ಪ್ರಶಸ್ತಿಯ ಬಗ್ಗೆ ಹೆಮ್ಮೆಪಡುವಂತಹ ವಿಷಯವಾಗಿದ್ದು, ಈ ಸಂತೋಷವನ್ನು ಹಂಚಿಕೊಳ್ಳುವ ಸಲುವಾಗಿ ಮಾನ್ಯ ಅಧ್ಯಕ್ಷರು ವೈಯಕ್ತಿಕವಾಗಿ ಸಂತೋಷಕೂಟವನ್ನು ಏರ್ಪಡಿಸಿರುತ್ತಾರೆ. ಇದು ನಮ್ಮ ಸಂಘಕ್ಕೂ ಸಹ ಹೆಮ್ಮೆಯ ದ್ಯೋತಕದ ಸಂಕೇತವಾಗಿರುವುದಾಗಿ ಅಭಿಪ್ರಾಯಪಟ್ಟರು.

ಸದಸ್ಯರಾದ ಶ್ರೀ ಸಿ.ಎಸ್.ಚಂದ್ರಶೇಖರ್‌ರವರು (ಸ.ಸಂ:3385) ಮಾತನಾಡಿ, ಸುಮಾರು 25 ವರ್ಷಗಳಿಂದ ಸಂಘದ ಆಗುಹೋಗುಗಳನ್ನು ಗಮನಿಸಲಾಗಿದ್ದು, ಈ ಸಂಘವು ಹಂತಹಂತವಾಗಿ ಪ್ರಗತಿ ಹೊಂದುತ್ತಿದೆ ಎಂದು ತಿಳಿಸುತ್ತಾ, ಇದಕ್ಕೆ

ನಿರ್ದೇಶಕರ, ಸಿಬ್ಬಂದಿ ವರ್ಗದವರ ಹಾಗೂ ಸದಸ್ಯರೆಲ್ಲರ ಸಹಕಾರ ಮುಖ್ಯವಾಗಿರುತ್ತದೆ. ಕಳೆದ ವರ್ಷಕ್ಕಿಂತ ಈ ವರ್ಷ ಲಾಭ ಕಡಿಮೆಯಾಗಿದ್ದು, 25 ವರ್ಷಗಳ ನಂತರ 'ಎ' ದರ್ಜೆಯಿಂದ 'ಬಿ' ದರ್ಜೆಗೆ ಬಂದಿರುವ ಬಗ್ಗೆ ಹೆಚ್ಚಿನ ದಕ್ಷತೆ ವಹಿಸುವಂತೆ ತಿಳಿಸಿದರು ಸುಸ್ತಿ ವಸೂಲಾತಿಗೆ ಹೆಚ್ಚು ಗಮನ ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಶ್ರೀ ಡಿ.ಎನ್.ಕೃಷ್ಣಮೂರ್ತಿ (ಸ.ಸಂ:4083)ರವರು ಮಾತನಾಡಿ, ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಯಲ್ಲಿ 'ಎ' ವರ್ಗೀಕರಣದಲ್ಲಿ ಮುಂದುವರೆಯುತ್ತಿದ್ದು, ಕಳೆದ ವರ್ಷದಂತೆ ಈ ಬಾರಿಯೂ ಕೂಡ 'ಬಿ' ವರ್ಗೀಕರಣದಲ್ಲಿರುವುದನ್ನು ಗಮನಿಸುತ್ತ, ಈ ಸಂಬಂಧ, ಸಂಘದ ಆಂತರಿಕ ಲೆಕ್ಕಪರಿಶೋಧಕರ ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡು, 'ಎ' ವರ್ಗೀಕರಣಕ್ಕೆ ಬರುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುವಂತೆ ಆಶಿಸುತ್ತೇವೆ ಎಂದರು.

ಸದಸ್ಯರಾದ ಶ್ರೀ ಕೆ.ಎನ್. ಶ್ರೀನಿವಾಸಶರ್ಮ (ಸ.ಸಂ:4590)ರವರು ಮಾತನಾಡಿ, ಸುಸ್ತಿ ಸಾಲದ ಬಗ್ಗೆಯೂ ಕ್ರಮ ವಹಿಸಬೇಕು, ಅಲ್ಲದೆ ಸ್ಥಿರಾಧಾರ ಸಾಲವನ್ನು ಟೇಕ್ ಓವರ್ ಮಾಡಿರುವುದನ್ನು ಸರಿಪಡಿಸಬೇಕಿದ್ದು, ಟಿ.ಡಿ.ಎಸ್. ಬಾಕಿಯನ್ನೂ ವಸೂಲಿ ಮಾಡಿದಲ್ಲಿ ಸಂಘಕ್ಕೆ ಹೆಚ್ಚಿನ ಲಾಭವಾಗಲಿದೆ ಎಂದು ಸಲಹೆ ನೀಡಿದರು.

ಸದಸ್ಯರಾದ ಶ್ರೀ ಸಿ.ಎಸ್.ಚಂದ್ರಶೇಖರ್ (ಸ.ಸಂ.3385)ರವರು, ಪು. ಸಂಖ್ಯೆ 6ರಲ್ಲಿ ಸದಸ್ಯರ ಮರಣೋತ್ತರ ನಿಧಿ 58 ಸದಸ್ಯರಿಗೆ ರೂ.3,000/–ದಂತೆ ಪಾವತಿ ಮಾಡಿದ್ದಲ್ಲಿ, ಅಂಕಿಅಂಶಗಳು ವ್ಯತ್ಯಾಸವಾಗಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಖಜಾಂಚಿಯವರು ಉತ್ತರಿಸಿ, ಮೊದಲು 1,000/– ಹಾಗೂ 2,000/– ಮತ್ತು 3,000/– ಈಗ ರೂ.5,000/– ವಿತರಿಸಲಾಗುತ್ತಿದೆ. ಅವರು ಮರಣ ಹೊಂದಿದ ದಿನಾಂಕಕ್ಕೆ ಅನ್ವಯವಾಗುವಂತೆ ಸದಸ್ಯರುಗಳ ಕಡೆಯಿಂದ ಅರ್ಜಿ ಸಲ್ಲಿಸಿದ ಸಮಯದಲ್ಲಿ ಆಗಿನ ಸಮಯಕ್ಕೆ ನಿಗದಿಯಾದ ಮೊತ್ತವನ್ನು ಪಾವತಿಸಲಾಗುವುದು. ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಸದಸ್ಯರ ಮರಣೋತ್ತರ ನಿಧಿಯ ಪಾವತಿ ಮೊತ್ತದಲ್ಲಿ ವ್ಯತ್ಯಾಸವಾಗಿರುವುದಾಗಿ ಸಭೆಗೆ ವಿವರ ನೀಡಿದರು. ಸದಸ್ಯರು ಇದಕ್ಕೆ ಕಾಲ ಮಿತಿ ಇರುವುದಿಲ್ಲವೇ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಸದಸ್ಯರ ಗೌರವಾರ್ಥವಾಗಿ ನೀಡುವ ಮೊಬಲಗಿಗೆ ಕಾಲ ಮಿತಿ ಬೇಡವೆಂದು ಈ ಹಿಂದೆ ಮಹಾ ಸಭೆಯಲ್ಲಿ ತಿಳಿಸಿರುವುದನ್ನು ಅನುಸರಿಸಲಾಗುತ್ತಿದೆ ಎಂದು ದಾಖಲಾಗಿರುವುದನ್ನು ಸಭೆಗೆ ತಿಳಿಸಿದರು, ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಸೂಚಿಸಲಾಯಿತು.

ಸದಸ್ಯರಾದ ಶ್ರೀ ವೆಂಕಟೇಶ್ ಕೌಶಿಕ್(ಸ.ಸಂ:3782) ರವರು ಮಾತನಾಡಿ, ಸದರಿ ಸಮಾರಂಭದ ಫೋಟೋವನ್ನು ಸಂಘದ ಕಚೇರಿಯಲ್ಲಿ ಹಾಕುವಂತೆ ಸಲಹೆ ನೀಡಿದರು. ಇದಕ್ಕೆ ಎಲ್ಲರೂ ಒಪ್ಪಿಗೆ ಸೂಚಿಸಿದರು. ಸದಸ್ಯರಾದ ಶ್ರೀ ಸಿ.ಎಸ್.ಚಂದ್ರಶೇಖರ್‌ರವರು ಮಾತನಾಡಿ 'ಧರ್ಮದ ನಿಧಿ'ಯಲ್ಲಿ ಯಾರಿಗೆ ಪಾವತಿಸಲಾಗಿದೆ ಎಂಬ ದಾಖಲೆಯ ವಿವರ ಕೇಳಲಾಗಿ, ಅಧ್ಯಕ್ಷರು ಉತ್ತರಿಸಿ, ಜಲವಾಸುದೇವಾ ಸಂಸ್ಥೆಗೆ, ರಾಮಭ್ಯುಧಯ ಸಂಸ್ಥೆಗೆ ರಾಮೋತ್ಸವಕ್ಕೆ, ಹುಲಗನ ಮುರಡಿ ಜಾತ್ರೆ ಸಂಬಂಧ, ಶ್ರೀ ರಾಘವೇಂದ್ರಸ್ವಾಮಿ ಮಠದ ಕಟ್ಟಡದ ಅಭಿವೃದ್ಧಿಗೆ – ಮತ್ತಿತರ ಕೆಲವು ಧಾರ್ಮಿಕ ಸಂಸ್ಥೆಗಳು ಲಿಖಿತವಾಗಿ ಧನಸಹಾಯವನ್ನು ಕೇಳಿದ್ದು, ಸಾರ್ವಜನಿಕ ಹಿತಾಸಕ್ತಿಯನ್ನನುಸರಿಸಿ, ಅಂತಹ ಧಾರ್ಮಿಕ ಸಂಸ್ಥೆಗಳಿಗೆ, ಸಂಘಕ್ಕೆ ನಷ್ಟವಾಗದ ರೀತಿಯಲ್ಲಿ ನೀಡಲಾಗಿದೆ ಎಂದು ಅಧ್ಯಕ್ಷರು ವಿವರ ನೀಡಿದರು. ಈ ವಿವರಗಳನ್ನು ಆಡಳಿತ ಮಂಡಲಿ ವಿವರದಲ್ಲಿ ನೀಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು ಕಳೆದ ಬಾರಿ ನೀಡಲಾಗಿ ಈ ಎಲ್ಲಾ ವಿವರಗಳ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿದ್ದು, ಅದರಂತೆ ಈ ಬಾರಿ ಕ್ರಮ ಕೈಗೊಳ್ಳಲಾಗಿದೆ. 2021–22ರ ನಡಾವಳಿಯಲ್ಲಿ ಸದಸ್ಯರು ಸಂಕ್ಷಿಪ್ತವಾದ ವರದಿಯನ್ನು ಆಡಳಿತ ವರದಿಯಲ್ಲಿ ತೋರಿಸುವ ಅವಶ್ಯಕತೆ ಇರುವುದಿಲ್ಲವೆಂಬುದನ್ನು ಪುಟ ಸಂಖ್ಯೆ:10ರಲ್ಲಿ ನಮೂದಿಸಿರುವ ಬಗ್ಗೆ ನಿರ್ದೇಶಕರಾದ ಶ್ರೀ ಕೆ ನಾಗರಾಜ್‌ರವರು ಓದಿ ತಿಳಿಸಿದ್ದನ್ನು ಸಭೆಯನ್ನು ಒಪ್ಪಿಗೆ ನೀಡಲಾಯಿತು.

ಸದಸ್ಯರಾದ ಶ್ರೀ ಡಿ.ಎನ್.ಕೃಷ್ಣಮೂರ್ತಿರವರು (ಸ.ಸಂ:4083), ಈ ಬಗ್ಗೆ ಧಾರ್ಮಿಕ ಸಂಸ್ಥೆಗಳವರು ಲಿಖಿತವಾಗಿ ಧನಸಹಾಯ ಕೇಳಲಾದ ಪತ್ರಗಳನ್ನು ಸದಸ್ಯರುಗಳ ಗಮನಕ್ಕೆ ತನ್ನಿ ಎಂದು ಕೇಳಲಾಗಿ, ಪ್ರತೀ ಮಾಹೆಯಲ್ಲಿ ಜರುಗುವ ಮಾಸಿಕ ಸಭೆಗಳಲ್ಲಿ ಸದರಿ ಪತ್ರಗಳನ್ನು ಮಂಡಿಸಿ, ಸಭೆಯಲ್ಲಿ ಚರ್ಚಿಸಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರೆಲ್ಲರ ಒಪ್ಪಿಗೆ ಮೇರೆಗೆ, ಸಂಘದ ವತಿಯಿಂದ ಸ್ವಲ್ಪಮಟ್ಟಿನ ಧನಸಹಾಯವನ್ನು ಮಾಡಲಾಗಿರುತ್ತದೆ. ಈ ಬಗ್ಗೆ ಸಂಘದ ಕಚೇರಿಯಲ್ಲಿನ ಲೆಕ್ಕಪತ್ರಗಳ ದಾಖಲೆಗಳಲ್ಲಿ ನಮೂದಿಸಲಾಗಿರುತ್ತದೆ ಎಂಬುದಾಗಿ ವಿವರ ನೀಡಿದರು.

ಸದಸ್ಯರಾದ ಶ್ರೀ ಜಗದೀಶ್‌ರವರು, (ಸ.ಸಂ:1929) ಯಾವ ಸಂಸ್ಥೆಗೆ ಎಷ್ಟು ಧನಸಹಾಯವನ್ನು ಮತ್ತು ಯಾವ ಆಧಾರದ ಮೇಲೆ ನೀಡುತ್ತೀರಾ ಎಂದು ಪ್ರಶ್ನಿಸಲಾಗಿ, ಧಾರ್ಮಿಕ ಸಂಸ್ಥೆಗಳು ಕೋರಿರುವಷ್ಟು ಅಲ್ಲದಿದ್ದರೂ, ಸದರಿ ಸಂಸ್ಥೆಗಳ ಅವಶ್ಯಕತೆಗೆ ಅನುಗುಣವಾಗಿ ಹಾಗೂ ಸಂಘದ ನಿಧಿಯನ್ನು ಪರಿಶೀಲಿಸಿ, ಸಂಘದ ಲೆಕ್ಕಪತ್ರ ಪರಿಶೀಲಕರ ಸಲಹೆಗಳನ್ನು ಅನುಸರಿಸಿ, ಸಂಘದ ನಿರ್ದೇಶಕರ ಮಂಡಳಿಯ ತೀರ್ಮಾನದೊಂದಿಗೆ ಕ್ರಮ ವಹಿಸಲಾಗುತ್ತದೆ. ಅಲ್ಲದೆ ಈ ಹಿಂದೆ ಕ್ಯಾನ್ಸರ್ ರೋಗಿಗಳಿಗೂ, ಕರೋನ ನಿಯಂತ್ರಣಕ್ಕೂ, ಪ್ರಕೃತಿ ವಿಕೋಪಗಳಿಗೂ ಸಹ ಧನಸಹಾಯ ಮಾಡಿರುವ ಬಗ್ಗೆ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ ಎಂದು ಅಧ್ಯಕ್ಷರು ಸಭೆಯಲ್ಲಿ ವಿವರ ನೀಡಿದರು.

ಸದಸ್ಯರಾದ ಶ್ರೀ ಡಿ.ಎನ್.ಕೃಷ್ಣಮೂರ್ತಿರವರು (ಸ.ಸಂ:4083) ಮಾತನಾಡಿ, ಸರ್ಕಾರ ಪ್ರಸ್ತುತವಾಗಿ ಐದು ಗ್ಯಾರಂಟಿ ನೀಡಿದೆ ಕೆ ವೈ ಸಿ ಸಂಘದ ಸದಸ್ಯರಿಗೆ ಕಡ್ಡಾಯ ಮಾಡಿರುವುದನ್ನು ಸಂಘದ ಖಾತೆಗೆ ಚಾಲ್ತಿ ಮಾಡಬಹುದೇ ಏಕೆಂದರೆ ಗೃಹಲಕ್ಷ್ಮೀ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಕೌಂಟ್ ಹೊಂದಿರುವವರು ಫಲಾನುಭವಿಗಳಾಗುತ್ತಾರೆ, ಆದರೆ ನಮ್ಮ ಸಂಘ ಸಂಸ್ಥೆಗಳಲ್ಲಿ ಅಕೌಂಟ್ ಹೊಂದಿರುವವರು ಸದರಿ ಯೋಜನೆಗೆ ಸಂಪರ್ಕ

ಕಲ್ಪಿಸಬಹುದಾಗಿದ್ದು, ಸಂಘದ ಎಲ್ಲಾ ಸದಸ್ಯರುಗಳ ಪಾನ್‌ಕಾರ್ಡ್ ಹಾಗೂ ಆಧಾರ್‌ಗಳನ್ನು ಲಿಂಕ್ ಮಾಡಬೇಕಾಗುತ್ತದೆ ಎಂದು ಸಲಹೆ ನೀಡಿದರು. ಅಧ್ಯಕ್ಷರು ಉತ್ತರಿಸಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಮಾತ್ರ ಅನ್ವಯವಾಗುವುದರಿಂದ ಸಂಘ ಸಂಸ್ಥೆಗಳ ಖಾತೆಗಳ ಪ್ರಮೇಯ ಇರುವುದಿಲ್ಲ ಎಂದು ತಿಳಿಸಿದರು. ಅದರು ಸಂಘದ ಸದಸ್ಯರ ಕೆ ವೈ ಸಿ ಕಡ್ಡಾಯವಾಗಿರುತ್ತದೆ ಇದನ್ನು ವರದಿಯಲ್ಲಿ ತಿಳಿಸಲಾಗಿದೆ.

ಸದಸ್ಯರಾದ ಶ್ರೀ ಕೆ.ಎನ್.ಶ್ರೀನಿವಾಸಶರ್ಮಾ (ಸ.ಸಂ:4590)ರವರು ಮಾತನಾಡಿ, ಪುಟ ಸಂಖ್ಯೆ 7ರಲ್ಲಿ ಕ್ರಮಸಂಖ್ಯೆ 6ರ ಕೊನೆಯ ಸಾಲಿನಲ್ಲಿ 'ಭದ್ರತಾ ಕಪಾಟು ಮೇಲಿನ ಬಡ್ಡಿ' ಎಂದು ನಮೂದಾಗಿದೆ, ಇದರ ಬದಲಾಗಿ ಭದ್ರತಾ ಕಪಾಟು ಠೇವಣಿ ಮೇಲಿನ ಬಡ್ಡಿ' ಎಂಬುದಾಗಿ ತಿದ್ದುಪಡಿ ಮಾಡುವಂತೆ ಸಲಹೆ ನೀಡಲಾಗಿ, ಅಧ್ಯಕ್ಷರು ಇದಕ್ಕೆ ಒಪ್ಪಿಗೆ ನೀಡಿ, ಸರಿಪಡಿಸಿಕೊಳ್ಳಲು ಪ್ರಭಾರ ಕಾರ್ಯದರ್ಶಿಯವರಿಗೆ ಸಭೆಯಲ್ಲಿಯೇ ಸೂಚನೆ ನೀಡಿದರು.

ಸದಸ್ಯರಾದ ಶ್ರೀ ಜಗದೀಶ್‌ರವರು (ಸ.ಸಂ:1929) ಮಾತನಾಡಿ, ಸಂಘದ ಲೆಕ್ಕಪತ್ರಗಳನ್ನು ಖಾಸಗಿಯಾಗಿ ಆಡಿಟ್ ಮಾಡಿಸುವ ಬದಲಾಗಿ ಸರ್ಕಾರದ ಲೆಕ್ಕಪರಿಶೋಧಕರಿಂದ ಆಡಿಟ್ ಮಾಡಿಸಿದಲ್ಲಿ ಖರ್ಚು ಕಡಿಮೆ ಮಾಡಬಹುದಾಗಿದೆ ಎಂದು ಹೇಳಲಾಗಿ, ಖಜಾಂಚಿಯವರು ಇದಕ್ಕೆ ಉತ್ತರಿಸಿ, ಸರ್ಕಾರದ ಲೆಕ್ಕಪರಿಶೋಧಕರಿಂದ ಆಡಿಟ್ ಮಾಡಿಸಿದ್ದಲ್ಲಿ ಸಂಘದ ದುಡಿಯುವ ಬಂಡವಾಳಕ್ಕೆ ಸರ್ಕಾರದಿಂದ ನಿಗದಿಪಡಿಸಿದ ಮೊತ್ತವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ. ಖಾಸಗಿ ಲೆಕ್ಕಪರಿಶೋಧಕರಿಂದ ಆಡಿಟ್ ಮಾಡಿಸಿದ್ದಲ್ಲಿ ಒಟ್ಟಾರೆ ಮೊಬಲಗನ್ನು ಸಮಾಲೋಚನೆ ಮಾಡಿ ನಿಗದಿಪಡಿಸಬಹುದಾಗಿದ್ದು, ಇದರ ತುಲನಾತ್ಮಕ ಮೊಬಲಗು ಸುಮಾರು ರೂ.2.50 ಲಕ್ಷಗಳು ಕಡಿಮೆಯಾಗುವುದು ಇದರಿಂದ ಸಂಘಕ್ಕೆ ಉಳಿತಾಯವಾಗಿರುವುದಾಗಿ ಸ್ಪಷ್ಟನೆ ನೀಡಿದರು.

ಸದಸ್ಯರಾದ ಶ್ರೀ ವೆಂಕಟೇಶ್ವರ ಕೌಶಿಕ್ (ಸ.ಸಂ:3782)ರವರು, ಪುಟ ಸಂಖ್ಯೆ:6ರಲ್ಲಿ ಮರಣೋತ್ತರ ನಿಧಿಯ ವಿಚಾರವಾಗಿ ಮಾತನಾಡಿ, ಹೆಚ್ಚುವರಿ ಮಾಡುವಂತೆ ಅನೇಕರು ಅಭಿಪ್ರಾಯ ತಿಳಿಸಲಾಗಿದ್ದು, ಎರಡು ವರ್ಷಗಳ ಆಗಿರುವುದರಿಂದ ಹೆಚ್ಚುವರಿ ಮಾಡಲು ಸಾಧ್ಯವಿದೆಯೇ ಎಂದು ಆಶಿಸುತ್ತಿದ್ದಾರೆ ಎಂದು ತಿಳಿಸಿದರು. ಇದರ ಬಗ್ಗೆ ಚರ್ಚೆ ನಡೆದು ಅಧ್ಯಕ್ಷರು ಉತ್ತರಿಸಿ ಈಗಿರುವ ಮೊಬಲಗು ಸರಿಯಾಗಿರುತ್ತದೆ ಎಂದು ನಿರ್ಧರಿಸಲಾಯಿತು. ಇದಕ್ಕೆ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.

ಸದಸ್ಯರಾದ ಶ್ರೀ ಕೆ.ಎನ್.ಶ್ರೀನಿವಾಸ ಶರ್ಮಾ (ಸ.ಸಂ:4590)ರವರು ಮಾತನಾಡಿ, ಪುಟ ಸಂಖ್ಯೆ:8 ಕ್ರ.ಸಂ. 10ರಲ್ಲಿನ ಕೊನೆಯ ಕಾಲಂನಲ್ಲಿ ಧನವಿನಿಯೋಗಗಳು ಕಳೆದ ಬಾರಿ 58 (ಇ) ಅನುಮೋದನೆಯಂತೆ ರಾಷ್ಟ್ರೀಕೃತ ಬ್ಯಾಂಕ್, ಷೆಡ್ಯೂಲ್ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿ ಎಂದು ನಿಯಮದಲ್ಲಿರುವುದರಿಂದ ತಾವು ಧನವಿನಿಯೋಗವನ್ನು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಧನವಿನಿಯೋಗ ಮಾಡಬೇಕಾಗಿತ್ತು. ಈಗಿನ ಹೂಡಿಕೆಗಳಲ್ಲಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ರೂ.1,42,12,864/–ಗಳ ಮೊತ್ತದ ಬಗ್ಗೆ, ಈ ಬ್ಯಾಂಕಿನ ಮೇಲೆ ಆರ್ ಬಿ ಐ ನವರು ವಿಧಿಸಿರುವ ನಿರ್ಬಂಧದ ಬಗ್ಗೆ ತಿಳಿಸುತ್ತಾ ಸಂಘದಿಂದ ಹೂಡಿರುವ ಮೊತ್ತವು ಬ್ಲಾಕ್ ಆಗಿದೆ ಈ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿರುವುದು ತಪ್ಪಲ್ಲವೇ ತಾವೇ ತೆಗೆದುಕೊಂಡಿರುವ ಅನುಮೋದನೆಯಂತೆ ರಾಷ್ಟ್ರೀಕೃತ ಬ್ಯಾಂಕ್ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಬೇಕಿತ್ತು ಈ ವಿಷಯದ ಬಗ್ಗೆ, ತೆಗೆದುಕೊಂಡಿರುವ ಕ್ರಮದ ಬಗ್ಗೆ ತಿಳಿಸುವಂತೆ ಕೇಳಲಾಯಿತು. ಇದಕ್ಕೆ ಅಧ್ಯಕ್ಷರು ಉತ್ತರಿಸಿ ನಾವು ಈ ಹಿಂದೆ ತೆಗೆದುಕೊಂಡಿರುವ ಕ್ರಮವನ್ನು ಅನುಸರಿಸಿ ಮುಂದುವರೆಸಲಾಗಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳಲಾಗಿದ್ದು, ವಿವರಗಳನ್ನು ಖಜಾಂಚಿಯವರು ಮಾಹಿತಿ ನೀಡುತ್ತಾರೆ ಎಂದು ತಿಳಿಸಿದರು. ಖಜಾಂಚಿಗಳು ಮಾತನಾಡಿ ಆರ್.ಬಿ.ಐ.ನಿಂದ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್‌ನ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿರುತ್ತದೆ. ಈ ವಿಷಯ ತಿಳಿದ ನಂತರ ಎನ್ ಸಿ ಬಿ ಯವರು ಠೇವಣಿದಾರರೊಂದಿಗೆ ಸಂವಾದವನ್ನು ಏರ್ಪಡಿಸಿದ್ದು, ಈ ಸಭೆಗೆ ಖುದ್ದಾಗಿ ನಾನು ಮತ್ತು ಪ್ರಭಾರ ಕಾರ್ಯದರ್ಶಿಯವರು ಹಾಗೂ ಲೆಕ್ಕಿಗರು ಹೋಗಿ ನಮ್ಮ ಹೂಡಿಕೆಯ ಭದ್ರತೆಗೆ ಬೇಕಾದ ಕ್ರಮಗಳನ್ನು ಹಾಗೂ ಮಾಹಿತಿಗಳನ್ನು ಸಂಗ್ರಹಣೆ ಮಾಡಲಾಗಿದ್ದು, ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಿ ಸಂಘವು ಹೂಡಿಕೆ ಮಾಡಿರುವ ಮೊಬಲಗು ಸದಸ್ಯರಿಂದ ಸಂಗ್ರಹಿಸಿದ ಮೊತ್ತವಾಗಿದ್ದು, ಇದರ ಬಿಡುಗಡೆಗೆ ಪತ್ರ ವ್ಯವಹಾರಗಳನ್ನು ಮಾಡಲಾಗಿರುತ್ತದೆ. ಎನ್ ಸಿ ಬಿ ಯವರು ಸಾಕಷ್ಟು ಹಣವನ್ನು ಹೊಂದಿದ್ದು, ಎನ್ ಪಿ ಎ ಹೆಚ್ಚುವರಿಯಾಗಿರುವುದರಿಂದ ಇದರ ಕ್ರಮಕ್ಕಾಗಿ ಆರ್ ಬಿ ಐನಿಂದ ನಿರ್ಬಂದವನ್ನು ವಿಧಿಸಲಾಗಿರುತ್ತದೆ. ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್‌ನವರು ಡಿಐಜಿಸಿ ಅರ್ಜಿಯನ್ನು ನೀಡಿದ್ದು ಅದನ್ನು ಸಹ ಭರ್ತಿ ಮಾಡಿ ನೀಡಲಾಗಿರುತ್ತದೆ. ನಾವು ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್‌ರವರ ಹರಾಜು ಆಸ್ತಿ ಪತ್ರದ ದಾಖಲೆಗಳನ್ನು ಸಹ ಪಡೆಯಲಾಗಿದೆ. ನಾವು ಅವರೊಂದಿಗೆ ಮಾತನಾಡಿರುವ ರೀತ್ಯ ಇನ್ನು 3–4 ತಿಂಗಳಲ್ಲಿ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ತಿಳಿಯಲಾಗಿದೆ, ಆಂತಕ ಪಡುವುದು ಬೇಡ ಇದಕ್ಕೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಮುಂಜಾಗ್ರತೆ ಕ್ರಮವಾಗಿ ಟಿ.ಜಿ.ಎಂ.ಸಿ. ಬ್ಯಾಂಕ್‌ನ ಠೇವಣಿ ಮೊತ್ತವನ್ನು ಅವಧಿಗೆ ಮುನ್ನ ಮುಕ್ತಾಯಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲಾಗುವುದು ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಮುಂದಿನ ದಿನಗಳಲ್ಲಿ ಅವಧಿ ಮುಕ್ತಾಯವಾಗುವ ಠೇವಣಿ ಮೊತ್ತದ ಬಿಡುಗಡೆಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಖಜಾಂಚಿಗಳು ಉತ್ತರಿಸಿ ನಾವು ಈಗಾಗಲೆ ನಮ್ಮ ಎಲ್ಲಾ ಮೊತ್ತವನ್ನು ಬಿಡುಗಡೆ ಮಾಡುವಂತೆ ಅವರಿಗೆ ಪತ್ರವನ್ನು ಹಾಗೂ ಆರ್ ಬಿ ಐ ಗೂ ಪತ್ರವನ್ನು ಬರೆಯಲಾಗಿದೆ. ಎನ್ ಸಿ ಬಿಯ ನಿರ್ದೇಶಕರು ಹಾಗೂ ಅಗಸ್ತ್ಯ ಸಂಸ್ಥೆಯ ಸದಸ್ಯರು ಆಗಿರುವ ಶ್ರೀ ನರಸಿಂಹಮೂರ್ತಿರವರನ್ನು ಇಂದಿನ ಸರ್ವಸದಸ್ಯರ ಸಭೆಗೆ ಹಾಜರಾಗಲು ತಿಳಿಸಲಾಗಿತ್ತು ನಮ್ಮ

ಸಂಘದ ಯಾವುದೇ ಹೂಡಿಕೆಯ ಮೊತ್ತ ದುರುಪಯೋಗವಾಗುವ ಸಂಭವವಿರುವುದಿಲ್ಲ ಎಂದು ತಿಳಿಸಿದರು. ಚಂದ್ರಶೇಖರ್ ರವರು ಮಾತನಾಡಿ ವಿಮೆ ಮೊತ್ತ ವಾಪಸ್ಸು ಆಗಿರುವ ಬಗ್ಗೆ ಕೇಳಲಾಗಿ ಖಜಾಂಚಿಗಳು ಉತ್ತರಿಸಿ ಈಗಾಗಲೇ ಡಿಐಜಿಸಿ ಅರ್ಜಿಯನ್ನು ಭರ್ತಿ ಮಾಡಿ ನೀಡಲಾಗಿರುತ್ತದೆ ಇದರ ಮೊತ್ತ ರೂ.5,00,000/– ಬರುವುದಾಗಿ ತಿಳಿಸಿದರು. ನಾವು ಸಂಘದ ಸದಸ್ಯರಿಗೆ ಸಾಲ ನೀಡಲು ಮತ್ತು ಅವಧಿ ಮುಕ್ತಾಯವಾಗುವ ಠೇವಣಿದಾರರಿಗೆ ಮೊತ್ತವನ್ನು ಬಿಡುಗಡೆ ಮಾಡಬೇಕಾಗಿರುವಂತೆ ಅಂಕಿ ಅಂಶಗಳ ಸಮೇತ ಪತ್ರವನ್ನು ಆರ್ ಬಿ ಐಗೂ, ಪ್ರತಿಯನ್ನು ಎನ್ ಸಿ ಬಿ ಬೆಂಗಳೂರಿನ ಪ್ರಧಾನ ಕಛೇರಿಗೂ ಹಾಗೂ ಮೈಸೂರಿನ ಶಾಖೆಗೂ ನೀಡಲಾಗಿರುತ್ತದೆ. ಕನಿಷ್ಟ ಇನ್ನು 4 ತಿಂಗಳ ಅವಧಿಯಲ್ಲಿ ಬರಬಹುದಾಗಿರುತ್ತದೆ ಎಂದು ತಿಳಿಸಲಾಯಿತು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಠೇವಣಿ ಮೊಬಲಗಿನ ವಾಪಸ್ಸಾತಿಗೆ ಬೇಕಾದ ಕಾನೂನು ವ್ಯವಸ್ಥೆಗಳನ್ನು ಮಾಡುವಂತೆ, ಸದಸ್ಯರ ಮೊಬಲಗು ಆಗಿರುವುದರಿಂದ ಅವಧಿ ಮುಕ್ತಾಯವಾದ ಮೊತ್ತವನ್ನು ಆದಷ್ಟು ಜರೂರಾಗಿ ಹಿಂಪಡೆಯಲು ಸಲಹೆ ನೀಡಲಾಯಿತು. ಈ ಮೊತ್ತ ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಮೊತ್ತ ಜಮಾ ಆಗುವ ವ್ಯವಸ್ಥೆ ಮಾಡಬೇಕಾಗಿ ತಿಳಿಸಿದರು. ಶ್ರೀ ಶ್ರೀನಿವಾಸ ರಾಘವನ್‌ರವರು ಮಾತನಾಡಿ ಬೆಂಗಳೂರಿನ ಶ್ರೀ ಗುರುರಾಘವೇಂದ್ರ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಠೇವಣಿದಾರರಿಗೆ ಆಗಿರುವ ಅನ್ಯಾಯ ಎಲ್ಲರಿಗೂ ತಿಳಿದಿರುತ್ತದೆ. ಆದುದರಿಂದ ಇನ್ನು ಮುಂದೆ ಯಾವುದೇ ಠೇವಣಿಯನ್ನು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಧನವಿನಿಯೋಗ ಮಾಡಬೇಕು ಎಂದು ತಿಳಿಸಿದರು. ಹೆಚ್ಚಿನ ಬಡ್ಡಿಯ ಆಸೆಗಾಗಿ ರಾಷ್ಟ್ರೀಕೃತವಲ್ಲದ ಬ್ಯಾಂಕ್‌ನಲ್ಲಿ ಸಂಘದ ಹಣ ಹೂಡಿಕೆ ಮಾಡಬಾರದೆಂದೂ, ಕಡಿಮೆ ಬಡ್ಡಿಯಾದರೂ ಸರಿ, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಯೇ ವ್ಯವಹಾರ ಮಾಡಬೇಕೆಂದು ಸಲಹೆ ನೀಡಿದರು. ಅದಕ್ಕೆ ಅಧ್ಯಕ್ಷರು ಒಪ್ಪಿಗೆ ನೀಡಿ ಧನ್ಯವಾದವನ್ನು ತಿಳಿಸಿದರು. ಇದರ ಬಗ್ಗೆ ಸ್ಪಷ್ಟ ಮಾಹಿತಿ ನೀಡಿದ ನಮ್ಮ ಕೆ ಎನ್ ಶ್ರೀನಿವಾಸ್ ಶರ್ಮರವರಿಗೆ ಧನ್ಯವಾದವನ್ನು ತಿಳಿಸಿದರು. ಈ ಮೊತ್ತದ ವಸೂಲಾತಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಆದರೆ ಈ ಮೊತ್ತದ ಬಡ್ಡಿ ಬಾಕಿ ಇರುವುದಿಲ್ಲ ಈಗಾಗಲೇ ತಿಳಿಸಿದಂತೆ ಟಿ ಜಿ ಎಂ ಸಿ ಠೇವಣಿಯನ್ನು ಮುಕ್ತಾಯಗೊಳಿಸಿದ್ದು, ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹೂಡಿಕೆ ಮಾಡಲಾಗುವುದು ಎಂದು ತಿಳಿಸಿದರು. ನಮ್ಮ ಠೇವಣಾತಿಗಳು ಆಟೋ ನವೀಕರಣದ ವ್ಯವಸ್ಥೆ ಹೊಂದಿರುವುದರಿಂದ ಸೂಚನೆ ತಿಳಿಯದೆ ಇದ್ದುದರಿಂದ ಈ ರೀತಿಯಾಗಿರುತ್ತದೆ. ಇಲ್ಲದಿದ್ದಲ್ಲಿ ಅದನ್ನು ಮುಕ್ತಾಯಗೊಳಿಸಲಾಗುತ್ತಿತ್ತು. ಆದಷ್ಟು ಹಣವನ್ನು ವಾಪಸ್ಸು ಪಡೆಯುವ ಪ್ರಥಮ ಪ್ರಾಶಸ್ತ್ಯಕ್ಕೆ ಕ್ರಮಕೈಗೊಳ್ಳಲಾಗುವುದು ಯಾವುದೇ ಆಸ್ತಿ ಖರೀದಿಯ ವ್ಯವಸ್ಥೆಯನ್ನು ಮಾಡುವುದಿಲ್ಲ ಅದು ಕಾನೂನು ಬಾಹಿರವಾಗಿರುವುದರಿಂದ ಇದರ ಬಗ್ಗೆ ನಮ್ಮ ಅಭಿಪ್ರಾಯವಿರುವುದಿಲ್ಲವೆಂದು ತಿಳಿಸಿದರು. ಶ್ರೀ ಕೃಷ್ಣರವರು ಮಾತನಾಡಿ ಕಳೆದ ಬಾರಿ ಎಲ್ಲಾ ಕೋ ಆಪರೇಟಿವ್ ಬ್ಯಾಂಕಿನ ಹೂಡಿಕೆ ತೆಗೆಯಲು ಸರ್ವಸದಸ್ಯರ ಸಭೆಯಲ್ಲಿ ತಿಳಿಸಲಾಗಿತ್ತು ಆದರು ಸಹ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿದರು. ಈ ಹಿಂದಿನ ನಿರ್ಧಾರದಂತೆ ಅವಧಿ ಮುಕ್ತಾಯವಾದ ಮೂರು ಕೋಟಿ ಮೊತ್ತಗಳನ್ನು ಮುಕ್ತಾಯಗೊಳಿಸಲಾಗಿದೆ. ಈಗಲು ಪ್ರಾಮಾಣಿಕವಾದ ಪ್ರಯತ್ನದಲ್ಲಿದ್ದು, ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಜಗದೀಶ್‌ರವರು ಮಾತನಾಡಿ ನಾವು ಒಂದು ಸಂಸ್ಥೆಯ ಹಣವನ್ನು ಎನ್ ಸಿ ಬಿಯಲ್ಲಿ ಇಡಲಾಗಿದ್ದು, ನಿರ್ಬಂಧ ಇರುವ ಕಾರಣದಿಂದ ನೀಡಲಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದೆ ಒಂದು ದಿನ ಸರ್ಟಿಫಿಕೇಟನ್ನು ನೀಡಿ ಸಂಸ್ಥೆ ಲಾಭದ ಹಂತಕ್ಕೆ ಬಂದಾಗ ನೀಡಲಾಗುವುದು ಎಂದು ತಿಳಿಸುತ್ತಾರೆ. ಮುಂದೆ ಏನು ಮಾಡಬೇಕು ಎಂದು ಕೇಳಲಾಗಿ ಅಧ್ಯಕ್ಷರು ಉತ್ತರಿಸಿ ಇಲ್ಲಿಯವರೆಗೂ ಹಣದ ಭರವಸೆ ಮತ್ತು ಆಶ್ವಾಸನೆ ನೀಡಲಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಜಗದೀಶ್ ರವರು ಮುಂದುವರೆದು ಹಣ ಬರದೇ ಇದ್ದರೆ ಮುಂದಿನ ಕ್ರಮವೇನು ಎಂದು ಕೇಳಲಾಗಿ ಅಧ್ಯಕ್ಷರು ಉತ್ತರಿಸಿ ಕಾನೂನು ಕ್ರಮ ನಮಗೆ ಬೇರೆ ಆಗುವುದಿಲ್ಲವಲ್ಲ ಎಂದು ತಿಳಿಸಿದರು. ಶ್ರೀ ರಾಮಕೃಷ್ಣರವರು ಮಾತನಾಡಿ ಎನ್ ಸಿ ಬಿ ಪ್ರಕರಣದ ನಂತರ ಕೋ ಆಪರೇಟಿವ್ ಸಂಸ್ಥೆಗಳಲ್ಲಿ ಜನ ಹೂಡಿಕೆ ಮಾಡಲು ಹೆದರುತ್ತಾರೆ. ನಮ್ಮ ಸಂಸ್ಥೆಯು ವಿಶ್ವಾಸಭರಿತವಾಗಿದ್ದು, ಈ ಹಣವನ್ನು ಆದಷ್ಟು ಜರೂರಾಗಿ ಹಿಂಪಡೆಯಲು ಕ್ರಮಕೈಗೊಳ್ಳಬೇಕು. ನಮ್ಮ ಸಹಕಾರ ನಿಮ್ಮೊಂದಿಗೆ ಇದೆ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ನಮ್ಮ ಪ್ರಯತ್ನ ಪ್ರಮಾಣಿಕವಾಗಿದೆ, ಬೇರೆ ಸಂಸ್ಥೆಯ ಬಗ್ಗೆ ಅಗೌರವ ಬೇಡ ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು ವಿವರಗಳಲ್ಲಿ ಎನ್ ಸಿ ಬ್ಯಾಂಕ್ ಎಂದು ಮುದ್ರಿಸಿದ್ದು, ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಯಾವುದೇ ಹೂಡಿಕೆ ಮಾಡಿರುವುದಿಲ್ಲ ಎಂದು ತಿಳಿಸಿದರು. ಅದಕ್ಕೆ ಅಧ್ಯಕ್ಷರು ಉತ್ತರಿಸಿ ಅದಕ್ಕೆ ಸಂಬಂಧಿಸಿದಂತೆ ಸರ್ಟಿಫಿಕೇಟ್‌ಗಳನ್ನು ಪರಿಶೀಲಿಸಬಹುದು ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್ ರವರು ಇದರ ಬಗ್ಗೆ ಆಕ್ಷೇಪಣೆ ವ್ಯಕ್ತ ಪಡಿಸಿದರು ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಎಂದು ಮುದ್ರಿಸಬೇಕಾಗಿತ್ತು ಎಂದು ತಿಳಿಸಿದರು. ಮಾತು ಮುಂದುವರೆಸುತ್ತಾ ಇಲ್ಲಿಯವರೆಗೂ ಬಡ್ಡಿ ಬಂದಿದೆ ಎಂದು ತಿಳಿಸಿರುತ್ತೀರಿ ನಾನು ಅಲ್ಲಿಯ ಠೇವಣಿದಾರನಾಗಿದ್ದು, ನನಗೆ ಜುಲೈವರೆಗೆ ಮಾತ್ರ ಬಡ್ಡಿ ಬಂದಿರುತ್ತದೆ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಕಾನೂನು ಪ್ರಕಾರ ಮೂರು ತಿಂಗಳಿಗೊಮ್ಮೆ ಬರಬೇಕಾದ ಬಡ್ಡಿ ಬಂದಿರುತ್ತದೆ ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಹಣ ಖಂಡಿತವಾಗಿ ಬರುವುದಾಗಿ ಆಶ್ವಾಸನೆ ನೀಡಲಾಗಿದ್ದು, ಅಕ್ಟೋಬರ್‌ನಲ್ಲಿ ವಿಮೆ ಹಣ ರೂ.5,00,000/–ಮಾತ್ರ ಬರುವುದು ಎಂದು ತಿಳಿಸಿದರು. ಮಿಕ್ಕ ಹಣ ಬರುವ ಬಗ್ಗೆ ಆಶ್ವಾಸನೆ ಇರುವುದಿಲ್ಲವೆಂದು ತಿಳಿಸಿದರು. ಶ್ರೀ ಶ್ರೀನಿವಾಸ್‌ಶರ್ಮರವರು ಮಾತನಾಡಿ ನಾನು ನಿರ್ದೇಶಕನಾದಾಗ ಇದರ ಬಗ್ಗೆ ಗಂಭೀರವಾದ ಕ್ರಮ ಅಗತ್ಯವೆಂದು ತಿಳಿಸಲಾಗಿತ್ತು ಆಗಲೇ ಎಚ್ಚೆತ್ತು ಕೊಳ್ಳಬಹುದಾಗಿತ್ತಲ್ಲವೇ ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ತಿಳಿಸಿದಂತೆ ವಿಮೆಯಿಂದ ರೂ.5,00,000/– ಮಾತ್ರ ಬರುವುದು ಮಿಕ್ಕ ಹಣ ಸಂಸ್ಥೆಯು

ವಿಲೀನೀಕರಣವಾದಾಗ ಮಾತ್ರ ನಮ್ಮ ಹಣಕ್ಕೆ ಭದ್ರತೆ ಇರುತ್ತದೆ ಎಂದು ತಿಳಿಸಿದರು. ಶ್ರೀ ಕೃಷ್ಣರವರು ಮಾತನಾಡಿ ಒಬ್ಬ ಠೇವಣಿದಾರನು ವಾಪಸ್ಸಾತಿಗೆ ಹೋದಾಗ ರೂ.50,000/– ಮಾತ್ರ ಬಿಡುಗಡೆ ಮಾಡುತ್ತಿದ್ದು, ಕಾಲಾವಕಾಶಬೇಕೆಂದು ತಿಳಿಸಿರುತ್ತಾರೆ. ಕಾಲಾವಕಾಶದ ಅವಧಿಯ ಬಗ್ಗೆ ಮಾಹಿತಿ ಇರುವುದಿಲ್ಲ ಜೆ ಪಿ ನಗರದ ಆಸ್ತಿ ಹರಾಜಿಗಿದೆ ಎಂದು ತಿಳಿಸುತ್ತಿದ್ದು, ಅದರಿಂದ ಯಾರು ಯಾರಿಗೆ ಠೇವಣಿ ನೀಡಲಾಗುವುದು ತಿಳಿಸಿ ಎಂದು ಕೇಳಿದರು. ಇನ್ನು ಮುಂದಾದರು ಮುಂಜಾಗ್ರತೆ ಕ್ರಮ ತೆಗೆದು ಕೊಳ್ಳುವಂತೆ ತಿಳಿಸಿದರು. ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ವಿಲೀನವಾದಾಗ ಮಾತ್ರ ನಮ್ಮ ಹಣದ ಗ್ಯಾರಂಟಿ ಇರುವುದು ಎಂದು ತಿಳಿಸಿದರು. ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಧನವಿನಿಯೋಗ ಮಾಡಬೇಕು ಎಂದು ತಿಳಿಸಿದರು. ನಿರ್ದೇಶಕರಾದ ಶ್ರೀ ನಾಗರಾಜ್‌ರವರು ಮಾತನಾಡಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಕೃಷ್ಣರವರ ಬಳಿ ಖುದ್ದಾಗಿ ಮಾತನಾಡಿದ್ದು, ವಿಲೀನಗೊಳಿಸಲು ಎಲ್ಲಾ ರೀತಿಯ ವ್ಯವಸ್ಥೆಯಾಗಿದ್ದು, ಎನ್ ಪಿ ಎ ಜಾಸ್ತಿಯಾಗಿರುತ್ತದೆ, ಹಣ ದುರುಪಯೋಗ ಆಗಿರುವುದಿಲ್ಲ ಆದುದರಿಂದ ಆರ್ ಬಿ ಐ ನಿಂದ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿರುತ್ತಾರೆ. ನಿರ್ದೇಶಕ ಮಂಡಲಿ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಮಹಾಸಭೆಯ ಅನುಮೋದನೆಗೆ ವಿಲೀನೀಕರಣಕ್ಕೆ ಅನುಮೋದನೆಗೆ ಮಂಡಿಸಲಾಗುವುದು ಎಂದು ತಿಳಿಸಿರುತ್ತಾರೆ. ಅವರು ನೀಡಿರುವ ಆಶ್ವಾಸನೆಯಂತೆ ನಾವು ನಂಬಿಕೆ ಇಡಲಾಗಿದೆ ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ ಅವರು ನೀಡಿರುವ ಸುಸ್ತಿ ಸಾಲದ ವಸೂಲಾತಿ ಗುಣಮಟ್ಟ ಅಧಿಕವಾಗಿರುವುದು ತಿಳಿದು ಬರುತ್ತದೆ. ಇದರಿಂದ ನಮ್ಮ ಸಂಸ್ಥೆಯು ಎಚ್ಚರಿಕೆ ವಹಿಸಬೇಕು ಮರುಪಾವತಿ ಸಾಮರ್ಥ್ಯವನ್ನು ಪರಿಶೀಲಿಸಬೇಕು ಎಂದು ತಿಳಿಸಿದರು. ಇದರಿಂದ ಸಂಸ್ಥೆಯ ಬೆಳವಣಿಗೆ ಆಗುವುದು ಎಂದು ತಿಳಿಸಿದರು. ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು (ಸ.ಸಂ.:3573) ಮಾತನಾಡಿ, ಸಂಘದಿಂದ ಉತ್ತಮವಾದ ಕೆಲಸಗಳು, ಪ್ರಯತ್ನಗಳು ನಡೆಯುತ್ತಿದೆ, ದುರುದ್ದೇಶ ಯಾರಿಗೂ ಇಲ್ಲ, ಆದರೆ ಈ ಬಗ್ಗೆ ಮಾಡಲಾದ ಪ್ರಯತ್ನಗಳು ಫಲಪ್ರದವಾಗದೇ ಇದ್ದಲ್ಲಿ, ಠೇವಣಿ ಹಣಕ್ಕೆ ಯಾರು ಜವಾಬ್ದಾರರಾಗುತ್ತಾರೆ ? ಅಲ್ಲದೇ, ಈಗಿನ ಪರಿಸ್ಥಿತಿ ಪ್ರತಿಕೂಲವಾಗಿರುವುದರಿಂದ, ಸಂಘದ ಸಮತೋಲನ ಕಾಪಾಡಿಕೊಳ್ಳುವ ಸಲುವಾಗಿ, ಕಡಿಮೆ ಪ್ರಮಾಣದ ಬಡ್ಡಿ ಬಂದರೂ ಸರಿ, ಇನ್ನು ಮುಂದೆಯಾದರೂ, ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ವ್ಯವಹರಿಸುವುದು ಒಳ್ಳೆಯದು ಎಂದರು.

ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಎನ್ ಪಿ ಎ ಹೆಚ್ಚು ಆಗಿದೆ ಎಂದು ತಿಳಿಸುತ್ತಿರುವ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್‌ನ ಆಶಿಸ್ತು ತೋರಿಸುತ್ತಿದೆ. ಇದರಿಂದ ನಮಗೆ ನಷ್ಟವಾಗುತ್ತಿರುವುದು ಇದರ ಬಗ್ಗೆ ಸೂಕ್ತವಾದ ಕ್ರಮ ಅಗತ್ಯ ಎಂದು ತಿಳಿಸುತ್ತಾ, ಸಂಘಕ್ಕೆ ನಷ್ಟವಾದಲ್ಲಿ ಪ್ರತಿಯೊಬ್ಬ ಸದಸ್ಯರೂ ಅದನ್ನು ಅನುಭವಿಸಲು ತಯಾರಾಗಿರುತ್ತಾರೆ, ಲಾಭವನ್ನು ಹಂಚಿಕೊಂಡಷ್ಟೇ ಆಸಕ್ತಿಯಿಂದ ನಷ್ಟವನ್ನೂ ಎದುರಿಸಲು ತಯಾರಾಗಬೇಕಾಗುತ್ತದೆ ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಸೂಕ್ಷ್ಮವಾದ ವಿಷಯವನ್ನು ಸಂಘಕ್ಕೆ ಎಚ್ಚರಿಕೆ ನೀಡುತ್ತಿರುವುದನ್ನು ಗಮನಿಸುವಂತೆ ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ನಮ್ಮ ಎಲ್ಲ ಶಕ್ತಿಯನ್ನು ಉಪಯೋಗಿಸಿ ಸಂಘಕ್ಕೆ ನಷ್ಟವಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಆಶ್ವಾಸನೆ ನೀಡಿದರು.

ಸದಸ್ಯರಾದ ಶ್ರೀ ಕೆ.ಎನ್. ಶ್ರೀನಿವಾಸಶರ್ಮಾರವರು ಮಾತನಾಡಿ, ಎನ್.ಪಿ.ಎ. ಜಾಸ್ತಿಯಾಗಿದ್ದರೂ ಕೂಡ ಸದಸ್ಯರುಗಳ ಠೇವಣಿದಾರ ಹಣ ನೀಡುತ್ತಿಲ್ಲ ಎಂದು ಕೇಳಿದರು. ಆರ್ ಬಿ ಐ ನಿರ್ಬಂಧ ಏಕೆ ಹೇರಲಾಗಿದೆ ಎಂದರೆ ಒಬ್ಬರಿಗೆ ಸಂಪೂರ್ಣ ಹಣ ನೀಡಿದಾಗ ಬೇರೆಯವರಿಗೆ ಏನು ಮಾಡುವುದು? ಆದುದರಿಂದ ಕೇವಲ ರೂ.50,000/–ಕ್ಕೆ ಮಾತ್ರ ನಿಗದಿಗೊಳಿಸಲಾಗಿದೆ, ಈ ಎಲ್ಲ ವಿಚಾರಗಳ ಚರ್ಚೆಯಿಂದ ಶ್ರೀ ರಮೇಶ್‌ಕುಮಾರ್ ರವರು ಪ್ರತಿ ಸಂಘ ಸಂಸ್ಥೆಯವರಿಗೂ ಎಚ್ಚರಿಕೆ ಗಂಟೆ ಎಂಬುದು ಸತ್ಯವಾಗಿದೆ ನಾವು ಎಚ್ಚೆತ್ತುಕೊಳ್ಳಬೇಕು ಎಂದು ತಿಳಿಸಿದರು. ಇದಕ್ಕೆ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು. ಸಾಕಷ್ಟು ಜನ ಫಲಾನುಭವಿಗಳಿದ್ದರೂ ಸಾಲ ಸಿಗುತ್ತಿಲ್ಲ, ಈ ಬಗ್ಗೆ ಕ್ರಮ ವಹಿಸಲು ಸೂಚಿಸಲಾಗಿ, ಇದಕ್ಕೆ ಅಧ್ಯಕ್ಷರು ಉತ್ತರಿಸಿ, ಈ ಸಲಹೆಯನ್ನು ತೆಗೆದುಕೊಳ್ಳುತ್ತೇವೆ ಎಂದರು.

ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು (ಸ.ಸಂ.:3573) ಮಾತನಾಡಿ, (ಅಖಿಲ ಕರ್ನಾಟಕ ಫೆಡರೇಷನ್ ಸೊಸೈಟಿಯಲ್ಲಿ ನಿರ್ವಹಿಸಲಾದಂತೆ) ಸಂಘದ ಆಸ್ತಿ ಮತ್ತು ಮೊಬಲಗುಗಳಿಗೆ ವಿಮೆ ಮಾಡಿಸುವ ಮೂಲಕ ಸಂಘಕ್ಕೆ ಸೆಕ್ಯೂರಿಟಿ ಕೊಡಬೇಕೆಂದರು. ಅಧ್ಯಕ್ಷರು ಇದಕ್ಕೆ ಉತ್ತರಿಸಿ, ಸಹಕಾರ ಸಂಘಗಳ ಪರವಾಗಿ ಇನ್ಶೂರೆನ್ಸ್ ಸ್ಕೀಂನ್ನು ಅಳವಡಿಸುವಂತೆ ಮುಂದೆ ಬರಬಹುದಾದ ಅವಕಾಶಗಳಿವೆ, ಆದರೆ ನಮ್ಮ ಸಂಘಕ್ಕೆ ಯಾವುದೇ ರೀತಿಯ ಮೋಸವಾಗಲು ಬಿಡುವುದಿಲ್ಲ, ಸಂಘಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಂಘದ ಮೂರು ಜನ ಕಾನೂನು ಸಲಹೆಗಾರರು ಈ ಸಭೆಯಲ್ಲಿ ಹಾಜರಾಗಿದ್ದು, ಇವರೊಂದಿಗೆ ಇದಕ್ಕೆ ಸೂಕ್ತವಾದ ಸಲಹೆ ಹಾಗೂ ಕ್ರಮವನ್ನು ತೆಗೆದುಕೊಳ್ಳಲಾಗುವುದು ಮೊದಲ ಪ್ರಾಶಸ್ತ್ಯ ಹಣ ವಾಪಸ್ಸಾತಿಯಾಗಿದ್ದು, ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಲಾಗುವುದು. ಚಾಮುಂಡೇಶ್ವರಿ ಕೃಪಾಕಟಾಕ್ಷದಿಂದ ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು. ನಾವು ಟಿಜಿಎಂಸಿ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿರುವ ಮೊತ್ತವನ್ನು ಮುಕ್ತಾಯಗೊಳಿಸಲಾಗಿದೆ. ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಚೆನ್ನಾಗಿ ನಡೆಯುತ್ತಿದ್ದು, ಅಲ್ಲಿ ಇರುವ ಮೊತ್ತದ ಬಗ್ಗೆ ಸರ್ವಸದಸ್ಯರ ಸಭೆಯ ಗಮನಕ್ಕೆ ತರಲಾಗಿದೆ. ಎಂ ಡಿ ಸಿ ಸಿ ಬ್ಯಾಂಕ್‌ನಲ್ಲಿ ಮೀಸಲು ನಿಧಿ ಹಾಗೂ ಠೇವಣಿ ಮೊತ್ತ ಇರುತ್ತದೆ. ಮೀಸಲು ನಿಧಿ ಮೊತ್ತ ಅಲ್ಲಿ ಇಡಲೇ ಬೇಕಾಗಿದ್ದು, ಅದು ನಿಮ್ಮ ಗಮನದಲ್ಲಿರುತ್ತದೆ ಎಂದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಮೀಸಲುನಿಧಿ ಮೊತ್ತವನ್ನು ಎಂಡಿಸಿಸಿ ಬ್ಯಾಂಕ್‌ನಲ್ಲಿ ಇಡಬೇಕು ಎಂಬ

ನಿಯಮವಿರುವುದಿಲ್ಲ, ಆದುದರಿಂದ ನಮ್ಮ ಹಣದ ಸುರಕ್ಷತೆ ಕಾಪಾಡುವುದು ತುಂಬಾ ಮುಖ್ಯ, ಸೂಕ್ತವಾದ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಶ್ರೀನಿವಾಸ್ ದೇಶಿಕಾಚಾರ್‌ರವರು (ಸ.ಸಂ.: 203) ಪುಟ ಸಂಖ್ಯೆ 9ರ ವಿವರಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಲೆಕ್ಕಗಳು ಪುಟ ಸಂಖ್ಯೆ: 20ರಲ್ಲಿ ಇರುವ ಅಖೈರು ಶಿಲ್ಕು ವಿಚಾರವಾಗಿ ಮಾತನಾಡಿ, ಸಂಘವು ವಿವಿಧ ಬ್ಯಾಂಕುಗಳಲ್ಲಿ ಚಾಲ್ತಿ ಮತ್ತು ಉಳಿತಾಯ ಖಾತೆ ಹೊಂದಿರುತ್ತದೆ ಚಾಲ್ತಿ ಖಾತೆಗಳಿಗೆ ಎಲ್ಲಾ ಬ್ಯಾಂಕ್‌ಗಳು ಫ್ಲೆಕ್ಸಿ ಡೆಪಾಜಿಟ್ ಖಾತೆ ಮಾಡುಲಾಗಿದೆಯೇ ಎಂದು ಕೇಳಿದರು, ಈ ರೀತಿ ಖಾತೆಗಳಲ್ಲಿ ಒಂದು ನಿಗದಿತ ಮೊತ್ತವನ್ನು ಆಟೋ ಠೇವಣಿ ಮಾಡಲಾಗುವುದು ಇದರಿಂದ ಠೇವಣಿಗೆ ಬಡ್ಡಿ ಬರುವುದರಿಂದ ಎಲ್ಲಾ ಖಾತೆಗಳನ್ನು ಫ್ಲೆಕ್ಸಿ ಡೆಪಾಜಿಟ್ ಖಾತೆಗಳನ್ನಾಗಿ ಮಾರ್ಪಾಟು ಮಾಡಲು ತಿಳಿಸಿದರು. ಖಜಾಂಚಿಗಳು ಉತ್ತರಿಸಿ ತಾವು ತಿಳಿಸಿದಂತೆ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಇದ್ದು, ಅಲ್ಲಿ ಸೇವಾ ಶುಲ್ಕ ಹೆಚ್ಚು ಆಗಿದ್ದು, ಯುಕೋ ಬ್ಯಾಂಕಿನಲ್ಲಿ ನಮ್ಮ ದಿನನಿತ್ಯದ ವ್ಯವಹಾರ ಹೆಚ್ಚು ಇರುತ್ತದೆ. ಇದನ್ನು ಪ್ರತಿದಿನ ಮಾನಿಟರ್ ಮಾಡುತ್ತಿದ್ದು, ನಿಗದಿತ ಮೊತ್ತದ ಹೆಚ್ಚುವರಿ ಮೊತ್ತವನ್ನು ಠೇವಣಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸದೇಶಿಕಾಚಾರ್‌ರವರು ಮಾತನಾಡಿ ತಾವು ಇದುವರೆಗೂ ಮ್ಯಾನ್ಯೂಯಲ್ ಆಗಿ ಮಾಡುತ್ತಿದ್ದು, ಎಲ್ಲಾ ಬ್ಯಾಂಕುಗಳಲ್ಲಿಯು ಫ್ಲೆಕ್ಸಿ ಡೆಪಾಜಿಟ್ ವ್ಯವಸ್ಥೆ ಕಲ್ಪಿಸಿದ್ದು, ಪ್ರಯೋಜನ ಪಡೆಯಬಹುದಾಗಿರುತ್ತದೆ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಸಂಘದಲ್ಲಿ ಸದಸ್ಯರ ಅನುಕೂಲಕ್ಕಾಗಿ ಆರ್‌ಟಿಜಿಎಸ್ ವ್ಯವಸ್ಥೆಯನ್ನು ನಮ್ಮ ಬ್ಯಾಂಕ್ ಮುಖಾಂತರ ಮಾಡಲಾಗುತ್ತಿದ್ದು, ಹೆಚ್ಚುವರಿ ಚಿನ್ನಾಭರಣ ಸಾಲ ಸ್ಥಿರಾಧಾರ ಸಾಲಗಳು ಹೊಗುತ್ತಿದ್ದು, ಚೆಕ್ ನೀಡುವ ವ್ಯವಸ್ಥೆ ಇರುತ್ತದೆ. ತಮ್ಮ ಸಲಹೆಯನ್ನು ಆದಷ್ಟು ಪಾಲಿಸಲಾಗುವುದು ಎಂದು ತಿಳಿಸಿದರು. ಶ್ರೀ ಹರೀಶ್‌ರವರು ಮಾತನಾಡಿ ತಾವು ಈಗ ನಿರ್ವಹಣೆ ಮಾಡುತ್ತಿರುವ ಕ್ರಮ ಸರಿಯಾಗಿದ್ದು, ಏಕೆಂದರೆ ನಾವು ನಮ್ಮ ಸಂಸ್ಥೆಯ ಫ್ಲೆಕ್ಸಿ ಡೆಪಾಜಿಟ್ ಖಾತೆಯಲ್ಲಿ ಚೆಕ್ ನೀಡಿದ ಸಮಯದಲ್ಲಿ ಚೆಕ್ ವಾಪಸ್ಸು ಆಗಿದ್ದು, ಈ ಖಾತೆಯನ್ನು ನಿರ್ವಹಣೆ ಮಾಡುವ ಸಿಬ್ಬಂದಿಯ ಆಜಾಗರುಕತೆಯಿಂದ ತೊಂದರೆ ಆಗಿರುತ್ತದೆ. ಸಂಘವು ಬಾರಿ ಮೊತ್ತದ ವ್ಯವಹಾರಗಳನ್ನು ಮಾಡುತ್ತಿರುವುದರಿಂದ ಈಗ ನಡಿಯುತ್ತಿರುವಂತೆ ನಡೆಸುವುದು ಸರಿ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ದೇಶಿಕಾಚಾರ್‌ರವರು ಪುಟ ಸಂಖ್ಯೆ 9ರಲ್ಲಿ ಚರ ಮತ್ತು ಸ್ಥಿರಾಸ್ತಿ ಗುತ್ತಿಗೆ ಮೊತ್ತವನ್ನು ಹೊಂದಾಂಣಿಕೆ ಮಾಡಿರುವ ಬಗ್ಗೆ ವಿವರ ಕೇಳಲಾಗಿ, ಖಜಾಂಚಿರವರು ಇದಕ್ಕೆ ಉತ್ತರಿಸಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಮರು ನಿಗದಿಪಡಿಸಿರುವುದನ್ನು ಗಮನದಲ್ಲಿರಿಸಿಕೊಂಡು 30 ವರ್ಷಗಳಿಗೆ ಸಮವಾಗಿ ಹೊಂದಾಣಿಕೆ ಮಾಡುವ ಸಲುವಾಗಿ, ರೂ. 1,12,000/–ಗಳ ಸವಕಳಿ ನಿಧಿಯಲ್ಲಿ ಹೊಂದಾಣಿಕೆ ಮಾಡಲಾಗಿರುತ್ತದೆ, ಮುಂದೆ ಪ್ರಾಧಿಕಾರದವರು ಭೋಗ್ಯ ಅಥವಾ ಖರೀದಿ ಮೊತ್ತವನ್ನು ನಿಗದಿಪಡಿಸಿದಾಗ ಸದರಿ ಮೊತ್ತವನ್ನು ಉಪಯೋಗಿಸಿಕೊಳ್ಳುವುದಾಗಿ ಸಭೆಯಲ್ಲಿ ವಿವರ ನೀಡಿದರು. ಪುಟ ಸಂಖ್ಯೆ:13 ಮತ್ತು 18 ರಲ್ಲಿ ವಿವರ ಕ್ರಮವಾಗಿರುವುದಿಲ್ಲ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಎಲ್ಲ ಖಾತೆಗಳ ಲೆಕ್ಕವನ್ನು ಪ್ರಧಾನ ಕಛೇರಿಯಲ್ಲಿ ಮಾಡಲಾಗುವುದು. ಈ 1,12,000/– ವಿಜಯನಗರ ಕಟ್ಟಡ ಮತ್ತು ನಿವೇಶನಕ್ಕೆ ಸಂಬಂಧಿಸಿದ್ದು ಎಂದು ತಿಳಿಸಿದರು. ಇದರಿಂದ ಕ್ರೂಢೀಕೃತ ತ:ಖ್ತೆಗಳನ್ನು ನೀಡುವಂತೆ ತಿಳಿಸಿದರು. ಇದರಿಂದ ಸದಸ್ಯರಿಗೆ ಅನುಮಾನವಿರುವುದಿಲ್ಲವೆಂದು ತಿಳಿಸಿದರು. ಶ್ರೀ ಶ್ರೀನಿವಾಸದೇಶಿಕಾಚಾರ್‌ರವರು ಮಾತನಾಡಿ ಸುಸ್ತಿ ಸಾಲಗಳ ಶೇ.7.7 ಇದ್ದು, ಇದು ಒಳ್ಳೆಯ ಲಕ್ಷಣವಾಗಿರುವುದಿಲ್ಲವೆಂದು ತಿಳಿಸಿದರು. ಇದಕ್ಕೆ ಹೆಚ್ಚು ಕ್ರಮ ಅಗತ್ಯವೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ವಸೂಲಾತಿ ಬಗ್ಗೆ ತೀವ್ರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಸುಸ್ತಿ ಕಡಿಮೆ ಮಾಡಿಕೊಳ್ಳುವ ಬಗ್ಗೆ ಗಮನಹರಿಸುತ್ತೇವೆ ಎಂದು ತಿಳಿಸಿದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಧನವಿನಿಯೋಗಗಳ ಮೇಲಿನ ಬಡ್ಡಿ ಬರಬೇಕಾದದ್ದು ಮೊತ್ತವನ್ನು ಲಾಭಕ್ಕೆ ಪರಿಗಣಿಸಲಾಗಿದೆಯೇ ಎಂದು ಕೇಳಲಾಗಿ ಖಜಾಂಚಿಗಳು ಮಾತನಾಡಿ ಹೌದು ಲಾಭಕ್ಕೆ ಪರಿಗಣಿಸಲಾಗಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ತಾವು ಹೂಡಿಕೆ ಮೇಲಿನ ಬಡ್ಡಿ ಬರಬೇಕಾದದ್ದನ್ನು ಲಾಭಕ್ಕೆ ತೆಗೆದುಕೊಂಡಿರುವುದು ಸರಿಯಾದ ಕ್ರಮ ಎಂದು ತಿಳಿಸಿದರು. ನಿವ್ವಳ ಲಾಭದ ಹಂಚಿಕೆಯಲ್ಲಿ ಇಲಾಖೆಯ ಅನುಮತಿ ಪಡೆಯಬೇಕು ಎಂದು ತಿಳಿಸಿದರು. ಖಜಾಂಚಿಯವರು ಮಾತನಾಡಿ ಈ ಮೊತ್ತಕ್ಕೆ ಅನುಮೋದನೆಯನ್ನು ಸರ್ವಸದಸ್ಯರ ಸಭೆಯಲ್ಲಿ ಪಡೆದು ಮಾಹಿತಿಯನ್ನು ಇಲಾಖೆಗೆ ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ನಿಯಮಾನುಸಾರ ರಿಜಿಸ್ಟ್ರಾರ್‌ರವರ ಅನುಮತಿ ಪಡೆಯಬೇಕು ಎಂದು ತಿಳಿಸಿರುತ್ತಾರೆ ಎಂದು ಕೇಳಲಾಗಿ, ಖಜಾಂಚಿಗಳು ಉತ್ತರಿಸಿ ನಾವು ಸದಸ್ಯರ ಠೇವಣಿ ಖಾತೆಗೆ ಕೊಡಬೇಕಾದ ಬಡ್ಡಿಯನ್ನು ಕಾಯ್ದಿರಿಸಲಾಗುವುದು, ಆದರೆ ಸಾಲಗಳ ಮೇಲಿನ ಬಡ್ಡಿ ಬರಬೇಕಾದದ್ದನ್ನು ಲಾಭವೆಂದು ಪರಿಗಣಿಸಿರುವುದಿಲ್ಲ, ಎಲ್ಲಾ ಷೆಡ್ಯೂಲ್ ಬ್ಯಾಂಕ್‌ನಲ್ಲಿಯು ಇದೇ ಪದ್ದತಿ ಅನುಸರಿಸಲಾಗುವುದು ಹೂಡಿಕೆ ಮೇಲಿನ ಬಡ್ಡಿ ಬರಬೇಕಾದದ್ದು ಅನುಮತಿಯನ್ನು ಇದುವರೆಗೂ ನಾವು ಪಡೆದಿರುವುದಿಲ್ಲ ನಿಯಮದಲ್ಲಿ ಇದ್ದರೆ ಮುಂದೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಷೆಡ್ಯೂಲ್ ಬ್ಯಾಂಕ್‌ಗೆ ನಮ್ಮ ಸಂಸ್ಥೆಯನ್ನು ಹೋಲಿಕೆ ಮಾಡುವುದು ಬೇಡ ನಮ್ಮ ಲೆಕ್ಕ ಪದ್ಧತಿ ಅವರಿಗಿಂತ ವ್ಯತ್ಯಾಸವಿರುತ್ತದೆ ಎಂದು ತಿಳಿಸಿದರು. ಮುಂದುವರೆದು ನಿಯಮ 27 (ಎ) ರೀತ್ಯ ನಿವ್ವಳ ಲಾಭದ ಲೆಕ್ಕಚಾರದಲ್ಲಿ ವಾಸ್ತವವಾಗಿ ವಸೂಲಾಗದ ಎಲ್ಲ ಬಡ್ಡಿಯನ್ನು ಎಂದು ಇರುತ್ತದೆ, ಇದರ ಪ್ರಕಾರ ನೀವು ಸರ್ವ ಸದಸ್ಯರ ಸಭೆಯ ದಿನಾಂಕದವರೆಗೆ ವಸೂಲಾಗಿರುವ ಬಡ್ಡಿಯನ್ನು ಮಾತ್ರ ಲೆಕ್ಕಾಚಾರ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಖಜಾಂಚಿಗಳು ಉತ್ತರಿಸಿ ಇದರ ಬಗ್ಗೆ ಮಾಹಿಯನ್ನು

ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಪುಟ ಸಂಖ್ಯೆ: 20 ರಲ್ಲಿ ತಾವು ಒಟ್ಟು ಮೊತ್ತವನ್ನು ತೋರಿಸಲಾಗಿದ್ದು, ಮುಂದಿನ ಸಲ ಅದನ್ನು ಬೇರ್ಪಡಿಸಿ ತೋರಿಸುವಂತೆ ಸಲಹೆ ನೀಡಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಸಂಘದ ವಾರ್ಷಿಕೋತ್ಸವವನ್ನು ಆಚರಣೆ ಮಾಡಲಾಗಿದ್ದು, ಅದರ ಮಾಹಿತಿ ನೀಡಿರುವುದಿಲ್ಲವೆಂದು ಕ್ಯಾಲೆಂಡರ್ ಬಿಡುಗಡೆ ಬಗ್ಗೆ ಮಾಹಿತಿ ಇರುವುದಿಲ್ಲ, ಇದರ ಗಮನವಿಟ್ಟು ಮಾಹಿತಿಯನ್ನು ನೀಡುವಂತೆ ತಿಳಿಸಲಾಯಿತು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಪುಟ ಸಂಖ್ಯೆ:10 ಟಿ ಡಿ ಎಸ್ ಬರಬೇಕಾದದ್ದು 2014-15 ರಿಂದ ಬಾಕಿ ಇರುವ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು. ಖಜಾಂಚಿಗಳು ಉತ್ತರಿಸಿ ಸಂಘವು ತಾಂತ್ರಿಕ ದೋಷದಿಂದ ಎರಡು ಪಾನ್ ಹೊಂದಿದ್ದು, ಕೆಲವೊಂದು ಹಳೇ ಪಾನ್‌ನಲ್ಲಿದ್ದ ಮೊತ್ತವನ್ನು ಚಾಲ್ತಿಯಲ್ಲಿರುವ ಪಾನ್‌ಗೆ ವರ್ಗಾಯಿಸಲಾಗಿದೆ. ಇದರ ವಾಪಸ್ಸಾತಿಗೆ ಆದಾಯ ತೆರಿಗೆ ಇಲಾಖೆಯವರೊಂದಿಗೆ ಮೊದಲಿನಿಂದ ಪತ್ರ ವ್ಯವಹಾರ ಮಾಡಲಾಗಿದೆ. ಒಂದು ಮೊತ್ತ ವಾಪಸ್ಸಾಗಿಯು ಸಹ ಸಂಘದ ಹೆಸರಿನ ವ್ಯತ್ಯಾಸದ ತೊಂದರಿಯಿಂದ ಜಮಾ ಪಡೆಯಲು ಸಾಧ್ಯವಾಗುತ್ತಿಲ್ಲ ಈ ರೀತಿ ತೊಂದರೆಗಳಿದ್ದು, ಒಂದೊಂದಾಗಿ ಸರಿಪಡಿಸಿಕೊಂಡು ವಾಪಸ್ಸು ಪಡೆಯುವ ನಿಟ್ಟಿನಲ್ಲಿ ಪತ್ರ ವ್ಯವಹಾರವನ್ನು ಹಾಗೂ ಆಂತರಿಕ ಲೆಕ್ಕ ಪರಿಶೋಧಕರೊಂದಿಗೆ ಪ್ರಭಾರ ಕಾರ್ಯದರ್ಶಿಯವರು ಖುದ್ದಾಗಿ ಆದಾಯತೆರಿಗೆ ಇಲಾಖೆಗೆ ಭೇಟಿ ಮಾಡಿ ವ್ಯವಹರಿಸಲಾಗುತ್ತಿದೆ ಹಾಗೂ ಸಂಘದ ಆದಾಯ ತೆರಿಗೆ ಲೆಕ್ಕ ಪರಿಶೋಧಕರಾದ ಸನ್ನದು ಲೆಕ್ಕಿಗರು ಶ್ರೀ ಅನಂತವರ್ಧನರವರ ಮಾರ್ಗದರ್ಶನವನ್ನು ಸಹ ಪಡೆದು ಕಾರ್ಯಗತ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು ರೂ. 27,11,098/- TDS Amount ಸಂಪೂರ್ಣವಾಗಿ ಪಡೆಯುವ ನಿಟ್ಟಿನಲ್ಲಿ ಕಾರ್ಯಗತ ಮಾಡುವಂತೆ ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ತಾಂತ್ರಿಕ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ನಮ್ಮ ಸನ್ನದು ಲೆಕ್ಕಿಗರು ಆಂತರಿಕ ಲೆಕ್ಕ ಪರಿಶೋಧಕರ ಮಾರ್ಗದರ್ಶನದಲ್ಲಿ ಜಮಾ ಪಡೆಯುವ ಯೋಜನೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ದೇಶಿಕಾಚಾರ್‌ರವರು ಮಾತನಾಡಿ ಟಿಡಿಎಸ್ ಕ್ಲೈಮ್ ಮಾಡುತ್ತಿರುವುದರಿಂದ ಅದರ ವಿವರಗಳು ಇರುವುದಲ್ಲವೇ ಎಂದು ಕೇಳಿದರು. ಟಿಡಿಎಸ್ ಕಡಿತಗೊಳಿಸದೇ ಇರುವುದರ ವಿವರಗಳು ಯಾವುದಾದರು ಇರುವುದೇ ಎಂದು ಪ್ರಶ್ನಿಸಿದರು? ಬ್ಯಾಂಕಿಂಗ್ ಆಕ್ಟ ಪ್ರಕಾರ ಕೆಲವು ವಿನಾಯತಿ ಇರುತ್ತದೆ ಆದುದರಿಂದ ಎಂದು ಕೇಳಲಾಗಿ ಖಜಾಂಚಿಗಳು ಉತ್ತರಿಸಿ ಅಂತಹ ಕ್ಲೈಮ್ ಮಾಡಲು ಬರುವುದಿಲ್ಲ ಇದಕ್ಕೆ ಶ್ರೀ ಶ್ರೀನಿವಾಸ್‌ಶರ್ಮರವರು ಸರಿಯಾದ ಉತ್ತರವನ್ನು ನೀಡಬಲ್ಲರು ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್ ರವರು ಅಧ್ಯಕ್ಷರನ್ನು ಉದ್ದೇಶಿಸಿ ರೂ. 27,11,098/- TDS Amount ಆಯಾಯ ವರ್ಷಗಳಿಂದ ಬರಬೇಕಾದದ್ದು ಎಂದು ತೋರಿಸಿ ಲಾಭದಲ್ಲಿ ಸೇರಿಸಲಾಗಿದೆಯೇ ಎಂದು ಕೇಳಲಾಗಿ ಅಧ್ಯಕ್ಷರು ಉತ್ತರಿಸಿ ಇಲ್ಲವೆಂದು ತಿಳಿಸಿದರು. ಶ್ರೀ ಶ್ರೀನಿವಾಸದೇಶಿಕಾಚಾರ್‌ರವರು ಮಾತನಾಡಿ ರೀಫಂಡ್‌ಗೆ ಕೆಲವು ಗುಂಪುಗಳಿದ್ದು, ಅಂದರೆ 15ಜಿ ಆ ರೀತಿಯಾಗಿ ಸೊಸೈಟಿಯವರು ವಿನಾಯತಿ ಗುಂಪಿನಲ್ಲಿ ಬರುವುದರ ಬಗ್ಗೆ ಖಾತರಿ ಪಡಿಸಿಕೊಳ್ಳಲು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಇದು ವಾಣಿಜ್ಯ ಸಂಸ್ಥೆಯಾಗಿದ್ದು, ಕೆಲವು ಕ್ಲೈಮ್‌ಗಳ ಪ್ರಯೋಜನವನ್ನು ಪಡೆಯಬಹುದಾಗಿರುತ್ತದೆ. 80ಪಿ ವಿನಾಯತಿ ಕ್ಲೈಮ್ ಮಾಡಿದಾಗ ಕೊಡಬಹುದು ಅಥವಾ ಕೊಡದೇನು ಇರಬಹುದು ಎಂದು ತಿಳಿಸಿದರು. ಟಿಡಿಎಸ್ ಕಡಿತ ಮಾಡದೇ ಇರುವ ಹಾಗೇ ಮಾಡಿಕೊಳ್ಳುವುದು ಸಾಧ್ಯವಿರುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿದರು. ಶ್ರೀ ಶ್ರೀನಿವಾಸದೇಶಿಕಾಚಾರ್‌ರವರು ಮಾತನಾಡಿ ಬ್ಯಾಂಕಿಂಗ್ ಬಿಸ್‌ನೆಸ್‌ನಲ್ಲಿ ಕೆಲವು ವಿನಾಯಿತಿಗಳ ಗುಂಪುಗಳಿದ್ದು, ಇದರ ಬಗ್ಗೆ ವಿಚಾರಣೆ ಮಾಡಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಪ್ರಯತ್ನಪಡಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಸುದೀರ್ಘ ಚರ್ಚೆಯ ನಂತರ ಪುಟ ಸಂಖ್ಯೆ 5ರಿಂದ 11ರವರೆಗೂ ಇವರು ವಿವರಗಳಿಗೆ ಅನುಮೋದನೆ ನೀಡುಬೇಕೆಂದು ಕೇಳಲಾಗಿ ಸದಸ್ಯರಾದ ಶ್ರೀ ಶ್ರೀನಿವಾಸದೇಶಿಕಾಚಾರ್, ಶ್ರೀ ಡಿ.ಎನ್.ಕೃಷ್ಣಮೂರ್ತಿ, ಶ್ರೀ ಸಿ.ಎಸ್.ಚಂದ್ರಶೇಖರ್, ಶ್ರೀ ಸತ್ಯಮೂರ್ತಿ, ಶ್ರೀ ವೆಂಕಟಸುಬ್ಬಯ್ಯ, ಶ್ರೀ ಕೇಶವ, ಶ್ರೀ ಎಸ್.ಎಸ್. ಮೂರ್ತಿ, ಹಾಗೂ ಇತರ ಸದಸ್ಯರುಗಳು ಸೂಚಿಸಿಸುವುದರ ಮೂಲಕ ಸರ್ವಾನುಮತದಿಂದ ಅನುಮೋದನೆ ನೀಡಿದರು.

**10. 2022-23ನೇ ಸಾಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಅನುಮೋದನೆ:**

ಶ್ರೀ ಎಂ.ಡಿ.ಗೋಪಿನಾಥ್‌ರವರು 2022-23ನೇ ಸಾಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದರು. ಪುಟ ಸಂಖ್ಯೆ:13 ರಿಂದ 21 ರವರೆಗೆ ಲಾಭ ನಷ್ಟ ಹಾಗೂ ಆಸ್ತಿ ಜವಾಬ್ದಾರಿ ತ:ಖ್ತೆಗಳ ವಿವರಗಳಿದ್ದು, ಪುಟವಾರು ತಿಳಿಸಿಕೊಂಡು ಹೋಗಲು ಸಭೆಯ ಅನುಮೋದನೆಗೆ ಕೋರಿದರು. ಯಾವ ಪುಟದಲ್ಲಿ ಸದಸ್ಯರಿಗೆ ಮಾಹಿತಿ ಅವಶ್ಯಕವಿದ್ದಲ್ಲಿ ಕೇಳಬಹುದು ಎಂದು ತಿಳಿಸಿದರು. ಸಭೆಯ ಅನುಮತಿಯಂತೆ ಪುಟ ಸಂಖ್ಯೆ:13ರಲ್ಲಿ ಮಾಹಿತಿ ಅಪೇಕ್ಷಿಸುವ ಸದಸ್ಯರು ಕೇಳಬಹುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸದೇಶಿಕಾಚಾರ್ ರವರು ಮಾತನಾಡಿ, ಹೋದ ವರ್ಷದ ನಿವ್ವಳ ಲಾಭಕ್ಕಿಂತ ಈ ವರ್ಷ ಕಡಿಮೆ ಆಗಿರುವುದನ್ನು ಗುರುತಿಸಲಾಗಿದ್ದು, ಸುಮಾರು ರೂ.16.00 ಲಕ್ಷಗಳು ವ್ಯತ್ಯಾಸವಾಗಿರುವುದಕ್ಕೆ ಕಾರಣ ಕೇಳಲಾಗಿ, ಖಜಾಂಚಿಯವರು ಉತ್ತರಿಸಿ, ಸಾಲಗಳ ಮೇಲಿನ ಬಡ್ಡಿ ಕಳೆದ ಬಾರಿಗೆ ಹೋಲಿಸಿದರೆ ಅಂತಹ ಹೆಚ್ಚಿನ ಪ್ರಗತಿಯಾಗಿರುವುದಿಲ್ಲ ಕಾರಣ ಸ್ಥಿರಾಧಾರ ಸಾಲದ ಬಡ್ಡಿ ಮತ್ತು ಚಿನ್ನಾಭರಣದ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆ

ಮಾಡಲಾಗಿರುತ್ತದೆ. ಠೇವಣಿ ಮೇಲಿನ ಬಡ್ಡಿ ಪಾವತಿ ಹೆಚ್ಚಾಗಿದ್ದು, ಠೇವಣಿಗಳ ಮೇಲಿನ ಬಡ್ಡಿದರ ಹೆಚ್ಚು ಮಾಡಲಾಗಿರುತ್ತದೆ ಎಂದು ತಿಳಿಸಿದರು. ಆಡಳಿತಾತ್ಮಕ ವೆಚ್ಚಗಳು ಹೆಚ್ಚಾಗಿದ್ದು, ಸಿಬ್ಬಂದಿಗೆ ಕಾಲ ಕಾಲಕ್ಕೆ ಸರ್ಕಾರದಿಂದ ನಿಗದಿಪಡಿಸಿದ ತುಟ್ಟಿಭತ್ಯೆ, ನಗರ ಪರಿಹಾರ ಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ಕಾಲ ಕಾಲಕ್ಕೆ ನೀಡಬೇಕಾದ ವಾರ್ಷಿಕ ಬಡ್ತಿಗಳನ್ನು ಮತ್ತು ಸಂಘದ ಕೆಲಸ ಕಾರ್ಯಗಳ ಅನುಕೂಲಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ ಈ ಎಲ್ಲಾ ಒಟ್ಟಾರೆ ಹೆಚ್ಚುವರಿ ಬಾಬ್ತುಗಳಿಂದ ಲಾಭ ಕಡಿಮೆಯಾಗಿರುತ್ತದೆ ಎಂದು ತಿಳಿಸಿದರು. ಸುಸ್ತಿ ವಸೂಲಾತಿಗೆ ಸಂಬಂಧಿಸಿದಂತೆ ಮಾರ್ಚ್ ಒಳಗೆ ನಾವು ನೀರಿಕ್ಷಿಸಿದ ಬಾಬ್ತು ಬಂದಿಲ್ಲದಿರುವುದರಿಂದ ಲಾಭ ಕಡಿಮೆಯಾಗಿರುತ್ತದೆ ಎಂದು ತಿಳಿಸಿದರು. ಇದೇ ರೀತಿ ಕೋವಿಡ್ ಸಮಯದಲ್ಲಿ ಹೆಚ್ಚಿನ ವಸೂಲಾತಿ ಹಿಂದಿನಿಂದ ಬರಬೇಕಾದ ಮೊತ್ತಗಳನ್ನು ವಸೂಲಿ ಮಾಡಿದ್ದಾಗ ಹೆಚ್ಚು ಲಾಭ ಪಡೆಯಲಾಗಿತ್ತು. ವಸೂಲಾತಿ ಆಗಲು ಹೀಗೆ ಮಾಡಲಾಗುವುದು ಎಂದು ತಿಳಿಸಲು ಆಗುವುದಿಲ್ಲವೆಂದು ತಿಳಿಸಿದರು. ಸದಸ್ಯರಾದ ಶ್ರೀ ಸಿ.ಎಸ್.ಚಂದ್ರಶೇಖರ್‌ರವರು ಮಾತನಾಡಿ, ವಿಜಯನಗರ ಶಾಖೆಯ ಕಟ್ಟಡದ ಸಿ.ಆರ್. ತೆಗೆದುಕೊಂಡಿರುವ ಬಗ್ಗೆ ಕೇಳಲಾಗಿ, ಖಜಾಂಚಿಯವರು ಮಾತನಾಡಿ, ವಿಜಯನಗರದ ಕ್ಟಟ್ಟಡದ ಸಿ ಆರ್ ಪಡೆಯಲಾತದೆ. ಪ್ರಧಾನ ಕಚೇರಿಯ ಸಿ.ಆರ್.ಪಡೆಯಲು ಸಾಕಷ್ಟು ಪ್ರಯತ್ನ ಮಾಡಿದ್ದಾಗ್ಯೂ ಕಟ್ಟಡದ ಕಂಪ್ಲೀಷನ್ ರಿಪೋರ್ಟ್ ಕೊಡಲು ಸತಾಯಿಸುತ್ತಿದ್ದಾರೆ, ಎಂದು ತಿಳಿಸಿದರು.

ಸದಸ್ಯರಾದ ಶ್ರೀ ವಾಸುಕಿಶಯನರವರು ಮಾತನಾಡಿ, ಕಟ್ಟಡವನ್ನು ಕಟ್ಟುವ ಮೊದಲೇ ಇರುವ ಪ್ಲಾನ್‌ನಂತೆ ಕಟ್ಟಡ ನಿರ್ಮಾಣ ಮಾಡದೆ ಉಲ್ಲಂಘನೆ ಆಗಿರುವುದರಿಂದ ಸಿ.ಆರ್.ಗೆ ಸಮಸ್ಯೆ ಉಂಟಾಗಿರುತ್ತದೆ ಎಂದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ 2013ರಿಂದಲೇ ಸಿ.ಆರ್. ತೆಗೆದುಕೊಂಡಿಲ್ಲವೆಂದು ಆಕ್ಷೇಪಿಸುತ್ತಾ, ಹತ್ತು ವರ್ಷಗಳಿಂದ ಪಡೆಯದೆ ಇರುವುದು ಸಂಘದ ಅಶಿಸ್ತು ತೋರಿಸುತ್ತದೆ ಇದಕ್ಕೆ ಶೀಘ್ರವಾದ ಕ್ರಮವನ್ನು ತೆಗೆದುಕೊಳ್ಳಲು ತಿಳಿಸಿದರು. ಉಲ್ಲಂಘನೆಯಾಗಿದ್ದಲ್ಲಿ ಮಾರ್ಪಾಟು ಪ್ಲಾನ್ ನೀಡಿ ದಂಡವನ್ನು ಪಾವತಿಸಿ ಸಿ ಆರ್ ಪಡೆಯುವ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಅದಕ್ಕೆ ಸೂಕ್ತವಾದ ಪ್ರಯತ್ನ ಮಾಡುತ್ತಿರುವ ಬಗ್ಗೆ ತಿಳಿಸಿದರು. ಶ್ರೀ ಕೌಶಿಕ್ ರವರು ಮಾತನಾಡಿ ಇಂಜೀನಿಯರ್ ಬಳಿ ಸಲಹೆ ಪಡೆದು ಸೂಕ್ತವಾದ ಕ್ರಮಕೈಗೊಳ್ಳಲು ತಿಳಿಸಿದರು. ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ ಇದರ ಬಗ್ಗೆ ತ್ವರಿತವಾದ ಕ್ರಮ ಅಗತ್ಯವೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ, ಸದಸ್ಯರೆಲ್ಲರ ಸಲಹೆ ಸೂಚನೆಗಳನ್ನು ಅನುಸರಿಸಿ, ಸಿ.ಆರ್.ನ್ನು ಪಡೆಯಲು ಕ್ರಮ ವಹಿಸುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ, ಸಂಘದ ಸಿಬ್ಬಂದಿಗಳಿಗೆ ಯಾವ ಪೇ ಸ್ಕೇಲ್ ಪ್ರಕಾರ ವೇತನ ಭರಿಸಲಾಗಿದೆಯೆ? ಪೇ ಸ್ಕೇಲ್ ರಿವೈಸ್ ಆಗಿದ್ದು, ಕಾಲಕಾಲಕ್ಕೆ ನಿಗದಿಪಡಿಸಲಾದ ವೇತನಗಳನ್ನು ನೀಡಲಾಗಿದೆಯೆ? ಎಂಬ ಬಗ್ಗೆ ಕೇಳಲಾಗಿ, ಅಧ್ಯಕ್ಷರು ಉತ್ತರಿಸಿ, ಕಾನೂನು ಪ್ರಕಾರ ಸಿಬ್ಬಂದಿಗಳಿಗೆ ಲಭ್ಯವಾಗುವ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆ, ಸಂಘದ ಆದಾಯದಲ್ಲಿ ಹೊಂದಾಣಿಕೆ ಮಾಡಿಕೊಂಡು ಹಿಂದಿನ ಬಾಕಿಯನ್ನು ಸರಿಪಡಿಸಲಾಗಿದೆ ಎಂದರು.

ಶ್ರೀ ಚಂದ್ರಶೇಖರ್ ರವರು ಮಾತನಾಡಿ ತಾವು ರಿವೈಸ್ ಪೇ ಸ್ಕೇಲ್ ಇಲ್ಲಿಯವರೆಗು ನೀಡುತ್ತಿಲ್ಲ ಹಳೇ ಪೇ ಸ್ಕೇಲ್ ಅನ್ನು ಮುಂದುವರೆಸುತಿದ್ದು, ಕಾಲ ಕಾಲಕ್ಕೆ ನೀಡುತ್ತಿರುವ ತುಟ್ಟಿ ಭತ್ಯೆಗಳಲ್ಲಿ ವ್ಯತ್ಯಾಸವಿರುತ್ತದೆ. ಹಿರಿಯ ಮತ್ತು ಕಿರಿಯ ಸಿಬ್ಬಂದಿಯವರುಗಳ ವೇತನ ತಾರತಮ್ಯವಿದ್ದು, ಶ್ರೀ ಅಜಯ್ ವರ್ಣೇಕರ್, ಶ್ರೀ ಅನಿರುದ್ಧ ರವರುಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಂಡಿದ್ದರೂ ಅವರುಗಳಿಗೆ ನೀಡಲಾಗುವ ವೇತನದಲ್ಲಿ ವ್ಯತ್ಯಾಸವಾಗಿರುವ ಬಗ್ಗೆ ವಿವರ ಕೇಳಿದರು.

ಖಜಾಂಚಿಗಳು ಇದಕ್ಕೆ ಉತ್ತರಿಸಿ, ಇದು ಕಛೇರಿಯ ಆಡಳಿತಾತ್ಮಕ ವಿಚಾರವಾಗಿದ್ದು, ಸಂಘದಲ್ಲಿ ಕೆಲಸ ನಿರ್ವಹಿಸುವ ಹಾಗೂ ಕೆಲಸದ ಜವಾಬ್ದಾರಿಗಳನು ಗಣನೆಗೆ ತೆಗೆದುಕೊಂಡು, ಅವರುಗಳ ಕೆಲಸದ ಸಾಮರ್ಥ್ಯಗಳನ್ನು ಪರಿಶೀಲಿಸಿ, ವೇತನಗಳನ್ನು ನಿಗದಿಪಡಿಸಲಾಗಿದೆ ಇದು ಇಲ್ಲಿ ಮಾತನಾಡುವ ವಿಷಯವಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ, ಖಜಾಂಚಿಗಳನ್ನು ಉದ್ದೇಶಿಸಿ ಆಡಳಿತಾತ್ಮಕ ವಿಚಾರವಾಗಿದ್ದರೂ ಸಭೆಯಲ್ಲಿ ಚರ್ಚಿಸಬಹುದಾಗಿದ್ದು, ಕೆಲವು ನಿರ್ಣಯಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು. ಪ್ರಭಾರ ಕಾರ್ಯದರ್ಶಿಯವರು ಎಷ್ಟು ವರ್ಷಗಳಿಂದ ಪ್ರಭಾರದಲ್ಲಿದ್ದಾರೆ ಎಂದು ಕೇಳಲಾಗಿ ಖಜಾಂಚಿಯವರು ಉತ್ತರಿಸಿ 4 ವರ್ಷಗಳಿಂದ ಆಗಿರುತ್ತಾರೆ ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಖಾಯಂ ಕಾರ್ಯದರ್ಶಿಯನ್ನಾಗಿ ಯಾಕೆ ಇದುವರೆಗೂ ಮಾಡಿರುವುದಿಲ್ಲ, ಅಲ್ಲದೇ ಪೂರ್ತಿ ಛಾರ್ಜ್ ಕೊಡದಿರುವ ಕಾರಣ, ಪೂರ್ಣ ಜವಾಬ್ದಾರಿ ನೀಡದಿರುವ ವಿಚಾರವಾಗಿ ವಿವರ ಕೇಳಿದರು. ಮುಂದುವರೆದು, ಸದಸ್ಯರಾದ ಶ್ರೀ ಡಿ.ಎನ್.ಕೃಷ್ಣಮೂರ್ತಿರವರು ಮಾತನಾಡಿ, ಪ್ರಭಾರ ಕಾರ್ಯದರ್ಶಿಯವರ ಮೇಲೆ ಹಗರಣ ಇದೆಯಾ ಅಥವಾ ಅನ್‌ಫಿಟ್ ಆಗಿದ್ದಾರಾ ಯಾವುದು ಇಲ್ಲದಿದ್ದರೆ ಅವರನ್ನು ಇನ್ನು ಪ್ರಭಾರದಲ್ಲಿ ಮುಂದುವರೆಸದೆ ಪೂರ್ಣ ಜವಾಬ್ದಾರಿ ನೀಡಬೇಕೆಂದು ತಿಳಿಸಿದರು. ಇದರಲ್ಲಿ ಏನಾದರು ತೊಂದರೆ ಇದಯೇ ಎಂದು ಅಧ್ಯಕ್ಷರನ್ನು ಪ್ರಶ್ನಿಸಲಾಗಿ ಅಧ್ಯಕ್ಷರು ಉತ್ತರಿಸಿ ಅವರ ಒಪ್ಪಿಗೆಯ ಕೊರತೆ ಇರುವುದಾಗಿ ತಿಳಿಸಿದರು..

ಶ್ರೀ ಪ್ರಭಾಕರ್‌ರವರು ಮಾತನಾಡಿ ಒಂದು ವರ್ಷದ ಅವಧಿಗೆ ಮಾತ್ರ ಪ್ರಭಾರ ಇಲ್ಲಿಯವರೆಗೂ ಪ್ರಭಾರದಲ್ಲಿಯೇ ಮುಂದುವರಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು. ಅಧ್ಯಕ್ಷರು ಉತ್ತರಿಸಿ ಜವಾಬ್ದಾರಿ ನೀಡಲು ನಾವು ತಯಾರಾಗಿದ್ದು, ಅವರು ತೆಗೆದುಕೊಳ್ಳಲು ತಯಾರಿಲ್ಲದಿರುವುದು ಪ್ರಭಾರದಲ್ಲಿಯೇ ಮುಂದುವರೆಸಲಾಗಿದೆ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಕಳೆದ ನಾಲ್ಕು ವರ್ಷಗಳಿಂದ ಸರ್ವ ಸದಸ್ಯರ ಸಭೆಯಲ್ಲಿ ಹೇಳಲಾಗಿಯೂ ತಾವು ಇನ್ನು

ಪ್ರಭಾರದಲ್ಲಿಯೇ ಮುಂದುವರೆಸುತ್ತಿರುವುದು ಸರಿಯಲ್ಲ. ಪ್ರಭಾರ ಕಾರ್ಯದರ್ಶಿಯನ್ನು ಖಾಯಂಗೊಳಿಸಿ ಅದರಲ್ಲಿ ನಿಮಗೆ ಏನಾದರು ತೊಂದರೆ ಇದಯೆ ಎಂದು ಕೇಳಲಾಗಿ ಅಧ್ಯಕ್ಷರು ಉತ್ತರಿಸಿ ಅವರು ಒಪ್ಪಿಗೆ ನೀಡುತ್ತಿಲ್ಲವೆಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಸಂಘದ ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಳ್ಳದೇ, ಅವರನ್ನು ಖಾಯಂ ಮಾಡಲು ಸಾಧ್ಯವಿಲ್ಲದಿದ್ದರೆ, ಹೊಸದಾಗಿ ಕಾಲ್ ಮಾಡಿ ಕಾರ್ಯದರ್ಶಿಯನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿದರು. ಅಧ್ಯಕ್ಷರು ಇದನ್ನು ಮಾಡಲಾಗಿದ್ದು, ಈ ರೀತಿಯ ಸಲಹೆ ನೀಡುವುದು ಬೇಡ ಎಂದರು. ಮುಂದುವರೆದು ಅಧ್ಯಕ್ಷರು ಮಾತನಾಡಿ ಈ ಹಿಂದೆ ಹಿರಿಯ ಸಿಬ್ಬಂದಿ ತನಗೆ ಬೇಡವೆಂದು ಈಗ ಎರಡನೇ ಸಿಬ್ಬಂದಿಗೆ ನೀಡಲಾಗಿದೆ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಇದೇ ರೀತಿ ಮುಂದುವರೆದರೆ ಮುಂದಿನ ಸಿಬ್ಬಂದಿಗೆ ನೀಡಬೇಕಾಗುತ್ತದೆ ಇದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲು ತಿಳಿಸಿದರು. ಖಜಾಂಚಿಗಳು ಇದು ಮಹಾಸಭೆಯ ವಿಷಯವಲ್ಲವೆಂದು ಹೇಳಿದರು ಆಡಳಿತಾತ್ಮಕ ವಿಚಾರವೆಂದು ನಿಮ್ಮಲ್ಲಿ ಇರುವ ನ್ಯೂನತೆ ಸರಿಪಡಿಸಿಕೊಳ್ಳಲು ತಿಳಿಸಿದರು. ಸರ್ವಸದಸ್ಯರ ಸಭೆಗೆ ಸೂಕ್ತವಾದ ಮಾಹಿತಿ ನೀಡಿ ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಶ್ರೀ ರಮೇಶ್ ಕುಮಾರ್ ರವರು ಕೇಳಿದ್ದು, ಸಿಬ್ಬಂದಿಗೆ ಕಾಲ ಕಾಲಕ್ಕೆ ತುಟ್ಟಿ ಭತ್ಯೆ ಹಾಗೂ ವಾರ್ಷಿಕ ಬಡ್ತಿ ನೀಡಲಾಗಿರುವ ಬಗ್ಗೆ ಕೇಳಲಾಗಿ ನೀಡಲಾಗಿದೆ ಎಂದು ತಿಳಿಸಲಾಯಿತು ಇದು ಒಂದು ಭಾಗ. ಮತ್ತೊಂದು ಭಾಗವಾಗಿ ಶ್ರೀ ಚಂದ್ರಶೇಖರ್‌ರವರು ಮಾತನಾಡಿ ವೇತನ ತಾರತಮ್ಯದ ಬಗ್ಗೆ ಕೇಳಿದರು ಅದಕ್ಕೆ ಉತ್ತರವಾಗಿ ಅಧ್ಯಕ್ಷರು ಅವರ ಹೊಣೆಗಾರಿಕೆ ಮತ್ತು ಅನುಭವಕ್ಕೆ ಅನುಗುಣವಾಗಿ ವೇತನವನ್ನು ಆಡಳಿತ ಮಂಡಲಿ ಸಭೆಯಲ್ಲಿ ನಿರ್ಧರಿಸಿ ನೀಡಲಾಗುವುದು ಎಂದು ಉತ್ತರಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ತಾವು ಸಮರ್ಥನೆ ಮಾಡಿಕೊಳ್ಳುತ್ತಿದ್ದು, ಮುಂದಿನ ಸರ್ವಸದಸ್ಯರ ಸಭೆಯ ಒಳಗೆ ಕಟ್ಟಡದ ಸಿ ಆರ್ ಮತ್ತು ಪ್ರಭಾರ ಕಾರ್ಯದರ್ಶಿಯವರ ಖಾಯಂಗೊಳಿಸಬೇಕು ಎಂದು ತಿಳಿಸಿದರು. ಇದರೊಂದಿಗೆ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ನ ಮೊತ್ತದ ವಾಪಸ್ಸು ಪಡೆಯಬೇಕು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಕೆ.ಎನ್. ಶ್ರೀನಿವಾಸಶರ್ಮಾರವರು ಮಾತನಾಡಿ, ಸಂಘದ ಕಚೇರಿಯಲ್ಲಿ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಿದ್ದರೂ ಸಹ ವೇತನದಲ್ಲಿ ಹೆಚ್ಚಳವಾಗಿರುವ ಬಗ್ಗೆ ನಾನು ಲಿಖಿತವಾಗಿ ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ ಸಿಬ್ಬಂದಿಗಳಿಗೆ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಗಳನ್ನು ನೀಡಲಾಗಿದ್ದು, ಪ್ರಭಾರ ಕಾರ್ಯದರ್ಶಿಯವರಿಗೆ ಎರಡು ವೇತನ ಬಡ್ತಿ, ವಿಶೇಷ ಭತ್ಯೆ ಹೆಚ್ಚಳದಿಂದ ಎಂದು ಉತ್ತರ ನೀಡಲಾಗಿರುತ್ತದೆ. ಈ ಎರಡು ವೇತನ ಬಡ್ತಿ ಎಲ್ಲಾ ಸಿಬ್ಬಂದಿಗೂ ಅನ್ವಯವಾಗುವುದಿಲ್ಲವೇ? ಇದಕ್ಕೆ ಸೂಕ್ತವಾದ ಉತ್ತರ ನೀಡಲು ತಿಳಿಸಿದರು ಅಧ್ಯಕ್ಷರು ಉತ್ತರಿಸಿ ಪ್ರಭಾರ ಕಾರ್ಯದರ್ಶಿಯವರಿಗೆ ವೇತನ ಬಡ್ತಿ ನೀಡಲು ಕಾನೂನು ಸಲಹೆ ಹಾಗೂ ಇಲಾಖೆಯಲ್ಲಿ ಸಲಹೆ ಪಡೆದು ಅವರಿಗೆ ತರಬೇತಿ ನೀಡಿ ನಂತರ ಕಾರ್ಯಗತ ಮಾಡಲಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಈ ಒಂದು ವೇತನ ಬಡ್ತಿಯನ್ನು ಎಲ್ಲ ಸಿಬ್ಬಂದಿಗೂ ಅನ್ವಯ ಮಾಡಬೇಕು ಅಲ್ಲವೇ ಇದರಿಂದ ಬೇರೆ ಸಿಬ್ಬಂದಿಯವರು ಬೇಸರವಾಗುವುದಿಲ್ಲವೇ ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ ಈ ಸಲಹೆಗಳು ಗಮನಿಸಲಾಗಿದೆ ಎಂದು ಮಾತ್ರ ಇಲ್ಲದೆ ಕಾರ್ಯಗತಕ್ಕೆ ಬರಬೇಕು ಸಿಬ್ಬಂದಿಗೆ ನೀವು ನೀಡುವ ವೇತನದ ಹೆಚ್ಚಾಗಿ ನೀಡುತ್ತಿದ್ದೇವೆ ಎಂದು ಕೊಳ್ಳಬೇಡಿ ಇದರಿಂದ ಸಂಘಕ್ಕೆ ಲಾಭವಾಗುತ್ತದೆ ಅವರು ಖುಶಿಯಾಗಿ ಕಾರ್ಯ ನಿರ್ವಹಣೆ ಮಾಡುತ್ತಾರೆ. ಕಾನೂನು ರೀತ್ಯಾ ವಾರ್ಷಿಕ ಬಡ್ತಿ ಅಥವಾ ಇನ್ನಿತರ ವೇತನಗಳು ಬಾಕಿ ಇದ್ದಲ್ಲಿ ಅವುಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ಹಾಗೂ ಸಿಬ್ಬಂದಿಗಳನ್ನು ಒಳ್ಳೆಯ ರೀತಿಯಲ್ಲಿ ನೊಡಿಕೊಳ್ಳುವಂತೆ ಸಲಹೆ ನೀಡುತ್ತಾ ನಾನು ಆಡಳಿತ ಮಂಡಲಿಯ ವಿರೋದವಾಗಿ ಇರುವುದಿಲ್ಲ ಎಂದು ತಿಳಿಸಿದರು. ತಾರತಮ್ಯ ಮಾಡುವುದು ಬೇಡ ಎಲ್ಲರನ್ನು ಒಂದೇ ರೀತಿ ನೋಡಿಕೊಳ್ಳಿ ಇದರಿಂದ ಅವರುಗಳೂ ಸಹ ಸಂತೋಷದಿಂದ ಸಂಘಕ್ಕಾಗಿ ಕಾರ್ಯ ನಿರ್ವಹಿಸುತ್ತಾರೆ, ಸಂಘದ ಪ್ರಗತಿಗೆ ಪ್ರತ್ಯಕ್ಷವಾಗಿ ಕಾರಣರಗುತ್ತಾರೆ ಎಂದು ಸಲಹೆ ನೀಡಿದರು. ಅಧ್ಯಕ್ಷರು ಅದಕ್ಕೆ ಒಪ್ಪಿಗೆ ನೀಡಿದರು.

ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಸಿಬ್ಬಂದಿ ಉಪದಾನ ಕಾಯ್ದಿರಿಸುವಲ್ಲಿ ಕಡಿಮೆಯಾಗಿರುವ ಬಗ್ಗೆ ವಿವರ ಕೇಳಿದರು. ಖಜಾಂಚಿಯವರು ಉತ್ತರಿಸಿ ಇದನ್ನು ಸಂಘದ ಆಂತರಿಕ ಲೆಕ್ಕ ಪರಿಶೋಧಕರು ಪರಿಶೀಲಿಸಿದ್ದು ಸಂಘಕ್ಕೆ ಬಂದು ವಿವರ ಪಡೆಯಬಹುದಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತು ಮುಂದುವರೆಸುತ್ತಾ ಅದೇ ರೀತಿ ಸವಕಳಿ ಲೆಕ್ಕಾಚಾರದ ಬಗ್ಗೆಯು ಮಾಹಿತಿ ಬೇಕಾಗಿರುವ ಬಗ್ಗೆ ಕೇಳಿದರು. ಖಜಾಂಚಿಗಳು ಉತ್ತರಿಸಿ ಇದನ್ನು ಆಂತರಿಕ ಲೆಕ್ಕ ಪರಿಶೋಧಕರು ವಿವರ ನೀಡುವುದಾಗಿ ತಿಳಿಸಿದರು. ಖಜಾಂಚಿಗಳು ಮುಂದುವರೆದಂತೆ ಪುಟವಾರು ತಿಳಿಸುತ್ತಾ ಹೋದರು ಅದಕ್ಕೆ ಸದಸ್ಯರು ಪುಟಸಂಖ್ಯೆ:12 ರಿಂದ 22ರವರೆಗೆ ಒಪ್ಪಿಗೆ ಇರುವ ಬಗ್ಗೆ ಕೇಳಲಾಗಿ ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಪುಟ ಸಂಖ್ಯೆ:12ರಲ್ಲಿ ಚಿನ್ನಾಭರಣ ಸಾಲ ಸುಸ್ತಿಯ ಬಗ್ಗೆ ವಿವರ ನೀಡಿರುವುದಿಲ್ಲ, ಸಂಘದ ಒಳನಿಯಮದ ಪ್ರಕಾರ ಮೂರು ತಿಂಗಳ ಅವಧಿಗೆ ಸುಸ್ತಿಯಾಗುವುದಿಲ್ಲವೇ ಎಂದು ಕೇಳಲಾಗಿ ಖಜಾಂಚಿಗಳು ಉತ್ತರಿಸಿ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು, ಅವರು ಬಡ್ಡಿ ಜಮಾ ಮಾಡದಿದ್ದರು ಸಹ ಹರಾಜು ಮುಖಾಂತರ ವಸೂಲಿ ಮಾಡಿಕೊಂಡು ಖಾತೆ ಮುಕ್ತಾಯಗೊಳಿಸುವುದರಿಂದ ಇದನ್ನು ಸುಸ್ತಿ ಎಂದು ಪರಿಗಣಿಸುವುದಿಲ್ಲವೆಂದು ತಿಳಿಸಿದರು ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಖಜಾಂಚಿಗಳು ಹೇಳಿದ್ದು ಸರಿ ಆದರೆ ಒಂದು ವರ್ಷದವರೆಗೆ ಬಡ್ಡಿ ಬಂದಿಲ್ಲವೆಂದು ಬರೆದುಕೊಳ್ಳುವ ಬದಲು ಪ್ರತಿ ತಿಂಗಳು ಬಡ್ಡಿ ಕಟ್ಟಿಸುವುದರಿಂದ ಸಂಘದ ವ್ಯವಹಾರಕ್ಕೆ ಹಣ ದೊರಕುವುದು ಸದಸ್ಯನಿಗೂ ಹೊರೆ ಕಡಿಮೆಯಾಗುವುದು ಎಂದು ತಿಳಿಸಿದರು. ಇದಕ್ಕೆ ಇತರೆ ಸದಸ್ಯರು ಕಡ್ಡಾಯ ಮಾಡುವುದು ಬೇಡ ಈಗ ಇರುವ ರೀತಿ ನಡೆಯಲಿ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಸಾಲ

ಪಡೆಯುವ ಸದಸ್ಯನು ಸಾಲದ ಅರ್ಜಿಯಲ್ಲಿ ಸಹಿ ಮಾಡಿದಾಗ ಅದರಲ್ಲಿ ತಾವು ತಿಳಿಸಿರುವ ನಿಬಂಧನೆಗಳನ್ನು ಒಪ್ಪಲಾಗಿದೆ ಎಂದು ಅರ್ಥ ತಾವು ನಿಗದಿಪಡಿಸಿರುವ ನಿಯಮದಲ್ಲಿ ಅರ್ಜಿಯಲ್ಲಿ ಕಂತು ಮತ್ತು ಬಡ್ಡಿ ಎರಡು ಪ್ರತಿ ಮಾಹೆ ಕಟ್ಟಬೇಕೆಂದು ತಿಳಿಸಲಾಗಿದೆ. ಆದರೆ ಪ್ರೋನೋಟ್‌ನಲ್ಲಿ ಸಾಲದ ಅವಧಿ 12 ತಿಂಗಳು ಮೂರು ತಿಂಗಳಿಗೆ ಒಮ್ಮೆ ಬಡ್ಡಿ ಪಾವತಿಸಬೇಕು ತಪಿದ್ದಲ್ಲಿ ಹರಾಜು ಪ್ರಕ್ರಿಯೆ ನಡೆಸಲಾಗುವುದು ಎಂದು ತಿಳಿಸಲಾಗಿರುತ್ತದೆ. ಈ ನಿಯಮದ ಪ್ರಕಾರ ಸಾಲ ಸುಸ್ತಿಯಾಗುವುದಿಲ್ಲವೇ, ನೀವೇ ತಿಳಿಸಿರುವ ನಿಯಮಗಳ ಪ್ರಕಾರ ಬದ್ದರಾಗದಿದ್ದರೆ ಕಾನೂನು ಉಲ್ಲಂಘನೆಯಾಗುತ್ತದೆ. ಸಂಘದ ಉಪನಿಯಮದ ಸಂಖ್ಯೆ:25.4ರ ಪ್ರಕಾರವು ಸುಸ್ತಿದಾರನೆಂದು ಪರಿಗಣಿಸಬೇಕು ಇದರ ಆಧಾರ ಮೇಲೆ ನಿರ್ದೇಶಕರು ಈ ಸಾಲವನ್ನು ಪಡೆದು ಬಡ್ಡಿ ಪಾವತಿಸದೇ ಇದ್ದಲ್ಲಿ ಸುಸ್ತಿದಾರರಾಗುವುದಿಲ್ಲವೇ ಎಂದು ಕೇಳಲಾಗಿ ಅಧ್ಯಕ್ಷರು ಉತ್ತರಿಸಿ ಈ ನಿಯಮಗಳ ಪ್ರಕಾರ ಸುಸ್ತಿದಾರರಾಗುತ್ತಾರೆ ಎಂದು ತಿಳಿಸಿ ಇದರ ಮಾರ್ಪಾಟು ಮಾಡಿಕೊಳ್ಳಬೇಕು ಎಂದು ತಿಳಿಸಿದರು. ನಿರ್ದೇಶಕರಾದ ಶ್ರೀ ಪ್ರೀತನ್ ರವರು ಮಾತನಾಡಿ ಸ್ಥಿರಾಧಾರ ಸಾಲದಲ್ಲಿ ದಾಖಲೆಗಳು ನಮ್ಮ ಬಳಿ ಇರುತ್ತದೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಚಿನ್ನಾಭರಣ ಸಾಲದಲ್ಲಿ ಪದಾರ್ಥ ನಮ್ಮ ಬಳಿ ಇರುವುದರಿಂದ ಖಾತೆ ಮುಕ್ತಾಯಗೊಳಿಸದ ಹೊರತು ಪದಾರ್ಥ ಬಿಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ ಅದಕ್ಕೆ ನಾವು ತಕ್ಷಣ ಕ್ರಮತೆಗೆದುಕೊಳ್ಳಬಹುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಸ್ಥಿರಾಧಾರ ಸಾಲದಲ್ಲಿಯು ಸಹ ಮೂಲ ದಾಖಲೆಗಳು ನಿಮ್ಮ ವಶದಲ್ಲಿ ಇರುವುದರಿಂದ ಸಂಘಕ್ಕೆ ಮೊದಲ ಆದ್ಯತೆ ಇರುವುದಿಲ್ಲವೇ ಎಂದು ಪ್ರಶ್ನಿಸಿದರು? ನೀವೇ ಮಾಡಿರುವ ನಿಯಮವನ್ನು ಉಲ್ಲಂಘನೆ ಮಾಡಬೇಡಿ ಎಂದು ತಿಳಿಸಿದರು. ಶ್ರೀ ಸತ್ಯಮೂರ್ತಿಯವರು ಮಾತನಾಡಿ ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿಯು ಸುಸ್ತಿದಾರರ ವಿವರಗಳು ಸಿಬಿಲ್‌ನಲ್ಲಿ ಅಪ್‌ಡೇಟ್ ಆದರೆ ಚಿನ್ನಾಭರಣ ಸಾಲದ ಸುಸ್ತಿ ಯಾವುದು ಅಪ್‌ಡೇಟ್ ಆಗುವುದಿಲ್ಲ ಸಂಘದಲ್ಲಿಯು ಇದನ್ನು ಸುಸ್ತಿ ಎಂದು ಪರಿಗಣಿಸುವುದು ಬೇಡ ಎಂದು ತಿಳಿಸಿದರು. ಆದುದರಿಂದ ಅರ್ಜಿ ಮತ್ತು ಪ್ರೋನೋಟ್ ಬದಲಾವಣೆ ಮಾಡುವಂತೆ ತಿಳಿಸಿದರು. ಖಜಾಂಚಿಗಳು ಉತ್ತರಿಸಿ ಇದನ್ನೇ ಶ್ರೀ ಶ್ರೀನಿವಾಸ್ ಶರ್ಮರವರು ತಿಳಿಸಿದ್ದು, ಮುಂದೆ ಸರಿಪಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್ ರವರು ಮಾತನಾಡಿ ಇದು ತ್ವರಿತವಾಗಿ ಆಗಬೇಕಾದ ಕಾರ್ಯ ಇದರಿಂದ ನಿಯಮ ಪಾಲನೆ ಕ್ರಮವಾಗಿ ಆಗುವುದು ಎಂದು ತಿಳಿಸಿದರು. ಈ ಎಲ್ಲ ವಿವರಗಳ ಬಗ್ಗೆ ದೀರ್ಘ ಚರ್ಚೆಯ ನಂತರ ಸದಸ್ಯರಾದ ಶ್ರೀ ಗುರುಪ್ರಸಾದ್, ಶ್ರೀ ಶ್ರೀಕಾಂತ್ ಚೆನ್ನಿಗ, ಶ್ರೀ ರವಿಕುಮಾರ್, ಶ್ರೀ ನಾರಾಯಣ್, ಶ್ರೀ ರಮೇಶ್ ಕುಮಾರ್, ಶ್ರೀ ಕೇಶವರಾವ್, ಮತ್ತು ಶ್ರೀ ಎಸ್.ಎಸ್. ಮೂರ್ತಿ ಹಾಗೂ ಇತರ ಸದಸ್ಯರುಗಳು ಸೂಚಿಸುವುದರ ಮೂಲಕ ಅನುಮೋದನೆ ನೀಡಿದರು.

**11. 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ, ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅನುಮೋದನೆ:** ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್‌ರವರು 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ, ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸರ್ವಸದಸ್ಯರ ಸಭೆಗೆ ಮಂಡಿಸಿದರು.

**2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ**

| **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರರೀತ್ಯ ಅನುಸೂಚಿಗಳು** | **ಅನುಸೂಚಿಗೆ ಸನ್ನದು ಲೆಕ್ಕಿಗರು ಸೂಚಿಸಿರುವ ಮಾಹಿತಿ** | **ಸನ್ನದು ಲೆಕ್ಕಿಗರ ವರದಿಗೆ ಸಂಘದ ಅನುಪಾಲನಾ ವರದಿ** |
|---|---|---|
| 10.2ಗಂಭೀರ ಸ್ವರೂಪದ ನ್ಯೂನತೆಗಳು/ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆ ದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು. | ಪುಟ ಸಂಖ್ಯೆ:36 ಕಂಡಿಕೆ ಸಂಖ್ಯೆ:7<br>6 ವರ್ಷ ಮೀರಿದ ಡಿಕ್ರಿಯಾಗದ ವಾಹನ ಸಾಲ ರೂ.2,90,049/– ಗಳಿಗೆ ಶೇ 100ರಷ್ಟು ಮಹಾಸಭೆಯ ಒಪ್ಪಿಗೆ ಪಡೆದುಕಾಯ್ದಿರಿಸಲು ಸಲಹೆ ನೀಡಲಾಗಿದೆ.<br>**<u>ನೀಡಿದ ಸಮಜಾಯಿಷಿ:</u>** ನಿರ್ದೇಶಕ ಮಂಡಲಿಯಲ್ಲಿ ಚರ್ಚಿಸಿ ತಮ್ಮ ಸಲಹೆಯಂತೆಕ್ರಮ ಕೈಗೊಳ್ಳಲಾಗುವುದು.<br>**<u>ಪ್ರಸ್ತುತ ಸ್ಥಿತಿ:</u>** ಯಥಾ ಸ್ಥಿತಿ ಮುಂದುವರೆದಿರುತ್ತದೆ.<br>ಪುಟ ಸಂಖ್ಯೆ:36 ಕಂಡಿಕೆ ಸಂಖ್ಯೆ:8<br>6 ವರ್ಷ ಮೀರಿದಡಿಕ್ರಿಯಾಗದ ಸಾಲಗಳ ಮೊತ್ತ ರೂ.20,53,835/– ಗಳಿಗೆ ಶೇ 100ರಷ್ಟು ಮಹಾ ಸಭೆಯಒಪ್ಪಿಗೆ ಪಡೆದುಕಾಯ್ದಿರಿಸಲು ಸಲಹೆ ನೀಡಲಾಗಿದೆ.<br>**<u>ನೀಡಿದ ಸಮಜಾಯಿಷಿ:</u>** ನಿರ್ದೇಶಕ ಮಂಡಲಿಯಲ್ಲಿ ಚರ್ಚಿಸಿ ತಮ್ಮ ಸಲಹೆಯಂತೆಕ್ರಮ ಕೈಗೊಳ್ಳಲಾಗುವುದು.<br>**<u>ಪ್ರಸ್ತುತ ಸ್ಥಿತಿ:</u>** ಯಥಾ ಸ್ಥಿತಿ ಮುಂದುವರೆದಿರುತ್ತದೆ. | ಸದರಿಯವರುಗಳಿಗೆ ಕಾನೂನು ಸಲಹೆಗಾರರ ಮುಖಾಂತರ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿರುತ್ತದೆ. ಮುಂದಿನ ಕ್ರಮವಾಗಿ ದಾವಾ ಕ್ರಮ ಕೈಗೊಳ್ಳಲು ವಕೀಲರಿಗೆ ಅವಶ್ಯಕ ದಾಖಲೆಗಳನ್ನು ನೀಡಲಾಗಿದ್ದು, ಕಾರ್ಯ ಪ್ರಗತಿಯಲ್ಲಿರುತ್ತದೆ. ಈಗಾಗಲೇ ಲಾಭ ವಿಲೇವಾರಿಯಲ್ಲಿ ಕರಡು ಸಂಶಯಾಸ್ಪದ ಸಾಲದ ನಿಧಿಗೆ ಮೊತ್ತವನ್ನು ತೆಗೆದಿರಿಸುತ್ತಿದ್ದು, ಹಂತ ಹಂತವಾಗಿ ಕಾಯ್ದಿರಿಸಲಾಗುವುದು. ಆದಾಗ್ಯೂ ಸದರಿ ವಿಷಯವನ್ನುಆಡಳಿತ ಮಂಡಲಿ ಸಭೆಯಲ್ಲಿ ಮಂಡಿಸಿ ತೀರ್ಮಾನ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು. |
| 15 ಮೀಸಲು ನಿಧಿ ಮತ್ತುಇತರೆ | 15.1 ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ | ಸದರಿ ವರ್ಷದಲ್ಲಿ ರೂ.1,582.83 ವ್ಯತ್ಯಾಸದ |

| | | |
|---|---|---|
| ನಿಧಿಗಳು | ಸಂಘಗಳ ನಿಯಮ 23 ರಂತೆ ರೂ.1,83,24,255.41 ಪತ್ರ್ಯೇಕವಾಗಿಗುಂತಾಯಿಸಲಾಗಿದೆ. ಇದರಲ್ಲಿ ರೂ.1,582.83ಈ ಮೊತ್ತವನ್ನುಗುಂತಾಯಿಸಲುಕ್ರಮವಿಡುವುದು. ವರದಿಗೆ ಕುಳುವಾರು ಲಗತ್ತಿಸಲಾಗಿದೆ.<br>ಗುಂತಾವಣೆಯ ಮೇಲಿನ ಬಡ್ಡಿ ರೂ.10,03,670/-ಗಳು ಸಾಲಾಖೈರಿಗೆ ಸಂಘದಖಾತೆಗೆಜಮಾಆಗಿರುತ್ತದೆ. | ಮೊತ್ತವನ್ನು ಮೀಸಲು ನಿಧಿಗೆ ವರದಿ ಸಾಲಿನಲ್ಲಿ ಜಮಾ ಮಾಡಲಾಗುವುದು. |
| 36.ಲೆಕ್ಕ ಪರಿಶೋಧಕರ ಸಲಹೆ ಹಾಗೂ ಸೂಚನೆಗಳು (ಲೆಕ್ಕ ಪರಿಶೋಧಕರು ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ನಂತರಸಂಘದ ಲೆಕ್ಕಪುಸ್ತಕಗಳ ನಿರ್ವಹಣೆ, ವ್ಯಾಪಾರ ವಹಿವಾಟು/ವ್ಯವಹಾರ ಗಳು, ಸಾಲಗಳ ನೀಡಿಕೆ ಹಾಗೂ ವಸೂಲಾತಿ, ಠೇವಣಿ ಸಂಗ್ರಹಣೆ ಹಾಗೂ ಹಿಂದಿರುಗಿಸುವಿಕೆ, ಸಂಘವು ಹೊಂದಿರುವ ಲಾಭ/ನಷ್ಟ ಹಾಗೂ ಸಂಘವು ಆರ್ಥಿಕಅಭಿವೃದ್ಧಿ ಹೊಂದಲು ಕೈಗೊಳ್ಳಬೇಕಾದ ಕ್ರಮಗಳ ಹಿನ್ನಲೆಯಲ್ಲಿ ನೀಡುವುದು) | 36.1 ಆಧಾರರಹಿತ ಸಾಲಗಳಾದ ಜಂಟಿಸಾಲ, ದಿನವಹಿ ತೀರುವಳಿ ಸಾಲ, ವಿದ್ಯಾಭ್ಯಾಸ ಸಾಲಗಳ ಮಂಜೂರಾತಿಗೆ ಸೂಕ್ತ ಭದ್ರತೆ ಪಡೆದುಕೊಳ್ಳಲು ಸೂಚಿಸಲಾಗಿದೆ. | ಲೆಕ್ಕಪರಿಶೋಧಕರ ಸಲಹೆ ಸೂಚನೆಯಂತೆ ಈಗಿನ ಸಾಲದ ಅರ್ಜಿಗಳೊಂದಿಗೆ ಅರ್ಜಿದಾರರ ಹಾಗೂ ಜಂಟಿದಾರರ ಆಧಾರ್, ಪಾನ್ ಪ್ರತಿಗಳು ಹಾಗೂ ವಿಳಾಸ ಧೃಡೀಕರಣದ ಮಾಹಿತಿಯನ್ನು ಪಡೆಯಲಾಗುತ್ತಿದೆ. |
| | 36.2 ಲೆಕ್ಕ ಪರಿಶೋಧನಾ ನಿರ್ದೇಶಕರ ಸುತ್ತೋಲೆಯಂತೆ ಹಿಂದಿನ ಆರ್ಥಿಕ ವರ್ಷ ಮುಕ್ತಾಯವಾದ 30 ದಿನಗಳ ಒಳಗೆ ವಾರ್ಷಿಕ ಹಣಕಾಸು ತ:ಖ್ತೆ ಮತ್ತು ಇತರೆ ಅಗತ್ಯ ದಾಖಲಾತಿಗಳನ್ನು ಆಡಳಿತ ಮಂಡಲಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಲೆಕ್ಕ ಪರಿಶೋಧಕರಿಗೆ ಹಾಜರು ಪಡಿಸುವುದು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ. ಇದರಂತೆ ಕ್ರಮವಿಡಲು ಸೂಚಿಸಲಾಗಿದೆ. | ಆರ್ಥಿಕ ತ:ಖ್ತೆಗಳನ್ನು ಅಂತಿಮಗೊಳಿಸಲು ಸಂಘವು ಹೂಡಿಕೆ ಮಾಡಿರುವ ಬ್ಯಾಂಕ್‌ಗಳಿಂದ ಆಕರಣೆಯಾಗಿರುವ ಬಡ್ಡಿ ಹಾಗೂ ಅದಕ್ಕೆ ಸಂಬಂಧಪಟ್ಟ ಆದಾಯ ತೆರಿಗೆ ಕಡಿತಗಳನ್ನು ಸಮನ್ವಯಗೊಳಿಸಲು ಹಾಗೂ ಟಿಡಿಎಸ್ ರಿಟರ್ನ್ಸ್ ಫೈಲ್ ಮಾಡಲು ಕಾಲಾವಕಾಶವಿದ್ದು, ಬ್ಯಾಂಕ್‌ಗಳು ಅನುಕರಣೆಯಾದ ಬಡ್ಡಿಗಳ ವಿವರಗಳನ್ನು ನೀಡಿದ ನಂತರ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ, ದಿನಾಂಕ:16.05.2023ರ ನಿರ್ದೇಶಕ ಮಂಡಲಿ ಸಭೆಯಲ್ಲಿ 2022-23ರ ಆರ್ಥಿಕತ:ಖ್ತೆ(ಅಂದಾಜು)ಗಳನ್ನು ಹಾಗೂ ಆಂತರಿಕ ಲೆಕ್ಕಪರಿಶೋಧಕರ ವರದಿಯನ್ನು ಅನುಮೋದನೆ ಪಡೆಯಲಾಗಿರುತ್ತದೆ. ನಂತರ ಸದರಿ ವರದಿಯನ್ನು ಸನ್ನದು ಲೆಕ್ಕಿಗರಿಗೆ ನೀಡಲಾಗಿರುತ್ತದೆ. |
| | 36.4 ಆಸ್ತಿ-ಜವಾಬ್ದಾರಿತ:ಖ್ತೆಯಲ್ಲಿಕಂಡುಬಂದಿರುವ ನಗದು ಪತ್ರಠೇವಣಿಯ ರೂ.59,200/- ಅವಧಿ ಮುಗಿದಿದ್ದು, ಇದಕ್ಕೆ ಸಂಬಂಧಪಟ್ಟ ಠೇವಣಿದಾರರನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಲು ಅಥವಾ ಅವಧಿ ಮೀರಿದ ಠೇವಣಿಗಳಿಗೆ ವರ್ಗಾಯಿಸಲು ಸೂಚಿಸಲಾಗಿದೆ. | ತಮ್ಮ ಸಲಹೆಯಂತೆ ಪ್ರತಿ ಸರ್ವಸದಸ್ಯರ ಸಭೆಯಲ್ಲಿಇದರ ಬಗ್ಗೆ ತಿಳುವಳಿಕೆ ನೀಡಲಾಗಿಯೂ ಸಹ ಸದಸ್ಯರ ಇದಕ್ಕೆ ಸ್ಪಂದಿಸಿರುವುದಿಲ್ಲ. ಠೇವಣಾತಿ ಹೊಂದಿರುವ ಕೆಲವೊಂದು ಸದಸ್ಯರು ಸಂಘದೊಂದಿಗೆ ನಿರಂತರ ವ್ಯವಹಾರ ಮಾಡುತ್ತಿಲ್ಲವಾದ್ದರಿಂದ ಅವರನ್ನು ಗುರುತಿಸಲು ಆಗುತ್ತಿಲ್ಲ. ಈ ಬಗ್ಗೆ ನಿರ್ದೇಶಕ ಮಂಡಲಿಯಲ್ಲಿ ಚರ್ಚಿಸಿ ಮುಂದಿನ ದಿನಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| | 36.5 ಪ್ರಸ್ತುತ ಮುಖ್ಯ ಶಾಖೆ ಮತ್ತು ವಿಜಯನಗರ | ತಂತ್ರಾಂಶದ ಉನ್ನತೀಕರಣದ ಸಂದರ್ಭದಲ್ಲಿ |

| | | |
|---|---|---|
| | ಶಾಖೆಯಲ್ಲಿ ಗಣಕೀಕೃತ ವ್ಯವಹಾರಗಳನ್ನು ಮಾಡುತ್ತಿದ್ದು ಅದರಲ್ಲಿಕೋರ್ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸಿಕೊಳ್ಳುವುದು ಹಾಗೂ ಸದರಿ ತಂತ್ರಾಂಶದಲ್ಲಿಯೇ ಲೆಕ್ಕ ಪರಿಶೋಧನೆಗೆ SystemAudit ವ್ಯವಸ್ಥೆ ಕಲ್ಪಿಸಲು ಕ್ರಮವಿಡುವುದು. | ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಮತ್ತು SystemAudit ವ್ಯವಸ್ಥೆಯನ್ನು ಮಾಡಿಕೊಂಡು ಅಳವಡಿಸಿಕೊಳ್ಳಲಾಗುವುದು. |
| | 36.6 6 ವರ್ಷ ಮೀರಿದ ಡಿಕ್ರಿಯಾಗದ ವಾಹನ ಸಾಲ ರೂ.2,90,049/– ಗಳಿಗೆ ಶೇ 100ರಷ್ಟು ಮಹಾಸಭೆಯ ಒಪ್ಪಿಗೆ ಪಡೆದು ಕಾಯ್ದಿರಿಸಲು ಸಲಹೆ ನೀಡಲಾಗಿದೆ. | ಸಂಘವು ಕರಡು ಸಂಶಯಾಸ್ಪದ ಸಾಲದ ನಿಧಿಗೆ ಮೊತ್ತವನ್ನು ಕಾಯ್ದಿರಿಸಲಾಗಿದ್ದು, ಮುಂದಿನ ಕ್ರಮವನ್ನು ನಿರ್ದೇಶಕ ಮಂಡಲಿಯಲ್ಲಿ ಚರ್ಚಿಸಿ ತಮ್ಮ ಸಲಹೆಯಂತೆ ಕ್ರಮ ಕೈಗೊಳ್ಳಲಾಗುವುದು. |
| | 36.7 6 ವರ್ಷ ಮೀರಿದ ಡಿಕ್ರಿಯಾಗದ 104 ಪ್ರಕರಣಗಳಿಂದ ಒಟ್ಟು ರೂ.25,68,980/–ಗಳಿಗೆ ಶೇ 100ರಷ್ಟು ಮಹಾ ಸಭೆಯ ಒಪ್ಪಿಗೆ ಪಡೆದು ಕಾಯ್ದಿರಿಸಲು ಸಲಹೆ ನೀಡಲಾಗಿದೆ. | ಸಂಘವು ಕರಡು ಸಂಶಯಾಸ್ಪದ ಸಾಲದ ನಿಧಿಗೆ ಮೊತ್ತವನ್ನು ಕಾಯ್ದಿರಿಸಲಾಗಿದ್ದು, ಮುಂದಿನ ಕ್ರಮವನ್ನು ನಿರ್ದೇಶಕ ಮಂಡಲಿಯಲ್ಲಿ ಚರ್ಚಿಸಿ ತಮ್ಮ ಸಲಹೆಯಂತೆ ಕ್ರಮ ಕೈಗೊಳ್ಳಲಾಗುವುದು. |
| | 36.8. ವರ್ಷಾಂತ್ಯಕ್ಕೆ ಅಮಾನತ್ತು ಖಾತೆಯಲ್ಲಿ ರೂ.1,84,888/–ಗಳಿದ್ದು, ಇದರ ಬಗ್ಗೆ ಸೂಕ್ತ ಕ್ರಮವಿಡಲು ಸೂಚಿಸಲಾಗಿದೆ. | ಅಮಾನತ್ತು ಖಾತೆಯಲ್ಲಿ ಹೆಚ್ಚಾಗಿ ಬ್ಯಾಂಕ್ ಖಾತೆಗೆ ನೆಫ್ಟ್ ಮುಖಾಂತರ ಹಣ ವರ್ಗಾವಣೆ ಮಾಡಿರುವ ಸದಸ್ಯರು ಸಂಘಕ್ಕೆ ತಿಳಿಯಪಡಿಸದೇ ಇರುವ ಬಾಬ್ತುಗಳಾಗಿರುತ್ತದೆ. ಹಾಗೆ ಷೇರು ಮುಕ್ತಾಯಕ್ಕೆ ಸಂಘದಿಂದ ಚೆಕ್ ನೀಡಲಾಗಿದ್ದು, ಸದಸ್ಯರು ಅದನ್ನು ಅವರ ಖಾತೆಗೆ ಜಮಾ ಮಾಡಿಕೊಳ್ಳದೇ ಅವಧಿ ಮುಗಿದಿರುವುದನ್ನು ಅಮಾನತ್ತು ಖಾತೆಯಲ್ಲಿಇಡಲಾಗಿದೆ. ಈ ಮೊತ್ತವನ್ನು ಮುಂದಿನ ದಿನದಲ್ಲಿ ಸಂಬಂಧಪಟ್ಟವರು ಮಾಹಿತಿ ನೀಡಿದ ತಕ್ಷಣ ಅವರ ಖಾತೆಗೆ ವರ್ಗಾಯಿಸಲಾಗುವುದು ಹಾಗೂ ಷೇರು ವಾಪಸಾತಿಗಳ ಪಾವತಿಗೆ ಬೇರೆ ಬದಲಿ ಚೆಕ್ ನೀಡಲಾಗುವುದು. |
| | 36.9 ತಿದ್ದುಪಡಿಯಾದ ಉಪನಿಯಮದಲ್ಲಿ ಸಂಘ–ಸಂಸ್ಥೆಗಳು ಯಾವುದೇ ಸದಸ್ಯರುಗಳು ಅವಕಾಶವಿಲ್ಲದೇ ಇರುವುದರಿಂದ ಸಂಘ–ಸಂಸ್ಥೆಗಳ ಹೆಸರಿನಲ್ಲಿ ಇರುವ ಷೇರು ಮೊಬಲಗನ್ನು ವಾಪಸ್ಸು ಮಾಡಲು ಸೂಚಿಸಲಾಗಿದೆ. | ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 16 (ಇ) ರೀತ್ಯ ಅವಕಾಶವಿರುವುದರಿಂದ ದಿನಾಂಕ: 27/08/2023ರಂದು ನಡೆಯಲಿರುವ ಸರ್ವ ಸದಸ್ಯರ ಸಭೆಯಲ್ಲಿ ಉಪನಿಯಮದಲ್ಲಿ ಅಳವಡಿಸಿಕೊಂಡು ತಿದ್ದುಪಡಿಗೆ ಇಡಲಾಗಿದೆ. |
| 37 ಲೆಕ್ಕ ಪರಿಶೋಧನಾ ಫಲಿತಾಂಶ ಮತ್ತುಕ್ರಮವಿಡಬೇಕಾದ ಕಂಡಿಕೆಗಳು: | 37.1 ಡಿಕ್ರಿಯಾದ ದಿನಾಂಕದಿಂದ 12 ವರ್ಷದ ಒಳಗಾಗಿ ಅಮಲ್ಜಾರಿ ಕೈಗೊಳ್ಳದಿರುವಂತಹ ಸಾಲಗಳಿಗೆ ಶೇ.100ರಷ್ಟು ಮೀಸಲು ಇಡಲು ಸೂಚಿಸಲಾಗಿದೆ. | ನಿರ್ದೇಶಕ ಮಂಡಲಿ ತೀರ್ಮಾನದಂತೆ ಕ್ರಮವಿಡಲಾಗುವುದು. |
| | 37.2 ಸಂಘವು ವಕೀಲರಿಂದ 93 ಸುಸ್ತಿ ಸಾಲಗಾರರಿಗೆ ತಿಳುವಳಿಕೆ ಪತ್ರ ನೀಡಿದ್ದರೂ ಸಹ ಸುಸ್ತಿ ಸಾಲಗಳ ವಸೂಲಾತಿಗಾಗಿ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ದಾವಾ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ನಿರ್ದೇಶಕ ಮಂಡಲಿ ಸಭೆಯಲ್ಲಿಅನುಮತಿ ಪಡೆದು ಸಹಕಾರ ಸಂಘಗಳ ಕಾಯ್ದೆ ಪ್ರಕಾರ ದಾವಾ ಕ್ರಮ ಕೈಗೊಳ್ಳಲು ವಕೀಲರಿಗೆ ಅವಶ್ಯಕ ದಾಖಲೆಗಳನ್ನು ಈಗಾಗಲೇ ನೀಡಲಾಗಿದ್ದು, ಕಾರ್ಯ ಪ್ರಗತಿಯಲ್ಲಿರುತ್ತದೆ. |

ಖೀಙ

ಖ02ಈ ಮೇಲಿನ ವಿವರಗಳಿಗೆ ಸಂಬಂಧಿಸಿದಂತೆ ಶ್ರೀ ಚಂದ್ರಶೇಖರ್ ರವರು ಮಾತನಾಡಿ 36.6 ಹಾಗೂ 36.7ರಲ್ಲಿ ಲೆಕ್ಕ ಪರಿಶೋಧಕರು ಶೇ.100 ರಷ್ಟು ಕರಡು ಸಂಶಯಾಸ್ಪದ ಸಾಲವನ್ನು ಮಹಾಸಭೆಯಲ್ಲಿ ಒಪ್ಪಿಗೆ ಪಡೆದು ಕಾಯ್ದಿರಿಸಲು ತಿಳಿಸಿರುವುದಕ್ಕೆಯನಿನಿರ್ದೇಶಕ ಮಂಡಲಿ ಸಭೆಯ ನಿರ್ಧಾರದಂತೆ ಕ್ರಮಕೈಗೊಳ್ಳುವಂತೆ ತಿಳಿಸಿದ್ದು, ವಾಹನ ಸಾಲದ ಬಗ್ಗೆ ಸಂಘದಿಂದ ವಾಹನಗಳನ್ನು ಸಾಲ ವಸೂಲಾತಿಗೆ ಸಂಘದ ಸುಪರ್ದಿಗೆ ವಾಹನ ವಶಪಡಿಸಿಕೊಳ್ಳಲಾಗಿದೆಯೇ ಎಂದು ಕೇಳಿದರು. ಮಹಾಸಭೆಗೆ ಯಾವುದೇ ಮಾಹಿತಿಯನು ನೀಡಿರುವುದಿಲ್ಲ ಎಂದು ತಿಳಿಸಿದರು ಸಭೆಯಲ್ಲಿ ಇದರ ಬಗ್ಗೆ ಯಾವ ಕ್ರಮವನ್ನು

ಕೈಗೊಳ್ಳಲಾಗಿದೆ ಎಷ್ಟು ಮೊತ್ತವನ್ನು ಕಾಯ್ದಿರಿಸಬೇಕು ಎಂಬ ಸ್ಪಷ್ಟ ವಿವರ ನೀಡುವಂತೆ ತಿಳಿಸಿದರು.ಖು ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಲೆಕ್ಕ ಪರಿಶೋಧಕರ ಸಲಹೆಗೂ ನಿಮ್ಮ ಅನುಪಾಲನ್ನ ವರದಿಗೂ ಹೊಂದಾಣಿಕೆಯಾಗುವುದಿಲ್ಲವೆಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ವಾಹನ ವಶಪಡಿಸಿಕೊಂಡಲ್ಲಿ ಆ ಮೊತ್ತವನ್ನು ಹೊರತು ಪಡಿಸಿ ಮಿಕ್ಕ ಮೊತ್ತವನ್ನು ಕಾಯ್ದಿರಿಸುವ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಇದರ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಈ ಸುಸ್ತಿಸಾಲಗಳು ಅವಧಿ ಮುಕ್ತಾಯವಾಗಿದ್ದು ಸಂಘದಿಂದ ಯಾವುದೇ ಕ್ರಮಕೈಗೊಳ್ಳದೇ ಇರುವ ಖಾತೆಗಳನ್ನು ಸ್ಪಷ್ಟ ಮಾಹಿತಿ ಪಡೆದು ಕ್ರಮವಿಡಬೇಕು ಎಂದು ತಿಳಿಸಿದರು. ಶ್ರೀ ಚಂದ್ರ ಶೇಖರ್ ರವರು ಮಾತನಾಡಿ ಈ ಹಿಂದೆ ವರ್ಚ್ಯೂಲ್ ಸಭೆಯಲ್ಲಿ ತಾವು ಕಾಯ್ದಿರಿಸಿದ ನಿಧಿಯಿಂದ 15 ಖಾತೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದರ ಸಂಬಂಧ ನಾನು ಇದರ ಬಗ್ಗೆ ಮರಣ ಹೊಂದಿರುವ ಬಗ್ಗೆ ದಾಖಲೆ ಪಡೆಯದೇ ಮಾಡಲು ಸಾಧ್ಯವಿಲ್ಲದಿರುವ ಬಗ್ಗೆ ಪತ್ರವನ್ನು ನೀಡಲಾಗಿದೆ. ಈ ವಿಷಯವನ್ನು ದಾಖಲೆ ಪಡೆದು ಮುಂದುವರೆಯುವಂತೆ ತಿಳಿಸಲಾಗಿರುತ್ತದೆ. ಇನ್ನು ದಾಖಲೆ ಪಡೆಯಲು ಸಾಧ್ಯಾವಾಗಿಲ್ಲದೆ ಇರುವುದರಿಂದ ಹೊಂದಾಣಿಕೆ ಮಾಡಲು ಆಗುವುದಿಲ್ಲ ಎಂದು ತಿಳಿಸಿದರು.ಸ್ತುಅಧ್ಯಕ್ಷರು ಮಾತನಾಡಿ ಸಂಘದಿಂದ ಸದರಿ ನಾಮಿನಿದಾರರಿಗೆ ಮರಣ ನಿಧಿಯಿಂದ ಮೊತ್ತವನ್ನು ನೀಡಿರುವ ದಾಖಲೆಯನ್ನು ಆಧಾರ ಮಾಡಿಕೊಳ್ಳಬಹುದಾಗಿದ್ದು, ಅದರಂತೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಇದಕ್ಕೆ ಒಪ್ಪಿಗೆ ನೀಡುವಂತೆ ಉಪಾಧ್ಯಕ್ಷರು ಕೇಳಲಾಗಿ ಶ್ರೀ ಗೋಪಾಲಸ್ವಾಮಿ, ಶ್ರೀಮತಿ ಆಂಡಾಳ್, ಶ್ರೀಮತಿ ರೂಪ, ಶ್ರೀ ಶ್ರೀಕಾಂತ್ ಚೆನ್ನಿಗಾ, ಶ್ರೀ ಗುರುಪ್ರಸಾದ್ ರವರು ಸೂಚಿಸುವುದರ ಮೂಲಕ ಅನುಮೋದನೆ ನೀಡಲಾಯಿತು. ರ್ನೇಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಮತ್ತು ಅನುಾಧ್ಯಕ್ಷರಾದ ಶ್ರೀ ಹೆಚ್.

## 12. 2022–23ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳು:

2022–23ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳ ಬಗ್ಗೆ, ನಿರ್ದೇಶಕರಾದ ಶ್ರೀಮತಿ ಎಂ.ಎನ್.ಸೌಮ್ಯರವರು ಸಭೆಯಲ್ಲಿ ಮಂಡಿಸಿದರು.

**ಸಂಘದ ಉಪನಿಯಮದ ಸಂಖ್ಯೆ 89.3ರನ್ವಯ ಲಾಭ ಹಂಚಿಕೆಯನ್ನು ನಿರ್ದೇಶಕ ಮಂಡಲಿ ಸದಸ್ಯರ ಸಭೆಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದ್ದು, ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.**

| ಕ್ರ ಸಂ | ಲಾಭ ವಿಲೇವಾರಿ | ಹಂಚಿಕೆಯ ಮೊಬಲಗು ರೂ. |
|---|---|---|
| | ನಿವ್ವಳ ಲಾಭ 31/03/2023ಕ್ಕೆ ಇದ್ದಂತೆ | **51,82,284.09** |
| 1 | ಆಪದ್ಧನ ನಿಧಿ (ಶೇಕಡ 25%) | 12,95,572.09 |
| 2 | ಸಹಕಾರ ಶಿಕ್ಷಣ ನಿಧಿ (ಶೇಕಡ 2%) | 77,734.00 |
| | | **38,08,978.00** |
| 3 | ಲಾಭಾಂಶ (ಶೇಕಡ 10 ರಂತೆ) | 29,53,675.00 |
| 4 | ಕರಡು ಸಾಲದ ನಿಧಿ | 2,21,315.00 |
| 5 | ಸದಸ್ಯರ ಮರಣೋತ್ತರ ನಿಧಿ | 27,500.00 |
| 6 | ವಿದ್ಯಾ ನಿಧಿ | 50,000.00 |
| 7 | ಕಟ್ಟಡ ನಿಧಿ | 50,000.00 |
| 8 | ಸಿಬ್ಬಂದಿ ಕ್ಷೇಮನಿಧಿ | 5,032.00 |
| 9 | ಸುವರ್ಣ ಮಹೋತ್ಸವ ನಿಧಿ | 50,000.00 |
| 10 | ಸಿಬ್ಬಂದಿ ಬೋನಸ್ಸ್/ಎಕ್ಸ್‌ಗ್ರೇಷಿಯ | 1,00,000.00 |

| | | |
|---|---|---|
| 11 | ಧರ್ಮದ ನಿಧಿ | 5,234.00 |
| 12 | ಲಾಭಾಂಶ ಸಮೀಕರಣ ನಿಧಿ | 3,25,000.00 |
| 13 | ಶತಮಾನೋತ್ಸವ ನಿಧಿ | 6,222.00 |
| 14 | ಸಿಬ್ಬಂದಿ ವಿದ್ಯಾನಿಧಿ | 5,000.00 |
| 15 | ಪ್ರಚಾರ/ಜಾಹೀರಾತು ನಿಧಿ | 10,000.00 |
| | **ಒಟ್ಟು ಮೊತ್ತ** | **38,08,978.00** |

ಸದಸ್ಯರಾದ ಶ್ರೀ ಚಂದ್ರಶೇಖರ್‌ರವರು ಮಾತನಾಡಿ, ಮರಣ ನಿಧಿ ಕಡಿಮೆ ಇದ್ದು, ಶತಮಾನೋತ್ಸ ನಿಧಿ ಕಳೆದ ಸಭೆಯಲ್ಲಿ ತಿಳಿಸಲಾಗಿತ್ತು ಸುವರ್ಣ ಮಹೋತ್ಸವ ನಿಧಿ ಮೊದಲು ಪ್ರಾಶಸ್ತ್ಯ ನೀಡಲು ಎಂದು. ಮರಣ ನಿಧಿಗೆ ಹೆಚ್ಚು ಮಾಡಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಮುಂದೆ ಹೆಚ್ಚು ಮಾಡಲಾಗುವುದು ಈ ಬಾರಿಗೆ ಲೆಕ್ಕಾಚಾರ ಮಾಡಿ ಮಾಡಿರುವುದು ಸಾಕಾಗುತ್ತದೆ ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಈ ಬಾರಿ ಸಿಬ್ಬಂದಿ ಬೋನಸ್/ಎಕ್ಸ್‌ಗ್ರೇಷಿಯಾ ಲಾಭಾಂಶದಲ್ಲಿ ತೆಗೆದಿರಿಸಿರುವುದು ಒಳ್ಳೆಯದು ಎಂದು ತಿಳಿಸಿ ಇದಕ್ಕೆ ನಮ್ಮ ಪ್ರಶಂಸೆ ಇರುತ್ತದೆ ಎಂದು ತಿಳಿಸಿದರು. ಈ ಮಧ್ಯೆ ಅಧ್ಯಕ್ಷರು ಒಳ್ಳೆಯ ಅಭಿಪ್ರಾಯಗಳನ್ನು ತಿಳಿಸಿದ ಎಲ್ಲರಿಗೂ ವಂದಿಸುತ್ತಾ, ಸಂಘದಿಂದ ಶೇಕಡಾ 10% ಲಾಭಾಂಶವನ್ನು ಘೋಷಿಸಿದರು.

ನಂತರ ಸದಸ್ಯರುಗಳಾದ ಶ್ರೀ ನಾಗರಾಜು, ಶ್ರೀ ಪುಟ್ಟಸ್ವಾಮಿ, ಶ್ರೀ ರಾಜಶೇಖರ್, ಶ್ರೀ ಯೋಗಾ ನರಸಿಂಹ, ಶ್ರೀ ವಿಕ್ರಮ ಅಯ್ಯಂಗಾರ್, ಮತ್ತು ಶ್ರೀ ಎಸ್.ಎಸ್. ಮೂರ್ತಿ ಹಾಗೂ ಇತರ ಸದಸ್ಯರುಗಳು, ಅನುಮೋದನೆ ನೀಡಿದರು.

ಸದಸ್ಯರಾದ ಶ್ರೀ ವಾದಿರಾಜ್‌ರವರು ಮಾತನಾಡಿ, ಸಭೆಯಲ್ಲಿನ ಚರ್ಚೆಗಳ ಬಗ್ಗೆ ಮಾತನಾಡುತ್ತ, ಸುಮಾರು 3 ವರ್ಷಗಳಿಂದ ಸಂಸ್ಥೆಯ ಆಗುಹೋಗುಗಳನ್ನು ಹಾಗೂ ಸಂಘದ ಸರ್ವಸದಸ್ಯರ ಸಭೆಗಳನ್ನು ಗಮನಿಸುತ್ತಾ ಬಂದಿದ್ದೇನೆ, ಆದರೆ ಪ್ರತಿ ವರ್ಷವೂ ವಾರ್ಷಿಕ ವರದಿಗಳಲ್ಲಾಗಲೀ ಅನುಪಾಲನಾ ವರದಿಗಳಲ್ಲಿಯಾಗಲೀ ಸಾಕಷ್ಟು ತಪ್ಪುಗಳನ್ನು ಸಭೆಯಲ್ಲಿ ಸದಸ್ಯರುಗಳು ಹೇಳುತ್ತಲೇ ಬಂದಿದ್ದಾರೆ, ಸರಿಪಡಿಸಿಕೊಳ್ಳುವಂತೆ ಹಾಗೂ ತಿದ್ದಿಕೊಳ್ಳುವಂತೆ, ಕೆಲವು ಸದಸ್ಯರುಗಳು ಉತ್ತಮ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ, ಆದರೆ ಪ್ರತಿ ವರ್ಷ ಸಂಘದ ಸಭೆಗಳಲ್ಲೂ ಅದೇ ತಪ್ಪುಗಳು ಪುನರಾವರ್ತನೆಯಾಗುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾ, ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ, ತಿಳುವಳಿಕೆಯಿರುವ ನಿರ್ದೇಶಕರುಗಳು, ಅಲ್ಲದೇ, ಅನೇಕ ಹಿರಿಯ ನಿರ್ದೇಶಕರುಗಳು ಇದ್ದರೂ, ಈ ರೀತಿ ಆಗುತ್ತಿದೆ ಎಂದರೆ ಏನರ್ಥ? ಎಂದು ಪ್ರಶ್ನಿಸಿದರು.

ಸದಸ್ಯರಾದ ಶ್ರೀ ರಾಘವೇಂದ್ರ ರಾವ್‌ರವರು ಮಾತನಾಡಿ, ನಾನು 28 ವರ್ಷಗಳಿಂದ ನೋಡುತ್ತಾ ಬಂದಿದ್ದು, ಈ ಸಂಘ ಸಾಕಷ್ಟು ವರ್ಷಗಳ ಹಿಂದಿನಿಂದ ಅಭಿವೃದ್ಧಿ ಹೊಂದುತ್ತಾ ಬಂದಿದ್ದು, ಬಹಳ ವಿಸ್ತಾರವಾದ ಇತಿಹಾಸವನ್ನು ಹೊಂದಿದೆ, ಪ್ರಾಮಾಣಿಕತೆಯ ಪ್ರತಿರೂಪವಾಗಿರುತ್ತದೆ ಎಂದು ಹೆಮ್ಮೆಯಿಂದ ತಿಳಿಸಲು ಇಚ್ಚಿಸುತ್ತೇನೆ, ಸದಸ್ಯರುಗಳ ಸಂಖ್ಯೆ ಕೂಡಾ ಜಾಸ್ತಿಯಾಗಿಯೇ ಇದ್ದು, ಈ ಸಂಘದ ಜವಾಬ್ದಾರಿ ಎಲ್ಲರದ್ದೂ ಆಗಿರುತ್ತದೆ, ಸಂಘದ ಕೆಲಸಕಾರ್ಯಗಳ ಪ್ರಕ್ರಿಯೆಯಲ್ಲಿ ಬಹಳ ವಿಸ್ತಾರವಿದ್ದು, ಸಣ್ಣಪುಟ್ಟ ದೋಷಗಳು ಇದ್ದೇ ಇರುವುದು ಸಾಮಾನ್ಯವಾಗಿದೆ, ಸಭೆಯಲ್ಲಿನ ಸದಸ್ಯರುಗಳ ಸಲಹೆ, ಸೂಚನೆಗಳನ್ನು ಅಳವಡಿಸಿಕೊಂಡು ಪ್ರತೀ ವರ್ಷ ಹಂತ ಹಂತವಾಗಿ ಪ್ರಗತಿಯಾಗುತ್ತಿರುವುದಕ್ಕೆ ಎಲ್ಲಾ ನಿರ್ದೇಶಕರ ಆಸಕ್ತಿಯನ್ನು ಮತ್ತು ಜವಾಬ್ದಾರಿಯನ್ನು ತೋರಿಸುತ್ತದೆ ಮತ್ತು ಸಂಘದ ಕಚೇರಿ ಸಿಬ್ಬಂದಿಗಳೂ ಸಹ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇಷ್ಟು ದೊಡ್ಡ ಸಂಸ್ಥೆಯನ್ನು ನಿರ್ವಹಣೆ ಮಾಡುವ ಸಂದರ್ಭದಲ್ಲಿ ಸಣ್ಣ ಪುಟ್ಟ ತಪ್ಪುಗಳನ್ನು ಹೈಲೈಟ್ ಮಾಡುವುದು ಬೇಡ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಶ್ರೀನಿವಾಸ ಶರ್ಮಾರವರುರವರು ಮಾತನಾಡಿ, ಈ ಸಂಘದಲ್ಲಿ 2004ರಿಂದಲೂ ತಾನು ಸದಸ್ಯನಾಗಿದ್ದು, ಸಂಘದ ಎಲ್ಲಾ ಆಗುಹೋಗುಗಳನ್ನು ಗಮನಿಸುತ್ತಾ ಬಂದಿದ್ದು, ಯಾರೊಬ್ಬರೂ ಕೂಡ ಯಾವುದೇ ಹಣಕಾಸಿನ ಅವ್ಯವಹಾರ ಮಾಡಿರುವುದಿಲ್ಲ, ಯಾವುದೇ ವೈಯಕ್ತಿಕ ಲಾಭಗಳನ್ನು ಇಟ್ಟುಕೊಂಡು ಕೆಲಸ ನಿರ್ವಹಿಸಿಲ್ಲ, ಸಂಘದಿಂದ ಆರ್ಥಿಕ ಹಗರಣಗಳನ್ನು ನಡೆಸಿಲ್ಲ, ಆದರೆ ಸಭೆಯಲ್ಲಿ ಚರ್ಚಿಸುವಾಗ ವಾರ್ಷಿಕ ವರದಿಯಲ್ಲಾಗಲೀ, ಹೋದ ವರ್ಷದ ಆಡಿಟ್‌ಗಳಲ್ಲಿಯಾಗಲೀ ಅಥವಾ ನಡಾವಳಿಯಲ್ಲಾಗಲೀ ಯಾವುದಾದರೂ ಗೊಂದಲಗಳಿದ್ದಲ್ಲಿ, ಅವುಗಳನ್ನು ಸರಿಪಡಿಸಿಕೊಳ್ಳುವಂತೆ ಸಲಹೆ ಸೂಚನೆಗಳನ್ನು ನೀಡಲಾಗುತ್ತದೆ ಎಂದು ತಿಳಿಸುತ್ತಾ, ಕಚೇರಿಯಲ್ಲಿ ಆಗಬಹುದಾದ ಕೆಲವು ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಿಕೊಳ್ಳಲು ಸಭೆಯಲ್ಲಿನ ಚರ್ಚೆಯ ಮೂಲಕ ತಿಳಿಸಲಾಗುವುದಾಗಿ ವಿವರ ನೀಡಿದರು.

ಶ್ರೀ ಕೃಷ್ಣರವರು ಮಾತನಾಡಿ ಈ ಸರ್ವ ಸದಸ್ಯರ ಸಭೆಯಲ್ಲಿ ಯಾರು ವೈಯಕ್ತಿಕವಾಗಿ ಆರೋಪಗಳು ಬೇಕಿರುವುದಿಲ್ಲ, ಎಲ್ಲರು ಸಂಘದ ಹಿತದೃಷ್ಟಿಯಿಂದ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ. ಸಂಘದ ಶ್ರೇಯೋಭಿವೃದ್ಧಿಗಾಗಿ ಕೆಲವು ಚರ್ಚೆಗಳು ಅವಶ್ಯವಾಗಿರುತ್ತದೆ ಎಂದು ತಿಳಿಸಿದರು. ಉಪಾಧ್ಯಕ್ಷರು ಮಾತನಾಡಿ 27 ವರ್ಷಗಳಿಂದ ಈ ರೀತಿ ಚರ್ಚೆಗಳು ಬರುತ್ತಿದ್ದು, ವೇದಿಕೆ ಮೇಲೆ ಕುಳಿತವರು ಯಾರು ಪೆದ್ದರಲ್ಲ ಎಂದು ಹೇಳಿದರು. ಶ್ರೀ ಕೃಷ್ಣರವರು ಮಾತನಾಡಿ ನಾವು ಪೆದ್ದರು ಎಂಬ ಪದವನ್ನು ಉಪಯೋಗಿಸಿರುವುದಿಲ್ಲ ಎಂದು ತಿಳಿಸಿದರು. ಉಪಾಧ್ಯಕ್ಷರು ಮಾತನಾಡಿ ಇಲ್ಲಿ ಕೆಲವರು ನಿರ್ದೇಶಕರಾಗಿದ್ದು, ಅವರ ಕಾಲದಲ್ಲೂ ಇದೇ ರೀತಿ ಇತ್ತು ಅದನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಇದನ್ನು ಮುಂದುವರೆಸುವುದು ಬೇಡ ಎಂದು ಹೇಳಿದರು. ಹೆಚ್ಚಾಗಿ ಚರ್ಚೆ ಮಾಡುವ ಸದಸ್ಯರು ಸಂಘದ ವಿರೋಧಿಗಳು ಅಲ್ಲ, ಸಂಘದ ಅಭಿವೃದ್ಧಿಗೆ ಪೂರಕವಾದ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತಿದ್ದು ಯಾರು ವೈಯಕ್ತಿಕವಾಗಿ ದೋಷಾರೋಪಣೆ ಮಾಡುವುದು ಬೇಡ ಎಂದು ತಿಳಿಸಿದರು.

**13. 2022–23ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಾಗಿ ಖರ್ಚಾಗಿರುವ ಮೊತ್ತಕ್ಕೆ ಅನುಮೋದನೆ ನೀಡುವುದು ಮತ್ತು 2023–24ನೇ ಸಾಲಿನ ಆಯವ್ಯಯದ ಅಂದಾಜು ಮಂಜೂರಾತಿ:**

ನಿರ್ದೇಶಕರಾದ ಶ್ರೀ ಕೆ.ಎನ್.ಅರುಣ್‌ರವರು, ಮೇಲ್ಕಂಡ ವಿಷಯವನ್ನು ಸರ್ವಸದಸ್ಯರ ಸಭೆಯಲ್ಲಿ ಮಂಜೂರಾತಿಗೆ ಮಂಡಿಸಿದರು. ವಿವರಗಳು ಈ ಕೆಳಗಿನಂತೆ:

**2022–23ನೇ ಸಾಲಿಗೆ ವಾಸ್ತವವಾಗಿ ಆಗಿರುವ ಖರ್ಚು, ಅನುಮೋದನೆಗಿಂತ ಹೆಚ್ಚುವರಿ ಆಗಿರುವ ವಿವರ ಸರ್ವಸದಸ್ಯರ ಸಭೆಯ ಮಂಜೂರಾತಿಗೆ ಹಾಗೂ 2023–24ನೇ ಸಾಲಿಗೆ(ಅಂದಾಜು) ಆಯ–ವ್ಯಯ ಪಟ್ಟಿಯನ್ನು ದಿನಾಂಕ:29/03/2023ಕ್ಕೆ ಆಡಳಿತ ಮಂಡಲಿ ವಿಷಯ ಸಂಖ್ಯೆ:4ರಲ್ಲಿ ಅನುಮೋದಿಸಿರುವ ಅಂದಾಜು ಆಯ–ವ್ಯಯ ಪಟ್ಟಿಯ ತುಲನಾತ್ಮಕ ವಿವರಗಳನ್ನು ಸರ್ವ ಸದಸ್ಯರ ಸಭೆಯ ಮಂಜೂರಾತಿಗೆ ಮಂಡಿಸಲಾಗಿದೆ.**

| ವಿವರಗಳು | 2022–23ಕ್ಕೆ ಅಂದಾಜು ಮಂಜೂರಾಗಿದ್ದ ಮೊತ್ತ (ರೂ) | 31/03/2023 ಕ್ಕೆ ವಾಸ್ತವವಾಗಿ ಆಗಿರುವುದು ಒಟ್ಟು (ರೂ) | ಮಂಜೂರಾತಿ ಗಿಂತ ಹೆಚ್ಚಾಗಿ ಖರ್ಚಾಗಿ ರುವುದು | 2023–24ನೇ ಸಾಲಿನ ಅಂದಾಜು ಆಯ–ವ್ಯಯ ಮಂಜೂರಾತಿಗೆ (ರೂ) |
|---|---|---|---|---|
| **ಖರ್ಚು ವಿವರಗಳು** | | | | |
| **1) ಠೇವಣಿಗಳ ಮೇಲಿನ ಬಡ್ಡಿ ಪಾವತಿ:** | 1,65,00,000 | 1,64,03,517 | | 1,75,00,000 |
| **ಮೊತ್ತ(1)** | **1,65,00,000** | **1,64,03,517** | | **1,75,00,000** |
| **2) ಆಡಳಿತ ನಿರ್ವಹಣಾ ವೆಚ್ಚಗಳು:** | | | | |
| ಸಿಬ್ಬಂದಿ ವೆಚ್ಚಗಳು: | 45,00,000 | 42,60,156 | | 50,00,000 |
| **ಮೊತ್ತ(2)** | **45,00,000** | **42,60,156** | | **50,00,000** |
| **3) ರಿಪೇರಿ ಮತ್ತು ನವೀಕರಣ ವೆಚ್ಚಗಳು:** | | | | |
| ರಿಪೇರಿ ಮತ್ತು ನವೀಕರಣ | 1,00,000 | 45,704 | | 1,00,000 |
| ನಾಮಫಲಕ ವೆಚ್ಚ | | 22,000 | | |
| ಗಣಕಯಂತ್ರ ನಿರ್ವಹಣಾ ವೆಚ್ಚ | 1,50,000 | 76,899 | | 1,00,000 |
| ನಿರ್ವಹಣಾ ವೆಚ್ಚ (ಜೆರಾಕ್ಸ್ ಯಂತ್ರ, ಯು ಪಿ ಎಸ್, ಜನರೇಟರ್, ಮಾಪನ ಯಂತ್ರದ ಬಾಬ್ತು ಪಾವತಿ) | 60,000 | 23,199 | | 50,000 |
| **ಮೊತ್ತ (3)** | **3,10,000** | **1,67,802** | | **2,50,000** |

| | | | | |
|---|---|---|---|---|
| **4) ಕಮಿಷನ್ ಮತ್ತು ಸಾಲ ವಸೂಲಾತಿ ವೆಚ್ಚಗಳು:** | | | | |
| ದಿನವಹಿ ಮರುಪಾವತಿ ಸಾಲದ ಕಮೀಷನ್ | 75,000 | 49,522 | | 75,000 |
| ಪಿಗ್ಮಿ ಸಂಗ್ರಹಕಾರರಿಗೆ ಪ್ರೋತ್ಸಾಹ ಧನ | 1,00,000 | 58,000 | | 75,000 |
| ಪ್ರೋತ್ಸಾಹ ಧನ (ಎಲ್.ಆರ್.ಸಿ) | 25,000 | 32,660 | 7,660 | 75,000 |
| ಪಿಗ್ಮಿ ಕಮಿಷನ್ | 3,25,000 | 3,55,918 | 30,918 | 3,75,000 |
| ಸಾಲ ವಸೂಲಾತಿ ವೆಚ್ಚ | 75,000 | 2,901 | | 25,000 |
| **ಮೊತ್ತ (4)** | **6,00,000** | **4,99,001** | **38,578** | **6,25,000** |
| **5) ಇತರೆ ಆಡಳಿತ ನಿರ್ವಹಣಾ ವೆಚ್ಚಗಳು:** | | | | |
| ನೀರಿನ ಕಂದಾಯ | 20,000 | 8,645 | | 20,000 |
| ಸಂಘದ ವೃತ್ತಿ ತೆರಿಗೆ | 5,000 | 5,000 | | 5,000 |
| ವಿದ್ಯುತ್ ವೆಚ್ಚ | 1,00,000 | 93,728 | | 1,25,000 |
| ವಿಮೆ ವಂತಿಗೆ | 1,25,000 | 1,08,592 | | 1,25,000 |
| ಲಾಕರ್ ಬಾಡಿಗೆ | 2,000 | 1,750 | | 2,000 |
| ದೂರವಾಣಿ ವೆಚ್ಚ | 60,000 | 44,600 | | 60,000 |
| ಅಂಚೆ ವೆಚ್ಚ | 50,000 | 22,492 | | 50,000 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 1,00,000 | 1,25,232 | 25,232 | 1,50,000 |
| ಪಹರೆ ಮತ್ತು ರಕ್ಷಣೆ ಹೊರಗುತ್ತಿಗೆ ಸಿಬ್ಬಂದಿ ವೆಚ್ಚ | 6,00,000 | 4,81,673 | | 6,00,000 |
| ದಿನಪತ್ರಿಕೆ ಚಂದಾ | 15,000 | 9,350 | | 15,000 |
| ಗೌರವ ಧನ ಪಾವತಿ (ಪದಾಧಿಕಾರಿಗಳಿಗೆ) | 30,000 | 21,000 | | 30,000 |
| ಗೌರವ ಧನ ಪಾವತಿ (ಇತರೆ) | 10,000 | – | | 10,000 |
| ವಾರ್ಷಿಕೋತ್ಸವದ ವೆಚ್ಚ | 30,000 | 53,425 | 23,425 | 75,000 |
| ಸರ್ವ ಸದಸ್ಯರ ಸಭೆಯ ವೆಚ್ಚ | 3,00,000 | 3,87,478 | 87,478 | 5,00,000 |
| ಲೆಕ್ಕ ಪರಿಶೋಧನಾ ಶುಲ್ಕ 2021–22 | 1,50,000 | 1,35,000 | | 1,50,000 |
| ವೃತ್ತಿ ಶುಲ್ಕ | 75,000 | 1,53,700 | 78,700 | 1,75,000 |
| ಕಟ್ಟಡ ಕಂದಾಯ | 1,25,000 | 1,07,246 | | 1,25,000 |
| ಪ್ರಯಾಣ ಭತ್ಯೆ | 75,000 | 68,550 | | 75,000 |
| ಸಭಾ ಭತ್ಯೆ | 1,50,000 | 1,18,000 | | 1,50,000 |
| ಜಾಹಿರಾತು ವೆಚ್ಚ | 50,000 | – | | – |
| ಸಂಭಾವನೆ (ಆಂತರಿಕ ಲೆಕ್ಕ ಪರಿಶೋಧಕರಿಗೆ) | 1,50,000 | 1,45,000 | | 1,50,000 |
| ಸಾದಿಲ್ವಾರು | 5,50,000 | 5,57,299 | 7,299 | 6,00,000 |
| ಕಾನೂನು ವೆಚ್ಚ /ದಾವಾ ಶುಲ್ಕ | 50,000 | 10,960 | | 50,000 |
| ಕ್ಯಾಲೆಂಡರ್ ಮುದ್ರಣ ಬಾಬ್ತು | 50,000 | 50,850 | 850 | 60,000 |
| ಬ್ಯಾಂಕ್ ಛಾರ್ಜಸ್ | 10,000 | 5,027 | | 10,000 |
| ಗ್ರಾಹಕರ ಸಭೆಯ ಹಾಗೂ ಸಹಕಾರ ಸಪ್ತಾಹದ ವೆಚ್ಚ | 1,50,000 | 1,75,937 | 25,937 | 2,00,000 |
| ಅಧ್ಯಯನ ಪ್ರವಾಸ | 60,000 | – | | 1,00,000 |
| ಉಪನಿಯಮದ ತಿದ್ದುಪಡಿ ಶುಲ್ಕ ಪಾವತಿ | – | 2,500 | 2,500 | 5,000 |
| ಚುನಾವಣಾ ವೆಚ್ಚ | – | – | – | 4,00,000 |
| ಕಛೇರಿ ಉಪಕರಣ,ಯುಪಿಎಸ್ ಬ್ಯಾಟರಿ (Buy Back) | – | 8,283 | – | – |
| **ಮೊತ್ತ (5)** | **30,92,000** | **29,01,318** | **2,51,421** | **40,17,000** |

| | | | | |
|---|---|---|---|---|
| 7. ಆಯವ್ಯಯೇತರ ಖರ್ಚು: | | | | |
| ಆದಾಯ ತೆರಿಗೆ ಮೇಲ್ಮನವಿ ಶುಲ್ಕ | | – | | 7,00,000 |
| ಆದಾಯ ತೆರಿಗೆ (ಹಿಂದಿನ ಸಾಲುಗಳದ್ದು) | 7,00,000 | – | | |
| ಅನರ್ಹ ಜಿಎಸ್‌ಟಿ ಮೊತ್ತ | – | 1,30,075 | | |
| ಕಾಯ್ದಿರಿಸಿದ ಲೆಕ್ಕಗಳು: ಸವಕಳಿ | | 4,39,649 | | |
| ಮೊತ್ತ (6) | 7,00,000 | 5,69,724 | | 7,00,000 |
| ಒಟ್ಟು ಖರ್ಚು (ಮೊತ್ತ (1) ರಿಂದ (7)ರವರೆಗೆ | 2,57,02,000 | 2,48,01,518 | | 2,80,92,000 |
| **ನಿವ್ವಳ ಲಾಭ** | **62,98,000** | **51,82,284** | | **1,09,08,000** |
| ಆದಾಯದ ವಿವರಗಳು | | | | |
| 1. ಸಾಲಗಳ ಮೇಲಿನ ಬಡ್ಡಿ | 2,50,00,000 | 2,13,73,337 | | 3,00,00,000 |
| ಮೊತ್ತ (1) | 2,50,00,000 | 2,13,73,337 | | 3,00,00,000 |
| 2. ಧನವಿನಿಯೋಗಗಳ ಮೇಲಿನ ಬಡ್ಡಿ: | 60,00,000 | 77,09,655 | | 80,00,000 |
| ಮೊತ್ತ (2) | 60,00,000 | 77,09,655 | | 80,00,000 |
| 3. ಇತರೆ ಆದಾಯಗಳು: | 10,00,000 | 8,83,861 | | 10,00,000 |
| ಮೊತ್ತ (3) | 10,00,000 | 8,83,861 | | 10,00,000 |
| 4. ಅಗಸ್ತ್ಯ ರಜತ ಮಹೋತ್ಸವದ ಜಮಾ: | – | 16,949 | | – |
| ಮೊತ್ತ (4) | – | 16,949 | | – |
| ಒಟ್ಟು ಲಾಭದ ಮೊತ್ತ (1) ರಿಂದ (4)ರವರೆಗೆ | 3,20,00,000 | 2,99,83,802 | | 3,90,00,000 |

| | | | | |
|---|---|---|---|---|
| ಬಂಡವಾಳ ಖರ್ಚುಗಳು (ಅಂದಾಜು) | | | | |
| ಗಣಕ ಯಂತ್ರ ನೂತನ ತಂತ್ರಾಂಶ ಮತ್ತು ಗಣಕ ಯಂತ್ರದ ಅಳವಡಿಕೆಗಾಗಿ | 500000 | – | | 5,00,000 |
| ಯುಪಿಎಸ್/ಜನರೇಟರ್ | – | 21,688 | | 1,00,000 |
| ಪೀಠೋಪಕರಣ ಮತ್ತು ಕಛೇರಿ ಉಪಕರಣ ಖರೀದಿಗಾಗಿ (ಪ್ರಧಾನ ಕಛೇರಿ ಮತ್ತು ಶಾಖಾ ಕಛೇರಿಗಾಗಿ) | 1,00,000 | 59,365 | | 1,00,000 |

**ಅ) ಪ್ರೋತ್ಸಾಹಧನ (ಎಲ್.ಆರ್.ಸಿ): ರೂ.7,660/–:**ವರದಿ ಸಾಲಿನಲ್ಲಿ ಸಾಲ ವಸೂಲಾತಿ ಸಿಬ್ಬಂದಿಯಲ್ಲದೇ ಎಲ್ಲಾ ಸಿಬ್ಬಂದಿ ವರ್ಗದವರು ಸಾಲ ವಸೂಲಾತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ವಸೂಲಾತಿ ಕ್ರಮ ಕೈಗೊಂಡಿರುವುದಕ್ಕೆ ಪಾವತಿಸಿದ ಬಾಬ್ತು.

**ಆ) ಪಿಗ್ಮಿ ಕಮಿಷನ್:30,918/–**ವರದಿ ಸಾಲಿನಲಿ ್ಲಪಿಗ್ಮಿ ಸಂಗ್ರಹ ಹೆಚ್ಚಾಗಿದ್ದು, ಪಿಗ್ಮಿ ಸಂಗ್ರಹಕಾರರಿಗೆ ನೀಡಿರುವ ಪಿಗ್ಮಿ ಕಮಿಷನ್ ಮೊತ್ತ ಆಯ–ವ್ಯಯದಲ್ಲಿ ಮಂಜೂರಾದ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ. (ಹಿಂದಿನ ವರ್ಷಕ್ಕೆ ಹೋಲಿಸಿದರೆ ಪಿಗ್ಮಿ ಕಮಿಷನ್ ಆದಾಯ ಸಹ ಹೆಚ್ಚಾಗಿರುತ್ತದೆ ಎಂದು ಸರ್ವಸದಸ್ಯರ ಗಮನಕ್ಕೆ ತರಲಾಗಿದೆ) ವಿವರ ಕೆಳಕಂಡಂತೆ :

| | | |
|---|---|---|
| **2021–22ನೇ ಸಾಲಿನ ಪಿಗ್ಮಿಕಮಿಷನ್ ಮೊತ್ತ –2,96,945/–** | **2022–23ನೇ ಸಾಲಿನ ಪಿಗ್ಮಿಕಮಿಷನ್ ಮೊತ್ತ – 3,55,915/–** | **ವ್ಯತ್ಯಾಸ – ಹೆಚ್ಚಾಗಿರುವ ಮೊತ್ತ– 59,273/–** |

ಇ) **ಮುದ್ರಣ ಮತ್ತು ಲೇಖನ ಸಾಮಗ್ರಿ:ರೂ.25,232/–**:ಮಾರುಕಟ್ಟೆಯಲ್ಲಿ ಮುದ್ರಣ ಮತ್ತು ಲೇಖನ ಸಾಮಗ್ರಿ ಬೆಲೆ ಗಣನೀಯವಾಗಿ ಹೆಚ್ಚಾಗಿರುವ ಕಾರಣ ಆಯ–ವ್ಯಯದಲ್ಲಿ ಮಂಜೂರಾದ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ.

ಈ) **ವಾರ್ಷಿಕೋತ್ಸವದ ವೆಚ್ಚ:ರೂ.23,425/–**:ಸಂಘದ ಪ್ರಧಾನಕಛೇರಿಯ ವಾರ್ಷಿಕೋತ್ಸವದ ಆಚರಣೆ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಿಗೆ ಸಹಕಾರ ಕ್ಷೇತ್ರದಲ್ಲಿನ ಪ್ರತಿಷ್ಟಿತ 'ಸಹಕಾರರತ್ನ' ಪ್ರಶಸ್ತಿಗೆ ಭಾಜನರಾದ ಅವರಿಗೆ ಸಂಘದ ಮತ್ತು ಸದಸ್ಯರ ವತಿಯಿಂದ ಅಭಿನಂದನಾ ಕಾರ್ಯಕ್ರಮವನ್ನು ಜರುಗಿಸಲಾಯಿತು. ಆದುದರಿಂದ ಆಯ–ವ್ಯಯದಲ್ಲಿ ಮಂಜೂರಾದ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ.

ಉ) **ಸರ್ವ ಸದಸ್ಯರ ಸಭೆಯ ವೆಚ್ಚರೂ.78,700/–**:ಹಿಂದಿನ ಸಾಲುಗಳಲ್ಲಿ ವರ್ಚುಯಲ್ ಸಭೆ ನಡೆಸಲಾಗಿದ್ದು ಖರ್ಚು ವೆಚ್ಚಗಳು ಕಡಿಮೆಯಾಗಿರುತ್ತದೆ. 2021–22 ರಲ್ಲಿ ನೇರವಾಗಿ ಸಭೆ ನಡೆಸಲಾಗಿದ್ದು, ಎಲ್ಲಾ ವಸ್ತುಗಳ ಬೆಲೆ ದುಬಾರಿಯಾಗಿರುವ ಕಾರಣದಿಂದ ಆಯ–ವ್ಯಯದಲ್ಲಿ ಮಂಜೂರಾದ ಮೊತ್ತಕ್ಕಿಂತ ಹೆಚ್ಚುವರಿಯಾಗಿರುತ್ತದೆ.

ಊ) **ವೃತ್ತಿ ಶುಲ್ಕ ರೂ.78,700/–**:20–21ರ ಜಿಎಸ್‌ಟಿ ವಾರ್ಷಿಕ ಫೈಲಿಂಗ್ ಛಾರ್ಜಸ್–10,000/– ಮತ್ತು ಮಾಹೆಯಾನ ಫೈಲಿಂಗ್‌ಛಾರ್ಜಸ್ 1500X12=18,000/– ಒಟ್ಟು 28,000/–ವರದಿ ವರ್ಷದಲ್ಲಿ(21–22ಕ್ಕೆ) ರೂ.28,000/– ಪಾವತಿಯಾಗಿರುವುದರಿಂದ ಹೆಚ್ಚುವರಿಯಾಗಿರುತ್ತದೆ.

ಋ) **ಸಾದಿಲ್ವಾರು ರೂ.7,299/–**:ಈ ಸಾದಿಲ್ವಾರು ವೆಚ್ಚದಲ್ಲಿ ಸಂಘಕ್ಕೆ ಅವಶ್ಯಕವಾದ ದಿನನಿತ್ಯದ ವಸ್ತುಗಳಾದ ಪೂಜಾ ಸಾಮಾಗ್ರಿ, ಕಾಫೀ/ಟೀ, ಅವುಗಳ ಬೆಲೆ ಏರಿಕೆಯಾಗಿದ್ದು, ಮಂಜೂರಾತಿಗಿಂತ ಹೆಚ್ಚುವರಿಯಾಗಿರುತ್ತದೆ.

ೠ) **ಕ್ಯಾಲೆಂಡರ್ ಮುದ್ರಣ ಬಾಬ್ತು ರೂ. 750/–**: ಬೆಲೆ ಏರಿಕೆಯಿಂದ ಹೆಚ್ಚುವರಿಯಾಗಿರುತ್ತದೆ.

ಎ) **ಗ್ರಾಹಕರ ಸಭೆಯ ಮತ್ತು ಸಹಕಾರ ಸಪ್ತಾಹದ ವೆಚ್ಚ ರೂ.25,937/–**: 69ನೇ ಅಖಿಲ ಸಹಕಾರ ಸಪ್ತಾಹದ ದೇಣಿಗೆ ರೂ.50,000/–ನೀಡಲಾಗಿರುತ್ತದೆ. ಸದರಿ ಸಮಾರಂಭದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿತ್ತಿರುವ ಸಂಘದ ಸದಸ್ಯರಿಗೆ, ರಾಜ್ಯ/ರಾಷ್ಟ್ರ ಪ್ರಶಸ್ತಿಗೆ ಭಾಜನರಾದ ಸಮುದಾಯದ ಪುರಸ್ಕೃತರಿಗೆ, ಸಹಕಾರಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ, ಹಿರಿಯ ನಾಗರೀಕ ಸದಸ್ಯರಿಗೆ ಹಾಗೂ ಇತರರಿಗೆ ಸನ್ಮಾನ ಮಾಡಿದ ಬಾಬ್ತು ಇದರಲ್ಲಿ ಸೇರಿರುವುದರಿಂದ ಹೆಚ್ಚುವರಿಯಾಗಿರುತ್ತದೆ.

ಏ) **ಉಪನಿಯಮದ ತಿದ್ದುಪಡಿ ಶುಲ್ಕ ರೂ.2,500/–**: ಉಪನಿಯಮದ ತಿದ್ದುಪಡಿಯ ಅನುಮೋದನೆಗೆ ನಿಯಮಾನುಸಾರ ಸರ್ಕಾರಕ್ಕೆ ಪಾವತಿಸಿದ ಶುಲ್ಕ.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಂತರ, ಸದಸ್ಯರುಗಳಾದ ಶ್ರೀ ಡಿ.ಎನ್.ಕೃಷ್ಣಮೂರ್ತಿ, ಶ್ರೀ ವಿ.ಹರೀಶ್, ಶ್ರೀ ಎಸ್.ಎಸ್. ಮೂರ್ತಿ, ಶ್ರೀ ವೆಂಕಟೇಶ್ ಕೌಶಿಕ್, ಶ್ರೀ ಎಸ್.ಎಸ್.ಮೂರ್ತಿ ಹಾಗೂ ಇತರ ಸದಸ್ಯರುಗಳು **2022–23ನೇ** ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಾಗಿ ಖರ್ಚಾಗಿರುವ ಮೊತ್ತಕ್ಕೆ ಅನುಮೋದನೆ ನೀಡಿದರು. ನಂತರ 2023–24ನೇ ಸಾಲಿನ ಆಯವ್ಯಯದ ಅಂದಾಜು ಮಂಜೂರಾತಿಯನ್ನು ಸರ್ವಾನುಮತದಿಂದ ನೀಡಲಾಯಿತು.

**14. ಸಹಕಾರ ಸಂಘಗಳ ಕಾಯಿದೆ ಕಲಂ 63(2)ರ ರೀತ್ಯ 2022–23ನೇ ಸಾಲಿನ ಸನ್ನದು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ:**

ನಿರ್ದೇಶಕರಾದ ಶ್ರೀ ಫಣಿರಾಜ್ ಎನ್.ರವರು ಈ ವಿಷಯವನ್ನು ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿದರು. ವಿವರ ಈ ಕೆಳಗಿನಂತೆ,

| ಕ್ರ.ಸಂ. | ವಿಷಯ | ವಿವರಣೆ |
|---|---|---|
| 10 | ಸಹಕಾರ ಸಂಘಗಳ ಕಾಯಿದೆ ಕಲಂ 63(2) ರೀತ್ಯ 2023–24ನೇ ಸಾಲಿಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ. | ಸಹಕಾರ ಸಂಘಗಳ ಕಾಯಿದೆ ಕಲಂ 63(2) ರೀತ್ಯ 2023–24ನೇ ಸಾಲಿಗೆ ಸನ್ನದು ಲೆಕ್ಕಿಗರಾದ **"ಶ್ರೀ ಅಕ್ಷಯ ಕೃಷ್ಣ"** ರವರನ್ನು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳಲು ಹಾಗೂ ಸಂಭಾವನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನೀಡುವ ಮಾರ್ಗಸೂಚಿಯಂತೆ ಪಾವತಿಸಲು ಸರ್ವ ಸದಸ್ಯರ ಸಭೆಯ ಅನುಮತಿಯನ್ನು ಕೇಳಿ ಕೊಳ್ಳುತ್ತೇವೆ. |

ಸಹಕಾರ ಸಂಘಗಳ ಕಾಯಿದೆ ಕಲಂ 63(2)ರ ರೀತ್ಯ 2022–23ನೇ ಸಾಲಿನ ಸನ್ನದು ಲೆಕ್ಕ ಪರಿಶೋಧಕರನ್ನಾಗಿ ಶ್ರೀ ಅಕ್ಷಯ ಕೃಷ್ಣರವನ್ನು ನೇಮಕ ಮಾಡಿಕೊಳ್ಳುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಗಿ, ಇದಕ್ಕೆ ಸಭೆಯಲ್ಲಿ ಸರ್ವಾನುಮತನಿಂದ ಅನುಮೋದನೆ ನೀಡಲಾಯಿತು.

**15. ಸಹಕಾರ ಸಂಘಗಳ ಕಾಯಿದೆ ಕಲಂ 58ರ ರೀತ್ಯ ರಾಷ್ಟ್ರೀಕೃತ ಹಾಗೂ ಇತರೇ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಲು ಮತ್ತು ಸಂಘದ ಠೇವಣಾತಿಗಳನ್ನು ಹೂಡಿಕೆ ಮಾಡಲು ಅನುಮೋದನೆ ನೀಡುವುದು:**

ನಿರ್ದೇಶಕರಾದ ಶ್ರೀ ಜಿ.ಎನ್. ಸತೀಶರವರು ಮಾತನಾಡಿ, ಸಹಕಾರ ಸಂಘಗಳ ಕಾಯಿದೆ ಕಲಂ 58ರ ರೀತ್ಯ ರಾಷ್ಟ್ರೀಕೃತ ಹಾಗೂ ಇತರೇ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಲು ಮತ್ತು ಸಂಘದ ಠೇವಣಾತಿಗಳನ್ನು ಹೂಡಿಕೆ ಮಾಡಲು ಅನುಮೋದನೆ ನೀಡುವಂತೆ ಕೋರಿದರು.

**ದಿನಾಂಕ 31/03/2023ಕ್ಕೆ ಇದ್ದಂತೆ ಬ್ಯಾಂಕ್ ಶಿಲ್ಕು**

| | |
|---|---|
| ಯೂಕೋ ಬ್ಯಾಂಕ್ ಚಾಲ್ತಿ ಖಾತೆ | 36,82,283.72 |
| ಬ್ಯಾಂಕ್ಆಫ್ಇಂಡಿಯಾ ಚಾಲ್ತಿ ಖಾತೆ | 2,03,130.71 |
| ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಚಾಲ್ತಿ ಖಾತೆ | 15,33,275.49 |
| ಎಸ್ ಬಿ ಐ, ವಿಜಯನಗರ ಉಳಿತಾಯ ಖಾತೆ | 2,93,501.51 |
| ಜಿ.ಸಿ. ಬ್ಯಾಂಕ್ ಉಳಿತಾಯ ಖಾತೆ | 1,33,308.85 |
| **ಒಟ್ಟು ಮೊತ್ತ** | **58,45,500.28** |

**ದಿನಾಂಕ 31/03/2023ಕ್ಕೆ ಇದ್ದಂತೆ ಹೂಡಿಕೆಗಳು**

| SL NO | BANK DETAILS | | AMOUNT |
|---|---|---|---|
| 1 | MDCC BANK LTD., | Reserve Fund | 1,83,25,838.24 |
| 2 | MDCC BANK LTD., | FD | 28,00,000.00 |
| 3 | MDCC BANK LTD., | Share | 10,000.00 |
| 4 | MYSORE MERCHANTS CO OPERATIVE BANK LTD., | FD | 3,81,88,302.00 |
| 5 | GRADUATE'S CO OPERATIVE BANK LTD., | FD | 4,89,507.00 |
| 6 | TUMKUR GRAIN MERCHANTS CO-OPERATIVE BANK LTD., MYSORE MAIN AND KUVEMPUNAGAR BRANCH | FD | 2,80,20,861.75 |
| 7 | UCO BANK | FD | 3,51,31,969.00 |
| 8 | THE NATIONAL CO-OPERATIVE BANK LTD., | FD | 1,42,,12,864.00 |
| | **TOTAL** | | **13,71,79,342.99** |

ಸದಸ್ಯರಾದ ಶ್ರೀ ಶ್ರೀನಿವಾಸ ಶರ್ಮಾರವರು ಮಾತನಾಡಿ ರಾಷ್ಟ್ರೀಕೃತ ಮತ್ತು ಷೇಡ್ಯೂಲ್ ಬ್ಯಾಂಕ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಲು ತಿಳಿಸಿದರು ಯಾವುದೇ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಬೇಡ ಎಂದು ತಿಳಿಸಿದರು. ಮುಂದುವರೆದು ಈಗ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಠೇವಣಿಗಳಿಗೆ ಅನುಮೋದನೆ ನೀಡಲಾಗುವುದಿಲ್ಲ ಅದಕ್ಕೆ ಕ್ರಮ ಅಗತ್ಯ ಎಂದು ತಿಳಿಸಿದರು. ಎಂ.ಡಿ.ಸಿ.ಸಿ. ಬ್ಯಾಂಕಿನಲ್ಲಿ ಇರುವ ಹಣವನ್ನು ಸಹ ಸಲಹೆ ಪಡೆದು ರಾಷ್ಟ್ರೀಕೃತ ಮತ್ತು ಷೇಡ್ಯೂಲ್ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ತಿಳಿಸಿದರು. ಅಧ್ಯಕ್ಷರು ತಮ್ಮ ಸಲಹೆ ಉತ್ತಮವಾಗಿದ್ದು, ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮಾರವರು ಶ್ರೀ ಚಂದ್ರಶೇಖರ್ ಹಾಗೂ ಶ್ರೀ ಡಿ.ಎನ್. ಕೃಷ್ಣಮೂರ್ತಿರವರು ಸೂಚಿಸುವುದರ ಮೂಲಕ ಅನುಮೋದನೆ ನೀಡಿದರು.

**16. ಸಂಘದ ಉಪನಿಯಮದ ತಿದ್ದುಪಡಿ ಬಗ್ಗೆ.**

ನಿರ್ದೇಶಕರಾದ ಶ್ರೀ ಕೆ.ನಾಗರಾಜರವರು ಮಾತನಾಡಿ ಸಹಕಾರ ಸಂಘಗಳ ಕಾಯಿದೆ ಮತ್ತು ಕಾನೂನಿನಲ್ಲಿ ಕಾಲ ಕಾಲಕ್ಕೆ ಆಗುವ ಬದಲಾವಣೆಗಳನ್ನು ಹಾಗೂ ಸಂಘದ ಅಭಿವೃದ್ಧಿಗಾಗಿ ಮತ್ತು ನಿರ್ದೇಶಕ ಮಂಡಲಿ ಸಭೆಯಲ್ಲಿ ಅಳವಡಿಸಿಕೊಂಡ ನಿಯಮಗಳನ್ನು ಸಂಘದ ಉಪನಿಯಮದಲ್ಲಿ ಅಳವಡಿಸಿಕೊಳ್ಳಲು ಉಪನಿಯಮದ ತಿದ್ದುಪಡಿಯನ್ನು ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆಗೆ ಮಂಡಿಸಲಾಗುತ್ತಿದ್ದು ಸದಸ್ಯರು ಅನುಮತಿ ನೀಡುವಂತೆ ತಿಳಿಸಿದರು. ಪುಟ ಸಂಖ್ಯೆ:34 ರಿಂದ 36ರವರೆಗೆ ವಿವರ ಈ ಕೆಳಗಿನಂತೆ:

**ಉಪನಿಯಮದ ತಿದ್ದುಪಡಿ**

| ಹಾಲಿ ಇರುವ ಉಪನಿಯಮಗಳು | ತಿದ್ದುಪಡಿಯಾದ ನಂತರ ಬದಲಾದ ಉಪನಿಯಮಗಳು | ಕಾರಣ |
|---|---|---|
| **ಅಧ್ಯಾಯ–2 ಉಪನಿಯಮದ ಸಂಖ್ಯೆ:** | **ಅಧ್ಯಾಯ–2 ಉಪನಿಯಮದ ಸಂಖ್ಯೆ:** | ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಿ |

| | | |
|---|---|---|
| 4.14 "ಸದಸ್ಯ" (ಮೆಂಬರ್): ಎಂದರೆ, ಸಂಘದ ನೋಂದಣಿಯ ಮೊದಲಿಗೆ ಷೇರು ನೀಡಿದ ವ್ಯಕ್ತಿ ಮತ್ತು ಸಂಘಕ್ಕೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿ ಅಥವಾ ನೋಂದಣಿ ಆದ ನಂತರ ಕಾಯಿದೆಯ, ನಿಯಮಗಳ ಮತ್ತು ಉಪನಿಯಮಗಳ ಪ್ರಕಾರ ಸಂಘದ ಕನಿಷ್ಟ ಒಂದು ಷೇರನ್ನಾದರೂ ಹೊಂದಿ ಸಾಮಾನ್ಯ ಸದಸ್ಯತ್ವ ಪಡೆದ ವ್ಯಕ್ತಿ ಮತ್ತು ಒಬ್ಬ ನಾಮಮಾತ್ರ ಸದಸ್ಯತ್ವ ಅಥವಾ ಸಹ ಸದಸ್ಯನನ್ನು ಕೂಡ ಒಳಗೊಂಡಿರುತ್ತದೆ.<br>ನಾಮಮಾತ್ರ ಸದಸ್ಯತ್ವವನ್ನು ಸೀಮಿತ ಅವಧಿಗೆ ಮಾತ್ರ ಪಡೆಯುವುದು. ನಿಯಮದಂತೆ ಅವಶ್ಯಕತೆ ಹಾಗೂ ಸೀಮಿತ ಅವಧಿಯ ಮುಕ್ತಾಯದ ನಂತರ ಮೊತ್ತವನ್ನು ಆಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು.<br>ಇದು (ಸಾಮಾನ್ಯ ಸದಸ್ಯರು, ಸಹ ಸದಸ್ಯರು, ನಾಮಮಾತ್ರ ಸದಸ್ಯರು) ಒಳಗೊಂಡಿರುತ್ತದೆ. | 4.14 "ಸದಸ್ಯ" (ಮೆಂಬರ್): ಎಂದರೆ, ಸಂಘದ ನೋಂದಣಿಯ ಮೊದಲಿಗೆ ಷೇರು ನೀಡಿದ ವ್ಯಕ್ತಿ ಮತ್ತು ಸಂಘಕ್ಕೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿ ಅಥವಾ ನೋಂದಣಿ ಆದ ನಂತರ ಕಾಯಿದೆಯ, ನಿಯಮಗಳ ಮತ್ತು ಉಪನಿಯಮಗಳ ಪ್ರಕಾರ ಸಂಘದ ಕನಿಷ್ಟ ಒಂದು ಷೇರನ್ನಾದರೂ ಹೊಂದಿ ಸದಸ್ಯತ್ವ ಪಡೆದ<br><br>**ಸಾಮಾನ್ಯ ಸದಸ್ಯ** – ಕಾರ್ಯವ್ಯಾಪ್ತಿಯಲ್ಲಿ ವಾಸವಿರುವ ವ್ಯಕ್ತಿ.<br>**ಸಹ ಸದಸ್ಯ** – ಕಾರ್ಯವ್ಯಾಪ್ತಿಯಲ್ಲಿ ವಾಸವಿರುವ ವ್ಯಕ್ತಿ, ಸಂಘದ ಕಾರ್ಯವ್ಯಾಪ್ತಿಯಲ್ಲಿ ನೊಂದಣಿಯಾದ ಸಂಘ ಸಂಸ್ಥೆಗಳು, ಸ್ವ-ಸಹಾಯ ಸಂಘಗಳು, ಮಾರ್ಕೆಟಿಂಗ್ ಕಮಿಟಿ, ಫರ್ಮ್, ಕಂಪನಿ, ಸಂಘ ಸಂಸ್ಥೆಗಳ ಅಡಿಯಲ್ಲಿ ನೊಂದಣಿಯಾಗಿರುವ ಸ್ಕೂಲ್, ದೇವಸ್ಥಾನ ಮುಂತಾದವುಗಳು.<br><br>**ನಾಮಮಾತ್ರ ಸದಸ್ಯ** — ಅವಶ್ಯಕತೆಗೆ ಅನುಸಾರವಾಗಿ ಸೀಮಿತ ಅವಧಿಗೆ ಮತ್ತು ಸೀಮಿತ ವ್ಯವಹಾರಕ್ಕಾಗಿ ಸೇರ್ಪಡೆ ಮಾಡಿಕೊಳ್ಳುವ ನಾಮಾಮಾತ್ರ ಷೇರು ನೀಡಿದ ವ್ಯಕ್ತಿ.<br>ನಾಮಮಾತ್ರ ಸದಸ್ಯನು ತನ್ನ ಅವಶ್ಯಕತೆಗೆ ಅನುಸಾರವಾಗಿ ನೋಂದಣಿಗೆ ಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಮತ್ತು ಉಪನಿಯಮಗಳ ಪ್ರಕಾರ ರೂ.200/- ಷೇರು ಮೌಲ್ಯವನ್ನು ಮೂರು ವರ್ಷಗಳ ಅವಧಿಯವರೆಗೆ ಹೊಂದಿರತಕ್ಕದ್ದು.<br>ಸಂಘದ ಸದಸ್ಯತ್ವವು ಸಾಮಾನ್ಯ ಸದಸ್ಯ, ಸಹ ಸದಸ್ಯ, ನಾಮಮಾತ್ರ ಸದಸ್ಯತ್ವವನ್ನು ಒಳಗೊಂಡಿರುತ್ತದೆ. | ಸೂಚಿಸಿರುವ ರೀತ್ಯ ಪದಗಳ ಅರ್ಥಗಳನ್ನು ಸರಿಪಡಿಸಿ, ಸಂಘದ ವ್ಯವಹಾರದ ಅನುಕೂಲಕ್ಕಾಗಿ ಆಡಳಿತ ಮಂಡಲಿಯಲ್ಲಿ ತೀರ್ಮಾನಿಸಿದಂತೆ ಸರ್ವಸದಸ್ಯರ ಸಭೆಯ ಅನುಮೋದನೆಗೆ<br><br>ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 16 (ಇ) ಗೆ ಅನುಗುಣವಾಗಿ ಈ ತಿದ್ದುಪಡಿ ತರಲಾಗಿದೆ.<br><br>ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 18ಕ್ಕೆ ಅನುಗುಣವಾಗಿ ಈ ತಿದ್ದುಪಡಿ ತರಲಾಗಿದೆ. |
| **ಅಧ್ಯಾಯ:5 ಉಪನಿಯಮದ ಸಂಖ್ಯೆ:**<br>11.**<u>ಷೇರುಗಳಿಗಾಗಿ ಅರ್ಜಿ :</u>** ಸಾಮಾನ್ಯ ಸದಸ್ಯತ್ವ, ಸಹಸದಸ್ಯತ್ವಕ್ಕೆ ನಿಗದಿಪಡಿಸಿದ ಷೇರು ಅರ್ಜಿಯನ್ನು ಲಿಖಿತ ಮೂಲಕ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು. ನಿರ್ದೇಶಕ ಮಂಡಲಿ ಸಭೆಯಲ್ಲಿ ಅನುಮೋದನೆಗೊಂಡ ಅಂತಹ ಅರ್ಜಿಯ ಸಹಿತ ಒಂದು ಷೇರಿನ ಪೂರ್ಣ ಮೌಲ್ಯ ರೂ. 1,000/- ಗಳೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.100-00ಗಳಂತೆ, ಪ್ರವೇಶ ಧನ ರೂ.100-00, ಮುದ್ರಣ ಮತ್ತು ಲೇಖನಿ ರೂ.100-00, ಸಾಂಧರ್ಭಿಕ ವೆಚ್ಚ(ಇನ್ಸಿಡೆಂಟಲ್ ಛಾರ್ಜಸ್) ರೂ.100-00 ಗಳಂತೆ ಮತ್ತು ಇದಕ್ಕೆ ತಗಲುವ ಶಾಸನಬದ್ಧವಾದ ಜಿಎಸ್‌ಟಿ ಮೊತ್ತ ಹಾಗೂ ಸಂಘದ ಕಟ್ಟಡ ಅಭಿವೃದ್ಧಿಗಾಗಿ | **ಅಧ್ಯಾಯ:5 ಉಪನಿಯಮದ ಸಂಖ್ಯೆ:**<br>11.**<u>ಷೇರುಗಳಿಗಾಗಿ ಅರ್ಜಿ :</u>** ಸಾಮಾನ್ಯ ಸದಸ್ಯತ್ವ, ಸಹಸದಸ್ಯತ್ವಕ್ಕೆ ನಿಗದಿಪಡಿಸಿದ ಷೇರು ಅರ್ಜಿಯನ್ನು ಲಿಖಿತ ಮೂಲಕ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು. ನಿರ್ದೇಶಕ ಮಂಡಲಿ ಸಭೆಯಲ್ಲಿ ಅನುಮೋದನೆಗೊಂಡ ಅಂತಹ ಅರ್ಜಿಗೆ ಒಂದು ಷೇರಿನ ಪೂರ್ಣ ಮೌಲ್ಯ ರೂ. 1,000/- ಗಳೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.100-00ಗಳಂತೆ, ಪ್ರವೇಶ ಧನ ರೂ.100-00, ಮುದ್ರಣ ಮತ್ತು ಲೇಖನಿ ರೂ.100-00, ಸಾಂಧರ್ಭಿಕ ವೆಚ್ಚ(ಇನ್ಸಿಡೆಂಟಲ್ ಛಾರ್ಜಸ್) ರೂ.100-00 ಗಳಂತೆ ಮತ್ತು ಇದಕ್ಕೆ ತಗಲುವ ಶಾಸನಬದ್ಧವಾದ | ಸಹಕಾರ ಸಂಘಗಳ ಕಾಯಿದೆ ಕಾನೂನಿನ ಅನ್ವಯ ತಿದ್ದುಪಡಿ ಮಾಡಿ 6 ತಿಂಗಳ ಒಳಗಾಗಿ ಷೇರು ಮೊತ್ತವನ್ನು ಪಾವತಿಸಿ ಸದಸ್ಯತ್ವ ಪಡೆಯತಕ್ಕದ್ದು ಎಂಬುದನ್ನು 2 ತಿಂಗಳ ಒಳಗಾಗಿ ಎಂದು ಸಹಕಾರ ಸಂಘಗಳ ನಿಯಮಾನುಸಾರ ತಿದ್ದುಪಡಿ ಮಾಡಿಕೊಂಡು ಆಡಳಿತ ಮಂಡಲಿಯ ನಿರ್ಣಯದಂತೆ ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಮಂಡಿಸಿದೆ. |

| | | |
|---|---|---|
| ರೂ.300/–ರಂತೆ ಅಗಸ್ತ್ಯ ಮೂಲ ಸೌಕರ್ಯ ಅಭಿವೃದ್ಧಿ ಖಾತೆಗೆ ಮೊತ್ತ ಸಂಗ್ರಹಿಸಲಾಗುವುದು.<br>ಮೇಲಿನ ವರ್ಗದ ಸದಸ್ಯರುಗಳು ಕಾಯಿದೆಗನುಗುಣವಾಗಿ 6 ತಿಂಗಳ ಒಳಗಾಗಿ ಷೇರು ಮೊತ್ತವನ್ನು ಪಾವತಿಸಿ ಸದಸ್ಯತ್ವವನ್ನು ಪಡೆಯತಕ್ಕದ್ದು.<br>ಷೇರು ಅಮಾನತ್ತಿನಲ್ಲಿ ಇರುವ ಸದಸ್ಯರುಗಳಿಗೆ ಸಂಘವು ಒದಗಿಸುವ ಸಾಲ, ಠೇವಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯಲು, ಲಾಭಾಂಶ ಪಡೆಯಲು, ಮತ ಚಲಾಯಿಸಲು ಮತ್ತು ಸರ್ವ ಸದಸ್ಯರ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.<br>ಷೇರು ಅಮಾನತ್ತಿನಲ್ಲಿರುವ ಖಾತೆದಾರರು ಲಿಖಿತ ಮನವಿ ಸಲ್ಲಿಸಿದ ನಂತರ ಪುನ: ಸದಸ್ಯತ್ವವನ್ನು ನೀಡುವಲ್ಲಿ ನಿರ್ದೇಶಕ ಮಂಡಲಿ ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.<br>ನಾಮಾಮಾತ್ರ ಸದಸ್ಯರು ಸದಸ್ಯತ್ವ ಪಡೆಯುವುದಕ್ಕಾಗಿ ರೂ.200/–ಗಳನ್ನು ಮಾತ್ರ ಪಾವತಿಸತಕ್ಕದ್ದು. | ಜಿಎಸ್‌ಟಿ ಮೊತ್ತ ಹಾಗೂ ಸಂಘದ ಕಟ್ಟಡ ಅಭಿವೃದ್ಧಿಗಾಗಿ ರೂ.300/–ರಂತೆ ಅಗಸ್ತ್ಯ ಮೂಲ ಸೌಕರ್ಯ ಅಭಿವೃದ್ಧಿ ಖಾತೆಗೆ ಮೊತ್ತ ಸಂಗ್ರಹಿಸಲಾಗುವುದು.<br>ಕಾಯಿದೆಗನುಗುಣವಾಗಿ ಮೇಲಿನ ವರ್ಗದ ಸದಸ್ಯತ್ವ ಅನುಮೋದನೆಗೊಂಡ ಸದಸ್ಯರುಗಳು ಸದಸ್ಯತ್ವ ಮಂಜೂರಾದ ದಿನಾಂಕದಿಂದ 2 ತಿಂಗಳ ಒಳಗಾಗಿ ಷೇರು ಮೊತ್ತವನ್ನು ಪಾವತಿಸಿ ಸದಸ್ಯತ್ವವನ್ನು ಪಡೆಯತಕ್ಕದ್ದು.<br>ಷೇರು ಸುಸ್ತಿಯಲ್ಲಿ ಇರುವ ಸದಸ್ಯರುಗಳಿಗೆ ಸಂಘವು ಒದಗಿಸುವ ಸಾಲ, ಠೇವಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯಲು, ಲಾಭಾಂಶ ಪಡೆಯಲು, ಮತ ಚಲಾಯಿಸಲು ಮತ್ತು ಸರ್ವ ಸದಸ್ಯರ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.<br>ಷೇರು ಸುಸ್ತಿಯಲ್ಲಿರುವ ಖಾತೆದಾರರು ಲಿಖಿತ ಮನವಿ ಸಲ್ಲಿಸಿದ ನಂತರ ಪುನ: ಸದಸ್ಯತ್ವವನ್ನು ನೀಡುವಲ್ಲಿ ನಿರ್ದೇಶಕ ಮಂಡಲಿ ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.<br>ನಾಮಾಮಾತ್ರ ಸದಸ್ಯರು ಸದಸ್ಯತ್ವ ಪಡೆಯುವುದಕ್ಕಾಗಿ ರೂ.200/–ಗಳನ್ನು ಮಾತ್ರ ಪಾವತಿಸತಕ್ಕದ್ದು. | |
| **ಅಧ್ಯಾಯ 19– ಉಪನಿಯಮದ ಸಂಖ್ಯೆ:108**<br>ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಿಗೊಳಪಟ್ಟು ಸಂಘದ ಉಪನಿಂಬಧನೆಗಳನ್ನು ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಮತದಾನ ಹಕ್ಕುಳ್ಳ ಸದಸ್ಯರ ಕನಿಷ್ಟ 2/3ರಷ್ಟು ಬಹುಮತ ಬಂದಲ್ಲಿ ತಿದ್ದುಪಡಿ ಮಾಡಬಹುದು. ಆದರೆ ಆ ತಿದ್ದುಪಡಿ ಸೂಚನಾ ಪತ್ರವನ್ನು ಸದಸ್ಯರಿಗೆ ಸಭೆಯ 20 ದಿನಗಳ ಮುಂಚಿತವಾಗಿ ಕೊಟ್ಟಿರಬೇಕು. ಉಪನಿಯಮಗಳ ಸೇರ್ಪಡೆಗಳು, ರದ್ಧತಿಗಳು ಮತ್ತು ತಿದ್ದುಪಡಿಗಳು ನಿಬಂಧಕರಿಂದ ನೋಂದಾವಣೆಯಾದ ಅಥವಾ ನಿಬಂಧಕರು ಸೂಚಿಸಿದ ದಿನದಿಂದ ಜಾರಿಯಲ್ಲಿ ಬರತಕ್ಕದ್ದು. | **ಅಧ್ಯಾಯ 19– ಉಪನಿಯಮದ ಸಂಖ್ಯೆ:108**<br>ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಿಗೊಳಪಟ್ಟು ಸಂಘದ ಉಪನಿಯಮಗಳನ್ನು ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಮತದಾನ ಹಕ್ಕುಳ್ಳ ಸದಸ್ಯರ ಕನಿಷ್ಟ 2/3ರಷ್ಟು ಬಹುಮತ ಬಂದಲ್ಲಿ ತಿದ್ದುಪಡಿ ಮಾಡಬಹುದು. ಆದರೆ ಆ ತಿದ್ದುಪಡಿ ಸೂಚನಾ ಪತ್ರವನ್ನು ಸದಸ್ಯರಿಗೆ ಸಭೆಯ 15 ದಿನಗಳ ಮುಂಚಿತವಾಗಿ ಕೊಟ್ಟಿರಬೇಕು. ಉಪನಿಯಮಗಳ ಸೇರ್ಪಡೆಗಳು, ರದ್ಧತಿಗಳು ಮತ್ತು ತಿದ್ದುಪಡಿಗಳು ನಿಬಂಧಕರಿಂದ ನೋಂದಾವಣೆಯಾದ ಅಥವಾ ನಿಬಂಧಕರು ಸೂಚಿಸಿದ ದಿನದಿಂದ ಜಾರಿಯಲ್ಲಿ ಬರತಕ್ಕದ್ದು. | ಸಹಕಾರ ಸಂಘಗಳ ಕಾಯಿದೆ ಕಾನೂನಿನ ಅನ್ವಯ ತಿದ್ದುಪಡಿ ಮಾಡಿ ಆಡಳಿತ ಮಂಡಲಿ ತೀರ್ಮಾನದಂತೆ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. |
| **ಅಧ್ಯಾಯ – 11 ಬೈಲಾ ಸಂಖ್ಯೆ – 66(ಬಿ) ಸಾಲ ಮತ್ತು ಮುಂಗಡಗಳು**<br>66 (ಬಿ) 1 ವಾಹನ ಸಾಲ: ದ್ವಿಚಕ್ರ ಮತ್ತು ನಾಲ್ಕುಚಕ್ರ ಹೊಸ ವಾಹನಗಳನ್ನು ಕೊಳ್ಳಲು ವಾಹನದ ಮೂಲಬೆಲೆಯ ಶೇಕಡ 80 ರಷ್ಟು ಹಾಗೂ ಗರಿಷ್ಟ ಮಿತಿ 15 ಲಕ್ಷಕ್ಕೆ ಮೀರದಂತೆ.<br>**<u>ಬಡ್ಡಿ ದರ:</u>** ಆಡಳಿತ ಮಂಡಲಿ ಕಾಲ ಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು<br>**<u>ಷರಾ:</u>** ವಾಹನವನ್ನು ಮುಟ್ಟುಗೋಲುಗೊಳಿಸಿ ಮಾರಾಟ | **ಅಧ್ಯಾಯ –11 ಬೈಲಾ ಸಂಖ್ಯೆ–66(ಬಿ) ಸಾಲ ಮತ್ತು ಮುಂಗಡಗಳು**<br>**66 (ಬಿ) 1 ವಾಹನ ಸಾಲ:** ದ್ವಿಚಕ್ರ ಮತ್ತು ನಾಲ್ಕುಚಕ್ರ ಹೊಸ ವಾಹನಗಳನ್ನು ಕೊಳ್ಳಲು ವಾಹನದ ಮೂಲಬೆಲೆ+ಇನ್ಶೂರೆನ್ಸ್+ತೆರಿಗೆ ಇವುಗಳನ್ನು ಸೇರಿಸಿ ಶೇಕಡ 75ರಷ್ಟು ಹಾಗೂ ಗರಿಷ್ಟ ಮಿತಿ 20 ಲಕ್ಷಕ್ಕೆ ಮೀರದಂತೆ.<br>**<u>ಬಡ್ಡಿ ದರ:</u>** ಆಡಳಿತ ಮಂಡಲಿ ಕಾಲ ಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು | ಆಡಳಿತ ಮಂಡಲಿ ತೀರ್ಮಾನದಂತೆ ಸಂಘದ ಅಭಿವೃದ್ಧಿಗಾಗಿ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸ ಲಾಗಿದೆ. |

| | | |
|---|---|---|
| ಮಾಡಿ ಬಂದ ಹಣವನ್ನು ಸಾಲದ ಖಾತೆಗೆ ಜಮಾ ತೆಗೆದುಕೊಳ್ಳುವ ಅಧಿಕಾರ ಸಂಘಕ್ಕೆ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರ ಇರುತ್ತದೆ. | **<u>ಷರಾ:</u>** ವಾಹನವನ್ನು ಮುಟ್ಟುಗೋಲು ಗೊಳಿಸಿ ಮಾರಾಟ ಮಾಡಿ ಬಂದ ಹಣವನ್ನು ಸಾಲದ ಖಾತೆಗೆ ಜಮಾ ತೆಗೆದುಕೊಳ್ಳುವ ಅಧಿಕಾರ ಸಂಘಕ್ಕೆ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರ ಇರುತ್ತದೆ. | |
| **66(ಬಿ) 7 ಚಿನ್ನದ ಮತ್ತು ಬೆಳ್ಳಿ ಸಾಲ:**<br>ಚಿನ್ನದ ಒಡವೆ ಮತ್ತು ಬೆಳ್ಳಿ ವಸ್ತುಗಳ ಒತ್ತೆಯ ಮೇಲೆ ಸಾಲ ಅಂದಾಜು ದರದ ಮೇಲೆ ಶೇಕಡ 80ಕ್ಕೂ ಮೀರದಷ್ಟು ಅಥವಾ ಗರಿಷ್ಟ ಮೊತ್ತ 18 ಲಕ್ಷಕ್ಕೆ ಮೀರದಂತೆ.<br>**<u>ಬಡ್ಡಿ ದರ</u>:** ಆಡಳಿತ ಮಂಡಲಿ ಕಾಲ ಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>**<u>ಷರಾ:</u>** ಈಡು ಮಾಡಿದ ಒಡವೆಗಳು ಮಾರುಕಟ್ಟೆ ಧಾರಣೆಗಿಂತ ಕಡಿಮೆ ಆದಲ್ಲಿ ಹೆಚ್ಚಿನ ಭದ್ರತೆ ಕೇಳಬಹುದು ಮತ್ತು ಅಗತ್ಯವಾದ ಕ್ರಮ ತೆಗೆದುಕೊಳ್ಳಲು ಸಂಘಕ್ಕೆ ಅಧಿಕಾರ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರ ಇರುತ್ತದೆ. | **66(ಬಿ) 7 ಚಿನ್ನ ಮತ್ತು ಬೆಳ್ಳಿ ಸಾಲ:**<br>ಚಿನ್ನ ಮತ್ತು ಬೆಳ್ಳಿ ವಸ್ತುಗಳ ಆಧಾರದ ಮೇಲೆ ಸಾಲ ಅಂದಾಜು ದರದ ಮೇಲೆ ಶೇಕಡ 85ಕ್ಕೂ ಮೀರದಷ್ಟು ಅಥವಾ ಗರಿಷ್ಟ ಮೊತ್ತ 20 ಲಕ್ಷಕ್ಕೆ ಮೀರದಂತೆ.<br>ಬೆಳ್ಳಿ ಪದಾರ್ಥಗಳ ಮೇಲೆ ಮೌಲ್ಯಮಾಪಕರು ನಿಗದಿಪಡಿಸಿದ ಮೊತ್ತದ ಶೇಕಡ 50ರಷ್ಟು ಅಥವಾ ಗರಿಷ್ಟ 2,00,000/-. ಈ ಮೊತ್ತವನ್ನು ಹಾಗೂ ಬೆಳ್ಳಿ ಆಧಾರ ಸಾಲವನ್ನು ಸಂಘದಲ್ಲಿ ಕಾಲ ಕಾಲಕ್ಕೆ ಸ್ಥಳಾವಕಾಶವನ್ನು ಗಮನಿಸಿ ನಿಗದಿಪಡಿಸಿ ನಿಲ್ಲಿಸಲು ಮತ್ತು ವಿತರಣೆ ಮಾಡುವ ಅಧಿಕಾರ ಆಡಳಿತ ಮಂಡಲಿಯವರಿಗೆ ಇರತಕ್ಕದ್ದು.<br>**<u>ಬಡ್ಡಿ ದರ:</u>** ಆಡಳಿತ ಮಂಡಲಿ ಕಾಲ ಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>**<u>ಷರಾ:</u>** ಆಧಾರ ಮಾಡಿದ ವಸ್ತುಗಳು ಮಾರುಕಟ್ಟೆ ಧಾರಣೆಗಿಂತ ಕಡಿಮೆ ಆದಲ್ಲಿ ಹೆಚ್ಚಿನ ಭದ್ರತೆ ಕೇಳಬಹುದು ಮತ್ತು ಅಗತ್ಯವಾದ ಕಾನೂನು ಕ್ರಮ ತೆಗೆದುಕೊಳ್ಳಲು ಸಂಘಕ್ಕೆ ಅಧಿಕಾರ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರವಿರುತ್ತದೆ. | ಆಡಳಿತ ಮಂಡಲಿ ತೀರ್ಮಾನದಂತೆ ಸಂಘದ ಅಭಿವೃದ್ಧಿಗಾಗಿ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸ ಲಾಗಿದೆ. |

ಸದಸ್ಯರಾದ ಶ್ರೀ ಶ್ರೀನಿವಾಸ ಶರ್ಮಾರವರು ಮಾತನಾಡಿ ತಿದ್ದುಪಡಿಗೆ ಮಂಡಿಸಿರುವ ಪುಟ ಸಂಖ್ಯೆ:34 ರಲ್ಲಿ ಸಹ ಸದಸ್ಯತ್ವದಲ್ಲಿ ಸ್ವ-ಸಹಾಯ ಸಂಘಗಳು ಹಾಗೂ ಮಾರ್ಕೆಟಿಂಗ್ ಕಮಿಟಿ, ಇವುಗಳನ್ನು ಕೈಬಿಡುವಂತೆ ಮತ್ತು ಜಿ.ಎಸ್.ಟಿ.ಯನ್ನು ಕಾಲಕಾಲಕ್ಕೆ ಪರಿಷ್ಕರಿಸುವಂತೆ ಅನ್ವಯವಾಗುತ್ತದೆ ಎಂದು ಮಾರ್ಪಾಟು ಮಾಡು ಕೊಳ್ಳುವಂತೆ ತಿಳಿಸಿದರು ಹಾಗೂ ಪುಟ ಸಂಖ್ಯೆ:36ರಲಿ ಚಿನ್ನದ ಮತ್ತು ಬೆಳ್ಳಿ ಸಾಲದ ಷರಾದಲ್ಲಿ ಮಾರುಕಟ್ಟೆ ಧಾರಣೆಗಿಂದ ಕಡಿಮೆ ಆದಲ್ಲಿ ಹೆಚ್ಚಿನ ಭದ್ರತೆ ಕೇಳಲಾಗುವುದು ಎಂದು ತಿದ್ದುಪಡಿ ಮಾಡಿಕೊಳ್ಳಲು ತಿಳಿಸಿದರು. ಈ ಬಗ್ಗೆ ಕಾನೂನು ರೀತ್ಯಾ ಕ್ರಮವಹಿಸುವುದಾಗಿ ಅಧ್ಯಕ್ಷರು ತಿಳಿಸಿದರು.

ಮೇಲ್ಕಂಡ ವಿಷಯಕ್ಕೆ ಸದಸ್ಯರಾದ ಶ್ರೀ ಶ್ರೀಕಂಠ, ಶ್ರೀ ಡಿ.ಎನ್. ಕೃಷ್ಣಮೂರ್ತಿ, ಶ್ರೀ ವಿಕ್ರಮ್ ಅಯ್ಯಂಗಾರ್, ಸೂಚಿಸುವುದರ ಮೂಲಕ ಹಾಗೂ ಸರ್ವಾನುಮತದಿಂದ ಅನುಮೋದನೆ ನೀಡಿದರು.

**17. ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸಂಘದಿಂದ ನೀಡಲಾದ ಸಾಲಗಳ ಬಾಕಿ, ಸುಸ್ತಿಬಾಕಿ ಯಾವುದಾದರೂ ಇದ್ದರೆ ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ:**

ಪ್ರಭಾರ ಕಾರ್ಯದರ್ಶಿಯವರು ಮಾತನಾಡಿ, ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸಂಘದಿಂದ ನೀಡಲಾದ ಸಾಲಗಳ ಬಾಕಿ, ಸುಸ್ತಿಬಾಕಿ ಯಾವುದೂ ಇಲ್ಲವೆಂದು ಪ್ರತಿ ನಿರ್ದೇಶಕ ಮಂಡಲಿ ಸಭೆಯಲ್ಲಿ ಮಾಹಿತಿ ನೀಡಲಾಗುತ್ತಿದೆ ಎಂದು ಸಭೆಗೆ ವಿವರ ನೀಡಿದರು. ಇದಕ್ಕೆ ಸರ್ವಾನುಮತದಿಂದ ಅನುಮೋದನೆ ನೀಡಿದರು.

**18. ಸದಸ್ಯರಿಂದ ಸ್ವೀಕೃತವಾದ ಸಲಹೆ/ಸೂಚನೆಗಳ ಪರಿಶೀಲನೆ:**

ಅಧ್ಯಕ್ಷರು, ಸದಸ್ಯರು ಸಂಘದ ಹಿತದೃಷ್ಟಿಯಿಂದ ಹಾಗೂ ಸದಸ್ಯರಗಳ ಹಿತದೃಷ್ಟಿಯಿಂದ ಸಲಹೆಗಳನ್ನು ನೀಡಬಹುದು ಎಂದು ಸಭೆಯಲ್ಲಿ ಕೇಳಲಾಗಿ, ಈಗಾಗಲೇ ಮೇಲೆ ಸೂಚಿಸಲಾದ ಸಲಹೆ/ಸೂಚನೆಗಳನ್ನು ಅನುಸರಿಸುವಂತೆ ಕೋರಿದರು.

**19. ಅಧ್ಯಕ್ಷರ ಅನುಮತಿಯೊಂದಿಗೆ ಬರಬಹುದಾದ ಇತರೆ ವಿಷಯಗಳು:**

ಯಾವುದೂ ಇರುವುದಿಲ್ಲ.

**20. ಅಧ್ಯಕ್ಷರ ಭಾಷಣ:**

ಅಧ್ಯಕ್ಷರು ಎಲ್ಲಾ ಸದಸ್ಯ ಭಾಂದವರು ಇದುವರೆಗೂ ಎಲ್ಲಾ ವಿಷಯಗಳಲ್ಲೂ ಭಾಗವಹಿಸಿ ಸದಸ್ಯರು ಸಂಘದ ಉನ್ನತಿಗಾಗಿ ಹಾಗೂ ಸದಸ್ಯರಗಳೆಲ್ಲರ ಹಿತದೃಷ್ಟಿಯಿಂದ ಸಾಕಷ್ಟು ಸಲಹೆಗಳನ್ನು ನೀಡಿರುತ್ತಾರೆ. ಈ ಎಲ್ಲವೂ ಸಂಸ್ಥೆಗೆ ಪೂರಕವಾಗಿದ್ದು, ಎಲ್ಲಾ ಸಲಹೆಗಳನ್ನು ಅಳವಡಿಸಿಕೊಂಡು ಸಂಘದ ಪ್ರಗತಿ ಬಗ್ಗೆ ಯೋಜನೆ ರೂಪಿಸಿಕೊಳ್ಳುವುದಾಗಿ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. ನಾವು ಸಂಘವು ಈಗಿರುವ 'ಬಿ' ಶ್ರೇಣಿಯಿಂದ 'ಎ' ಶ್ರೇಣಿಗೆ ತರಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು. ತಾವು ನೀಡಿರುವ ಸಮಾಧಾನಕರ ಸಲಹೆ ಸೂಚನೆಗಳು ಸಂಘದ ಅಭಿವೃದ್ಧಿಗೆ ಪೂರಕವಾಗಿದ್ದು, ಇದನ್ನು ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಈ ಐದು ಸಹಕಾರಿ ವರ್ಷದ ಕೊನೆಯ ವಾರ್ಷಿಕ ಸಭೆಯಾಗಿದ್ದು, ಯಾವುದೇ ಲೋಪದೋಷಗಳಿಗೆ ಅವಕಾಶವಾಗದಂತೆ, ಸಮಿತಿಯ ಉಪಾಧ್ಯಕ್ಷರು, ನಿರ್ದೇಶಕರುಗಳು, ಸಂಘದ ಸಿಬ್ಬಂದಿ ವರ್ಗದವರು ಹಾಗೂ ಸಂಘದ ಎಲ್ಲಾ ಸದಸ್ಯರುಗಳೂ ಒಳ್ಳೆಯ ಸಹಕಾರ ನೀಡಿರುವುದನ್ನು ಸ್ಮರಿಸುತ್ತಾ, ಕೆಲವು ಸಂದರ್ಭಗಳಲ್ಲಿ ಹಣಕಾಸಿನ ವಿಚಾರವಾಗಲೀ, ಆಡಳಿತಾತ್ಮಕ ವಿಚಾರಗಳಲ್ಲಿ, ದಿಟ್ಟ ಹೆಜ್ಜೆಗಳನ್ನಿಟ್ಟು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಅಲ್ಲದೆ ಚುನಾವಣೆ ನಡೆದ ಮೊದಲ ವರ್ಷದ ಸರ್ವಸದಸ್ಯರ ಸಭೆಯಲ್ಲಿ 87 ಲಕ್ಷ ಲಾಭಮಾಡಿರುವುದು ಹೆಮ್ಮೆಯ ವಿಷಯವಾಗಿರುತ್ತದೆ ಎಂದು ತಿಳಿಸಿದರು. 2020ರಲ್ಲಿ ಜರುಗಿದ ಸಂಘದ ಬೆಳ್ಳಿ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದ ಎಲ್ಲರಿಗೂ, ಅದರಲ್ಲೂ ಮುಖ್ಯವಾಗಿ ಮಹಿಳಾ ನಿರ್ದೇಶಕರು, ಸಿಬ್ಬಂದಿಗಳು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡು, ಅಚ್ಚುಕಟ್ಟಾಗಿ ಸಮಾರಂಭವನ್ನು ನಡೆಸಿಕೊಟ್ಟಿದ್ದಾರೆ. ಗುರುಗಳ ಹಾಗೂ ಹಿರಿಯರೆಲ್ಲರ ಆಶೀರ್ವಾದಗಳಿಂದ ಯಾವುದೇ ಲೋಪವಿಲ್ಲದೇ ಸರಿಯಾದ ವ್ಯವಸ್ಥೆಯೊಂದಿಗೆ ಉತ್ತಮ ರೀತಿಯಲ್ಲಿ ಸಮಾರಂಭ ಯಶಸ್ವಿಯಾಗಿ ನಡೆದಿದೆ, ಪ್ರತಿಯೊಬ್ಬರಿಗೂ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದರು.


ಅಧ್ಯಕ್ಷರು ಮುಂದುವರೆದು ಮಾತನಾಡಿ, ಸಂಘದ ಉತ್ತಮ ಆಡಳಿತದೊಂದಿಗೆ ಸದಸ್ಯರೆಲ್ಲರ ಸಹಕಾರದಿಂದಾಗಿ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಗೊಳ್ಳುತ್ತಿರುವ ಸಂಘವನ್ನು ಹೀಗೇ ಮುಂದುವರೆಸಿಕೊಂಡು ಹೋಗಲು ಎಲ್ಲರೂ ಸಹಕರಿಸಬೇಕೆಂದು ಕೋರುತ್ತಾ, ಸದಸ್ಯರುಗಳು ಸಭೆಯಲ್ಲಿ ನೀಡಲಾದ ಸಲಹೆ ಸೂಚನೆಗಳನ್ನು ಪರಿಗಣಿಸಿ, ಸಂಘದ ಹಿತದೃಷ್ಟಿ ಹಾಗೂ ಸದಸ್ಯರ ಒಳಿತನ್ನು ಗಮನದಲ್ಲಿಟ್ಟುಕೊಂಡು ಕ್ರಮ ವಹಿಸಲು ಇನ್ನಷ್ಟು ಶ್ರಮಿಸುವುದಾಗಿ ಸಭೆಯಲ್ಲಿ ತಿಳಿಸಿದರು. ಸದಸ್ಯರ ಅಭಿಪ್ರಾಯದಂತೆ ಮಂಗಳವಾರ ಸಂಘಕ್ಕೆ ರಜೆ ಘೋಷಿಸಲಾಯಿತು. ಎಲ್ಲರಿಗೂ ಅನಂತಾನಂತ ಧನ್ಯವಾದಗಳು ಎಂದು ತಿಳಿಸಿದರು.

**21. ವಂದನಾರ್ಪಣೆ:**

ಶ್ರೀ ಎನ್.ಎಸ್.ರಂಗನಾಥ್‌ರವರು ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಯವರು, ಎಲ್ಲ ನಿರ್ದೇಶಕರು, ಹಾಜರಿರುವ ಎಲ್ಲ ಸದಸ್ಯರುಗಳಿಗೂ ವಕೀಲರು, ಆಂತರಿಕ ಲೆಕ್ಕ ಪರಿಶೋಧಕರು, ಸಿಬ್ಬಂದಿ ವರ್ಗದವರೆಲ್ಲರಿಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹಾಗೂ ಇಂದಿನ ಕಾರ್ಯಕ್ರಮಕ್ಕೆ ಸ್ಥಳಾವಕಾಶ ನೀಡಿದ, ಮೈಕ್ ಒದಗಿಸಿದ ಎಲ್ಲರಿಗೂ ವಂದನೆಯನ್ನು ಸಲ್ಲಿಸಿದರು.

**22. ರಾಷ್ಟ್ರಗೀತೆಯೊಂದಿಗೆ ಸಭೆಯ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಲಾಯಿತು.**

ಎಸ್.ಪ್ರಶಾಂತ್ ತಾತಾಚಾರ್‌ರವರು ಸಭೆಯ ಗಮನಕ್ಕೆ ತಂದರು.





ಪ್ರಭಾರ ಕಾರ್ಯದರ್ಶಿ

ಅಧ್ಯಕ್ಷರು